

ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ


(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

ಪಾಜಕ, 89/24, 3ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-19. ದೂರವಾಣಿ : (080) 26602802; 26611011

**ಸಂಪಾದಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೫ ಸಂಚಿಕೆ –೬ ಶ್ರೀನಂದನ(ಶ್ರಾವಣ–ಅಧಿಕ ಭಾದ್ರಪದ) ಆಗಸ್ಟ್ ೨೦೧೨


## ಶ್ರೀವ್ಯಾಸಸೂಕ್ತಿ

**ಗುರೂಪದೇಶಃ ಪ್ರತಿಮಾ ಸದ್ವಿಚಾರಃ ಸಮೋ ಮನಃ ।**
**ಕ್ರಿಯಾ ಚ ಜ್ಞಾನಸಹಿತಾ ಮೋಕ್ಷಸಿದ್ಧೇರ್ಹಿ ಲಕ್ಷಣಮ್ ॥**

–ಸ್ಕಂದಪುರಾಣ(೬/೨೬೩/೩೮)

ಗುರುಗಳ ಹಿತನುಡಿ, ಪೂಜೆಗೆ ಪ್ರತಿಮೆ, ಸದ್ವಿಚಾರ, ಮನಸ್ಸಿನ ಸಮತೋಲನ, ಜ್ಞಾನಪೂರ್ವಕವಾದ ಕರ್ಮಾಚರಣೆ – ಇವು ಮೋಕ್ಷಸಿದ್ಧಿಗೆ ಸಾಧನಗಳು.

## ಶ್ರೀಮಧ್ವಸೂಕ್ತಿ

**ಯತ್ರ ಯತ್ರ ಯಥಾ ವೃತ್ತಿರ್ವಿಹಿತಾ ವರ್ತನಂ ತಥಾ ।**
**ಜ್ಞಾನಂ ವಾಽಪಿ ಸಮತ್ವಂ ತದ್ವಿಷಮತ್ವಮತೋಽನ್ಯಥಾ ॥**

–ಗೀತಾತಾತ್ಪರ್ಯ(ಮಹಾವಿಷ್ಣುಪುರಾಣ)೬/೯

ವ್ಯಕ್ತಿಗಳನ್ನು ಅವರವರ ಯೋಗ್ಯತೆಗೆ ಅನುಗುಣವಾಗಿ ತಿಳಿಯುವುದು ಹಾಗೂ ಅದರಂತೆ ನಡೆದುಕೊಳ್ಳುವುದು ಸಮತ್ವ ಎನ್ನಿಸುವುದು. ಅದಕ್ಕೆ ವಿರುದ್ಧವಾದುದು ವಿಷಮತ್ವ.

# ವಿಷಯಾನುಕ್ರಮಣಿಕೆ


| | | | |
|---|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | | ೧ |
| ೨. | ಹರಿದಾಸರ ಸೂಕ್ತಿರತ್ನಗಳು | - ಶ್ರೀಪುರಂದರದಾಸರ ಸೂಕ್ತಿರತ್ನಗಳು | ೩ |
| ೩. | ಗಾಯತ್ರೀಭಾಷ್ಯರೂಪಃ ಅಸೌ - ೪೧ : | - ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು | ೪ |
| ೪. | ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೪ : | - ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು | ೬ |
| ೫. | ಕಾಮಧೇನು | - ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು | ೧೦ |
| ೬. | ಸಂಪಾದಕೀಯ - ವೃದ್ಧಾಶ್ರಮದತ್ತ ಸಾಗುತ್ತಿರುವ ಹಿರಿಯರು | | ೧೧ |
| ೭. | ಪ್ರಣಾಮದ ಅನುಸಂಧಾನ | -ಪಂ.ಶ್ರೀಸಗ್ರಿರಾಘವೇಂದ್ರ ಉಪಾಧ್ಯಾಯ | ೧೪ |
| ೮. | ಗ್ರಹಣವಿಚಾರ (ಪ್ರತಿಕ್ರಿಯೆ) | - ಶ್ರೀಶ್ರೀವಿಶ್ವನಂದನತೀರ್ಥರು | ೧೭ |
| ೯. | ಶ್ರೀಮದಾಚಾರ್ಯರ ಕಾಲನಿರ್ಣಯದಲ್ಲಿ ಸೂರ್ಯಗ್ರಹಣದ ಪಾತ್ರ (ಮರುಪ್ರತಿಕ್ರಿಯೆ) | - ಜಯಂತ ವ್ಯಾಸನಕೆರೆ | ೨೩ |
| ೧೦. | ಶ್ರೀಮದಾಚಾರ್ಯರ ಅವತಾರಕಾಲ ಕ್ರಿ.ಶ. 1200 - ಮತ್ತೊಂದು ಪುರಾವೆ ! | -ವಿಪ್ರ | ೩೧ |
| ೧೧. | ನಾಗಮಂಗಲದ ಸೌಮ್ಯಕೇಶವ ದೇವಸ್ಥಾನದ ಬಗ್ಗೆ ಮತ್ತಷ್ಟು ಮಾಹಿತಿ | - ಶ್ರೀ ಎನ್.ಎಸ್ ವ್ಯಾಸರಾಜರಾವ್, ಬೆಂಗಳೂರು | ೩೪ |
| ೧೨. | ಅಧಿಕಮಾಸ ನಿಮಿತ್ತ ಲೇಖನ | - ವಿಪ್ರ | ೩೫ |
| ೧೩. | ಪುರುಷೋತ್ತಮ - ಹೃಷೀಕೇಶರೂಪಗಳ ವಿವರ | - ವಿಪ್ರ | ೩೯ |
| ೧೫. | ಶ್ರೀಕನಕದಾಸರ ಹರಿಭಕ್ತಿಸಾರ | - ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೪೨ |
| ೧೬. | ಮಾಸದ ವಿಶೇಷಗಳು | | ೪೪ |


*****

---

## ಚಂದಾ ವಿವರ

ಆಜೀವಚಂದಾ : ರೂ ೫೦೦೦

ಪಂಚವಾರ್ಷಿಕ ಚಂದಾ : ರೂ. ೫೦೦; ಬಿಡಿ ಪ್ರತಿ : ರೂ. ೧೦

ವಿ.ಸೂ.:-

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವ ಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀಪುರಂದರದಾಸರ ಸೂಕ್ತಿರತ್ನಗಳು

ಹರೇ ಗೋವಿಂದಾ ಎಂದೇಳು ಹತ್ತಾವತಾರವ ಪೇಳು
ಮೂಡಲದೆಸೆಗೆ ನಡೆ ಗೋವಿಪ್ರತುಳಸಿಗೆರಗು
ಬಂದು ನೈಋತ್ಯದಲ್ಲಿ ತೃಣವಿಟ್ಟು ಶೌಚಮಾಡು
ಗುರುಪರಂಪರಾಯೆಲ್ಲವಂದು ಪುರಂದರವಿಠಲ ಎನ್ನು ॥

******

ಪ್ರಾತಃಕಾಲದ ನಿದ್ರೆ ಪರಿಹರಿಸಿ ಹರಿಯ ಸ್ಮರಿಸಿ
ನಾಥ ಗೋವಿಂದಗೆ ಪ್ರದಕ್ಷಿಣೆ ಮಾಡಿ
ಪ್ರೀತಿಯೊಳತಿಥಿಪೂಜೆಗೈದು ಪುರಾಣಶಾಸ್ತ್ರವ ಕೇಳಿ
ನಾಥ ಶ್ರೀಪುರಂದರವಿಠಲಗೆ ನಮೋ ಎನ್ನಿ॥

******

ಹತ್ತೈದು ಘಳಿಗೆಯ ಮೇಲೆ ಮತ್ತೈದು ಬರಲೆದ್ದು
ಚಿತ್ತಜನಯ್ಯನನ್ನು ಚಿತ್ತದಿ ಧ್ಯಾನಿಸಿ
ಅತ್ತ ಉದಯಕ್ಕೆ ಘಳಿಗಿ ಎರಡಿರುವಲ್ಲಿ ಎದ್ದು
ನಿತ್ಯ ಸ್ನಾನ ಮಾಡಿ ಆದಿತ್ಯಗರ್ಘ್ಯವನೀಯೆ
ಉತ್ತಮಜನಕೆಲ್ಲ ಮೆತ್ತಿದ್ದ ಪಾಪಗಳನ್ನು
ಉತ್ತರಿಸುವೆನೆಂದ ಪುರಂದರವಿಠಲ ॥

******

# ಗಾಯತ್ರೀಭಾಷ್ಯರೂಪಃ ಅಸೌ - ೪೧

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**
**ಪಲಿಮಾರು ಮಠ, ಉಡುಪಿ.**

### ಸವಿತಾ - ಚತುರ್ಥಸ್ಕಂಧ

ಯಜ್ಞವನ್ನು, ಯಜ್ಞಮಾಡಿದವನನ್ನು ರಕ್ಷಿಸಿದ ಭಗವಂತನಿಗೆ ಸವಿತಾ ಎಂದು ಹೆಸರು. ಸವಿತಾ ಎಂಬ ಪದದಲ್ಲಿ ಚತುರ್ಥಸ್ಕಂಧದ ಜಿಜ್ಞಾಸೆಯ ಮನನ ನಡೆಯುತ್ತಿದೆ. ವೇನನ ಕಥೆ ಮುಗಿದಿದೆ. ಅವನ ಮಗನಾದ ಪೃಥುವಿನ ಕಥೆ ಆರಂಭವಾಗಿದೆ.

ವೇನನ ಅಂಗಗಳ ಮಥನದಿಂದ ಉದ್ಭವಿಸಿದವ ಪೃಥು ಚಕ್ರವರ್ತಿ. ಸಮಸ್ತರಾಜ-ಕುಲಕ್ಕೇ ಆದರ್ಶಪ್ರಾಯನಾಗಿ ಮೆರೆದವ. ಪೃಥುಚಕ್ರವರ್ತಿ ಪ್ರಾಚೀಸರಸ್ವತೀನದಿಯ ತೀರದಲ್ಲಿ ಶತಾಶ್ವಮೇಧಗಳನ್ನು ನಡೆಸಲು ಸಂಕಲ್ಪಿಸಿದ. ಮನುಕ್ಷೇತ್ರವೆನಿಸಿದ ಬ್ರಹ್ಮಾವರ್ತದಲ್ಲಿ ಪೃಥು ಯಜ್ಞದೀಕ್ಷಿತನಾದ. ಯಜ್ಞಸಂಕಲ್ಪಿಸಿದವನೇ ೯೯ ಯಾಗಗಳನ್ನು ಮಾಡಿಯೂ ಮುಗಿಸಿದ. ಆದರೆ ಶತಕ್ರತು ಅವನ ಕೈಯಿಂದ ಮಾಡಲಾಗಲಿಲ್ಲ. ನೂರನೇ ಯಜ್ಞ ಅರ್ಧಕ್ಕೇ ನಿಂತಿತು. ಶತಕ್ರತು(ಇಂದ್ರ)ವೇ ವಿಘ್ನಕಾರಿಯಾದ. ಆದ್ದರಿಂದಲೇ ಕ್ರತು ಶತಕ್ರತು ಎನಿಸಲಿಲ್ಲ. ಬೇರೆ ಬೇರೆ ರೂಪದಿಂದ ಪ್ರಚ್ಛನ್ನನಾಗಿ ಅಶ್ವಾಪಹಾರ ಮಾಡಿದ. ಶತಾಯಗತಾಯ ಅಶ್ವ ಹಿಂದಿರುಗಿ ಬಂದು ಮುಟ್ಟುವುದರೊಳಗೆ ಮತ್ತೆ ಯಜ್ಞಾಶ್ವ ಅದೃಶ್ಯವಾಯಿತು. ಆಕ್ರೋಶಭರಿತರಾಗಿ ಪೃಥುಮಹಾರಾಜರು ಬಿಲ್ಲೆತ್ತಿ ಬಾಣ ಜೋಡಿಸಿ ಇಂದ್ರನನ್ನೇ ವಧಿಸಲು ಹೊರಟರು. ಋತ್ವಿಜರೆಲ್ಲರೂ ರೋಧಿಸಿದರು. ''ನಿನ್ನಂತಹ ಧರ್ಮಾಧಿಕಾರಿ ರಾಜನಿಂದ ಇಂತಹ ಕೆಲಸ ನಡೆಯಬಾರದು''. ಯಜ್ಞ ಒಗ್ಗಟ್ಟನ್ನು ತರಬೇಕೇ ಹೊರತು, ಬಿಕ್ಕಟ್ಟನ್ನು ತರಬಾರದೆಂದರು. ಕೊನೆಗೆ ಬ್ರಹ್ಮದೇವರೇ ಬಂದು ಪೃಥುವಿನ ಅಶ್ವಮೇಧಯಾಗವನ್ನು ಅರ್ಧದಲ್ಲಿಯೇ ನಿಲ್ಲಿಸಲು ಸೂಚನೆಯಿತ್ತರು. ಯಾಗ ಅರ್ಧದಲ್ಲಿಯೇ ನಿಂತಿತು. ಅರ್ಧಕ್ಕೇ ನಿಂತ ಯಾಗದ ಫಲ ಹೇಗೋ ಏನೋ? ಯಾಗಗಳನ್ನು ಮಾಡಿದ ಪೃಥುಚಕ್ರವರ್ತಿಯನ್ನು ಭಗವಂತ ಏಕೆ ರಕ್ಷಿಸಲಿಲ್ಲ? ಹಾಗಾಗಿ ಭಗವಂತ ''ಸವಿತಾ'' ಹೇಗಾಗುತ್ತಾನೆ? - ಈ ಎಲ್ಲಾ ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ.

**'ಯಜ್ಞೈಃ ಯಜ್ಞಪತಿಃ ತುಷ್ಟಃ ಯಜ್ಞಭೃತ್ ತಂ ಅಭ್ಯಭಾಷತ್'**

ಪೃಥುವನ್ನು ತಡೆದದ್ದು ಯಾರು? ನಮ್ಮ ನಿಮ್ಮಂತಹ ಸಾಮಾನ್ಯರಲ್ಲ. ಇಂದ್ರನಿಂದಲೂ ಯಜ್ಞವನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಯಜ್ಞಪರಿಕರಗಳನ್ನಷ್ಟೇ ನಾಶಗೊಳಿಸಿದ್ದ. ಆದರೆ ಸಾಕ್ಷಾತ್ ಜೀವೋತ್ತಮರಾದ ಚತುರ್ಮುಖಬ್ರಹ್ಮದೇವರೇ ಬಂದು ಪೃಥುಚಕ್ರವರ್ತಿಗೆ ಅಪ್ಪಣೆ ಕೊಡಿಸಿದ್ದು. ಅಂದರೆ ವಿಧಿಯೇ ನೇರವಾಗಿ ಮೂರ್ತಿಮತ್ತಾಗಿ ಸನ್ನಿಹಿತವಾಗಿ ಬಂದು ಇದನ್ನು ವಿಧಿಸಿದೆ ಎಂದರೆ ಎಂತಹ ಸೌಭಾಗ್ಯ ಪೃಥುಚಕ್ರವರ್ತಿಯದ್ದು.

ದೇವತೆಗಳೆಲ್ಲರೂ ಚರ್ಮದ ಚಕ್ಷುಸ್ಸಿಗೆ ಗೋಚರವಾಗುವವರೇ ಅಲ್ಲ. ''**ಪರೋಕ್ಷ-ಪ್ರಿಯಾ ವೈ ದೇವಾಃ**''. ಕಣ್ಣಿಗೆ ಮೀರಿದ ಅತೀಂದ್ರಿಯಶಕ್ತಿಯ ಚತುರ್ಮುಖಬ್ರಹ್ಮದೇವರು ಸ್ವತಃ ದರ್ಶನಕೊಟ್ಟದ್ದು - ಆರ್ಷವಾಣಿಯನ್ನು ಕೇಳಿಸಿದ್ದು. ಇವೆಲ್ಲ ಪೃಥುವಿನ ಮೇಲಾದ ದೇವರ ಅಪಾರಕಾರುಣ್ಯ. ಯಾಗದ ಸಮಾಪ್ತಿಯೇ ಯಾಗದ ಉದ್ದೇಶವಾಗಿರಬಾರದು. ಪೃಥುವಿನ ಉದ್ದೇಶವೂ ಅದಲ್ಲ. ದೇವರ ದರ್ಶನ, ದೇವರ ಅನುಗ್ರಹವೇ ಮುಖ್ಯ ಉದ್ದೇಶವಾಗಿರಬೇಕು. ಪೃಥುವಿನದ್ದೂ ಇದೇ. ''ಕರ್ಮಣಾ ಜ್ಞಾನಮಾತನೋತಿ''. ದೇವರ ಜ್ಞಾನವೇ ಕರ್ಮದ ಫಲ. ಯಾಗರೂಪದ ಸತ್ಕರ್ಮಕ್ಕೆ ದೇವರೇ ಬಂದು ಪೃಥುವಿಗೆ ದರ್ಶನವಿತ್ತ.

''**ಯಜ್ಞೈಃ ಯಜ್ಞಪತಿಃ ತುಷ್ಟಃ ಯಜ್ಞಭೃತ್ ತಂ ಅಭ್ಯಭಾಷತ್**'' ಎಂದರೆ ಯಜ್ಞವನ್ನು ಪಾಲಿಸುವ ಭಗವಂತನೇ ಯಜ್ಞಪತಿ. ಯಜ್ಞವನ್ನು ಪೋಷಿಸುವ ಭಗವಂತನೇ ಯಜ್ಞಭೃತ್. ವಿಷ್ಣುಸಹಸ್ರನಾಮವಂತೂ ಭಗವಂತನನ್ನು ''**ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ**'' ಎಂದು ಸ್ತುತಿಸಿದ್ದುಂಟು. ಹೀಗೆ ಪೃಥುವಿನ ನೂರು ಯಜ್ಞಗಳಿಂದ ಯಜ್ಞಪತಿಯೇ ತುಷ್ಟನಾದನೆಂದರೆ ಯಜ್ಞ ಫಲಿಸಲಿಲ್ಲವೆಂದು ಹೇಳುವುದಾದರೂ ಹೇಗೆ?

ಯಜ್ಞವೆಂದರೆ ದೇವರ ನಾಮ. ಯಜ್ಞಕ್ಕೆ ಇನ್ನೊಂದು ನಾಮ 'ಸವ'. ಇವೆರಡೂ ದೇವರ ನಾಮವೇ. ಸಹಸ್ರನಾಮವಂತೂ '**ಏಕೋ ನೈಕಃ ಸವಃ ಕಃ ಕಿಮ್**' ಎಂದು ಹೇಳಿದೆ. ಯಜ್ಞದಲ್ಲಿ-ಯಜ್ಞಾಂಗಗಳಲ್ಲೆಲ್ಲಾ ನೆಲೆ ನಿಂತ ಭಗವಂತನೇ ''ಸವ''. ಸವ ಉಳ್ಳವ ಸ. ಸ ಎಂದರೆ ಭಗವಂತನ ಶೇಷ ಸನ್ನಿಧಾನವುಳ್ಳ ಪೃಥು. ಪೃಥುನಲ್ಲಿ ದೇವರ ರಾಜರಾಜೇಶ್ವರ ಎಂಬ ವಿಭೂತಿರೂಪವಿದೆ. ಹಾಗಾಗಿ ಭಗವಂತನ ವಿಭೂತಿರೂಪವುಳ್ಳ ಪೃಥುಚಕ್ರವರ್ತಿ-ಯನ್ನು ರಕ್ಷಿಸಿದ ಅಪೂರ್ವ ಬಣ್ಣನೆ ಇದೆ ಇಲ್ಲಿ.

ಅದಕ್ಕೆಂದೇ ಸವ+ಸ+ತೃಃ.

ಸವನ ವಿಶೇಷ ಸನ್ನಿಧಾನವುಳ್ಳ ಪೃಥುವನ್ನು ರಕ್ಷಿಸಿದ್ದರಿಂದ 'ಸವಿತಾ' ಎಂಬ ನಾಮ ಸಾರ್ಥಕ. ಹಾಗಾಗಿ ಯಜ್ಞಮಾಡಿದವನನ್ನು ರಕ್ಷಿಸಲಿಲ್ಲ ಎಂಬ ಅಪವಾದ ಭಗವಂತನಿಗಿಲ್ಲ.

******

## ರಕ್ಷಾಪುಟ - ೧ರ ಬಗ್ಗೆ

ಭಾವಬೋಧಕಾರರೆಂದೇ ಪ್ರಸಿದ್ಧರಾಗಿರುವ ಶ್ರೀರಘೂತ್ತಮತೀರ್ಥರು ಅಲ್ಲಲ್ಲಿ ದೇವತಾಪ್ರತಿಷ್ಠಾಪನೆಗಳನ್ನು ಮಾಡಿರುವರು ; ಪ್ರಸ್ತುತ ರಕ್ಷಾಪುಟದ ಶ್ರೀಲಕ್ಷ್ಮೀ-ನಾರಾಯಣದೇವರು ತಿರುಕಾಂಬೂರು(ಚಿಂತಲವಾಡಿ ಹತ್ತಿರ) ಅವರೇ ಪ್ರತಿಷ್ಠಾಪಿಸಿರುವ ವಿಶಿಷ್ಟ ಮೂರ್ತಿ. ಶ್ರೀರಂಗಕ್ಷೇತ್ರದಲ್ಲಿ ಇವರು ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು, ಅದು ಅವರು ಭಾವಬೋಧಕೃತಿಯನ್ನು ರಚಿಸಿದ ಸ್ಥಳ ಎಂದು ಪ್ರತೀತಿ. ವಿವರಗಳಿಗೆ ನಮ್ಮ ಪ್ರಕಾಶನದ 'ಶ್ರೀರಘೂತ್ತಮತೀರ್ಥರು' ಕೃತಿಯನ್ನು ನೋಡಬಹುದು.

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೪

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು
ಭಂಡಾರಕೇರಿಮಠ

## ಶಕಟಾಸುರಭಂಜನಃ

ಪಾರ್ವತೀವರೇಣ ಅವಧ್ಯಂ ಕಂಸಭೃತ್ಯಂ ಶಕಟಸ್ಯ ಅಧಸ್ತಾತ್ ಶಯಾನಂ ಸ್ವಾತ್ಮಾನಂ ನಿಹಂತುಂ ಶಕಟಂ ಪ್ರಷ್ಟಂ ಶಕಟಾಸುರಂ ಪಾದತಲೇನ ಆಕ್ಷಿಪ್ಯ ವ್ಯತ್ಯಸ್ತಚಕ್ರಾಕ್ಷೇಣ ಭಗ್ನಕೂಬರೇಣ ಶಕಟೇನ ಸಾಕಂ ಪಾತುತ್ವಾ ವ್ಯತೀತೇ ಚತುರ್ಥಮಾಸೇ ನಿಷ್ಕ್ರಾಮಣೋ-ತ್ಸವಕಾಲೇ ಭನಕ್ತಿ = ಮರ್ದಯತೀತಿ ಶಕಟಾಸುರಭಂಜನಃ ಇತಿ ಭಗವಾನ್ ಶ್ರೀಕೃಷ್ಣಃ ಕೀರ್ತಿತಃ । ಶಕಟಂ ಅಸುರಶ್ಚ ಶಕಟಾಸುರೌ, ತೌ ಭನಕ್ತೀತಿ ಶಕಟಾಸುರಭಂಜನ ಇತಿ ಗ್ರಹೋತ್ರ ಸ್ವೀಕರ್ತವ್ಯಃ । ತಥಾಚೋಕ್ತಂ ಮಹಾಭಾರತತಾತ್ಪರ್ಯನಿರ್ಣಯೇ ದ್ವಾದಶೇಽಧ್ಯಾಯೇ –

**ಯದಾಽಽಪ ದೇವಶ್ಚತುರಃ ಸ ಮಾಸಾಂಸ್ತದೋಪನಿಷ್ಕ್ರಾಮಣಮಸ್ಯ ಚಾಸೀತ್ ।**
**ಜನ್ಮರ್ಕ್ಷಮಸ್ಮಿನ್ ದಿನ ಏವ ಚಾಸೀತ್ ಪ್ರಾತಃ ಕಿಂಚಿತ್ ತತ್ರ ಮಹೋತ್ಸವೋಽಭೂತ್ ॥**
**ತದಾ ಶಯಾನಃ ಶಕಟಸ್ಯ ಸೋಽಧಃ ಪದಾಽಕ್ಷಿಪತ್ ತಂ ದಿತಿಜಂ ನಿಹಂತುಮ್ ।**
**ಅನಃ ಸಮಾಶ್ರಿತ್ಯ ದಿತೇಃ ಸುತೋಽಸೌ ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ ॥**
**ಕ್ಷಿಪ್ತೋಽನಸಿಸ್ಥಃ ಶಕಟಾಕ್ಷನಾಮಾ ಸ ವಿಷ್ಣುನೇತ್ಥಾಸಹಿತಃ ಪಪಾತ ।**
**ಮಮಾರ ಚಾಶು ಪ್ರತಿಭಗ್ನಗಾತ್ರೋ ವ್ಯತ್ಯಸ್ತಚಕ್ರಾಕ್ಷಮಭೂದನಶ್ಚ ॥**

ಇತಿ (೧೨.೮೯-೯೧) ।

**ಪುರಾ ಧುನಿಶ್ಚಮಸ್ತಥಾಽಽಪಿ ಪೂತನಾಸಮನ್ವಿತೌ ।**
**ಅನೋಕ್ಷಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ ।**
**ತಯಾ ವರೋಽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ॥**

ಇತಿ ತ್ರಯೋದಶೇಽಧ್ಯಾಯೇ । (೧೩.೨೦)

ಪಾರ್ವತೀವರೇಣ ಅವಧ್ಯಸ್ಯಾಪಿ ಶಕಟಾಸುರಸ್ಯ ಸಂಹಾರೇಣ ಸ್ವಸ್ಯ ಪಾರ್ವತೀ-ವರೋಲ್ಲಂಘನಶಕ್ತಿಂ ಪ್ರದರ್ಶ್ಯ 'ಪಾರ್ವತಿಶಕ್ತಿರೇವ ಸರ್ವೋತ್ತಮಾ, ಸೈವ ಸೃಷ್ಟ್ಯಾದಿ-ಕರ್ತ್ರೀ' ಇತಿ ಶಾಕ್ತಮತಂ ಭಗವತಾ ಶ್ರೀಕೃಷ್ಣೇನ ನಿರಸ್ತುತಿ ವೇದಿತವ್ಯಮ್ । ತಥಾ ಚ ಸೂತ್ರಮ್ ''ಉತ್ಪತ್ತ್ಯಸಂಭವಾತ್'' ಇತಿ ಶಕ್ತಿ(ಪಾರ್ವತೀ)ದತ್ತವರಸ್ಯ ಅವಧ್ಯತ್ವರೂಪ-ಫಲೋತ್ಪತ್ತ್ಯಸಂಭವಾತ್ ಫಲವರಪ್ರದತ್ವರೂಪದೋಷಾತ್ ಸಾ ನೈವ ಸರ್ವೋತ್ತಮಾ ಇತ್ಯಪ್ಯಸ್ಯ ಸೂತ್ರಸ್ಯ ಅರ್ಥಃ । ತಸ್ಮಾತ್ ಶಾಕ್ತಮತಂ ನ ಸಮಂಜಸಂ ಇತಿ ಶಕಟಾಸುರಸಂಹಾರೇಣ ಸೂಚಿತಮ್ ।

ಅಥವಾ, ಶಕಟಾಸುರಭಂಜನಪದೇನ ತಮಃ ಸೃಷ್ಟ್ವಾ ಶಕಟಪದ್ಮಚಕ್ರವ್ಯೂಹೇಷು ಜಯದ್ರಥಸ್ಯ ರಕ್ಷಕಾಣಾಂ ದ್ರೌಣ್ಯಾದೀನಾಂ ಸೂರ್ಯಾಸ್ತಮಯಭ್ರಾಂತಿಂ ಸಮುತ್ಪಾದ್ಯ ವಿಶ್ರಾಂತೇಷು ತೇಷು ಅರಕ್ಷಿತಸ್ಯ ತಸ್ಯ ಜಯದ್ರಥಸ್ಯ ಅರ್ಜುನಮುಖೇನ ಹಂತಾ ಭಗವಾನ್ ಶ್ರೀಕೃಷ್ಣಃ ಕೀರ್ತಿತಃ। ಅತ್ರ ಶಕಟಪದೇನ ಶಕಟಾಕಾರವ್ಯೂಹಃ ಕಥ್ಯತೇ। ಉಪ-ಲಕ್ಷಣಮೇತತ್ । ತದಂತಃ ದ್ರೋಣೇನ ವ್ಯವಸ್ಥಾಪಿತೌ ಪದ್ಮಾಕಾರಚಕ್ರಾಕಾರವ್ಯೂಹಾವಪಿ ಗ್ರಾಹ್ಯೌ।

ಏವಂ ಚ ಶಕಟೇನ = ಮಹಾಭಾರತಸಂಗ್ರಾಮೇ ಅಭಿಮನ್ಯುವಧನಿಮಿತ್ತಸ್ಯ ಜಯದ್ರಥಸ್ಯ ವಧೇ ಅರ್ಜುನೇನ ಪ್ರತಿಜ್ಞಾತೇ, ತಚ್ಛ್ರುತ್ವಾ ಭೀತೇನ ದುರ್ಯೋಧನೇನ ದ್ರೋಣೇ ಸಂರಕ್ಷಣಾರ್ಥಂ ಪ್ರಾರ್ಥಿತೇ ಸತಿ, ತೇನ ಚ ತದ್ರಕ್ಷಣೇ ಪ್ರತಿಜ್ಞಾತೇ ಚ ಸತಿ, ತದರ್ಥಂ ತೇನ ವ್ಯವಸ್ಥಾಪಿತಶಕಟ-ಪದ್ಮ-ಚಕ್ರಾಖ್ಯವ್ಯೂಹತ್ರಯೇಣ ಅಸುಂ = ಸ್ವಪ್ರಾಣಂ ರಮಯತೀತಿ - ಪುಷ್ಣಾತೀತಿ ಶಕಟಾಸುರಃ ಜಯದ್ರಥಃ । ದ್ರೋಣದ್ರೌಣ್ಯಾದಿಭಿಃ ಸುರಕ್ಷಿತಂ ತಂ ಊರ್ಜಿತಂ ತಮಃ ಸೃಷ್ಟ್ವಾ ತದ್ರಕ್ಷಣೇ ಯತ್ತಾನಾಂ ದ್ರೌಣ್ಯಾದೀನಾಂ ಸೂರ್ಯಾಸ್ತಮಯಭ್ರಾಂತಿಂ ನಿಷ್ಪಾದ್ಯ ತೇನ ನಿಮಿತ್ತೇನ ವಿಶ್ರಮಣಂ ತೇಷು ಪ್ರಾಪ್ತೇಷು ಅರಕ್ಷಿತಂ ಸಂತಂ ಅರ್ಜುನಮುಖೇನ ಭನಕ್ತಿ - ಮರ್ದಯತೀತಿ ಶಕಟಾಸುರ-ಭಂಜನಪದೇನ ಭಗವಾನ್ ಶ್ರೀಕೃಷ್ಣಃ ಸಾರ್ಥಂ ಕೀರ್ತಿತಃ। ತಥಾಚೋಕ್ತಮ್ -

**ಸತ್ಯಂ ವಃ ಪ್ರತಿಜಾನಾಮಿ ಶ್ವೋಽಸ್ಮಿ ಹಂತಾ ಜಯದ್ರಥಮ್।**
**ಯದ್ಯಸ್ಮಿನ್ನಹತೇ ಪಾಪೇ ಸೂರ್ಯೋಽಸ್ತಮುಪಯಾಸ್ಯತಿ।**
**ಇಹೈವ ಸಂಪ್ರವೇಷ್ಟಾಹಂ ಜ್ವಲಿತಂ ಜಾತವೇದಸಮ್ ॥ ಇತಿ ಮಹಾಭಾರತೇ।**

**ಶ್ರುತ್ವಾ ಪ್ರತಿಜ್ಞಾಂ ಪುರುಹೂತಸೂನೋರ್ದುರ್ಯೋಧನೇನಾರ್ಥಿತಃ ಸಿಂಧುರಾಜಮ್।**
**ತ್ರಾತಾಽಸ್ಮ್ಯಹಂ ಸರ್ವಥೇತಿ ಪ್ರತಿಜ್ಞಾಂ ಕೃತ್ವಾ ದ್ರೋಣವ್ಯೂಹಮಭೇದ್ಯಮಾತನೋತ್।**
**ಸದಿವ್ಯಮಗ್ರ್ಯಂ ಶಕಟಾಬ್ಜಚಕ್ರಂ ಕೃತ್ವಾ ಸ್ವಯಂ ವ್ಯೂಹಮುಖೇ ವ್ಯವಸ್ಥಿತಃ।**
**ಪೃಷ್ಠೇ ಕರ್ಣದ್ರೋಣಕೃಪೈಃ ಸಶಲ್ಯೈರ್ಜಯದ್ರಥಂ ಗುಪ್ತಮಧಾತ್ ಪರೈಶ್ಚ॥**

**ಇತಿ ತಾತ್ಪರ್ಯನಿರ್ಣಯೇ ಷಡ್ವಿಂಶೋಽಧ್ಯಾಯೇ।**

**ತದ್ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ।**
**ಅಜಿತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ।**
**ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್।**
**ತಮೋವ್ಯಾಪ್ತೇ ಗಗನೇ ಸೂರ್ಯಮಸ್ತಂಗತಂ ಮತ್ವಾ ದ್ರೌಣಿಪೂರ್ವಾಃ ಸಮಸ್ತಾಃ।**
**ವಿಶಶ್ರಮುಃ ಸೈಂಧವಶ್ಚಾರ್ಜುನಸ್ಯ ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ।**
**ತದಾ ಹರೇರಾಜ್ಞಯಾ ಶಕ್ರಸೂನುಶ್ಚಕರ್ತ ಬಾಣೇನ ಜಯದ್ರಥಸ್ಯ।**
**ಅಗ್ನಿಂ ವಿವಿಕ್ಷನ್ನಿವ ದರ್ಶಿತಃ ಶಿರಸ್ತದಾ ವಚಃ ಪ್ರಾಹ ಜನಾರ್ದನಸ್ತಮ್ ॥**

**ಇತಿ ತಾತ್ಪರ್ಯನಿರ್ಣಯೇ ಷಡ್ವಿಂಶೋಽಧ್ಯಾಯೇ।**

ಅಥವಾ, ಶಕಟಾಸುರಭಂಜನ ಇತಿ ಪದೇನ ಭೀಮಮುಖೇನ ಬಕಾಸುರಸ್ಯ ಹಂತಾ ಭಗವಾನ್ ಶ್ರೀಕೃಷ್ಣೋ ನಿಗದ್ಯತೇ । ತಥಾ – ಅತ್ರ ಶಕಟಾಸುರಪದೇನ ಬಕಾಸುರೋ ನಿಗದ್ಯತೇ । ಶಕಟೇನ = ವೃಷಭದ್ವಯಸಂಯುಕ್ತೇನ ನರಯುಕ್ತೇನ ಅನ್ನಪೂರ್ಣೇನ ಏಕಚಕ್ರನಗರಸ್ಥೈಃ ಪರ್ಯಾಯೇಣ ದತ್ತೇನ ಶಕಟೇನ ಅಸುಂ = ಸ್ವಪ್ರಾಣಂ ರಮಯತಿ = ಪುಷ್ಣಾತೀತಿ ಶಕಟಾಸುರಃ ಬಕಃ । ತಂ ಶಕಟಾಸುರಶಬ್ದಿತಂ ಭೀಮಮುಖೇನ ಭನಕ್ತಿ ಇತಿ ಶಕಟಾಸುರಭಂಜನ ಇತಿ ಭಗವಾನ್ ಶ್ರೀಕೃಷ್ಣಃ ಸಾಧು ಕೀರ್ತಿತಃ। ಬಲಪಾರ್ಥಭೀಮಾದಿಸ್ಥೈಃ ತತ್ತನ್ನಾಮವಾಚ್ಯೈಃ ಸ್ವರೂಪೈಃ ಭಗವಾನ್ ಶ್ರೀಕೃಷ್ಣಃ ಭೂಭಾರಭೂತಾನ್ ಅಸುರಾದೀನ್ ಸಂಹರತೀತಿ ಭಾಗವತೇ ದ್ವಿತೀಯೇ ಸಪ್ತಮೇ ಉಕ್ತಮ್ –

**ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ**
**ಕಾಂಬೋಜಮತ್ಸ್ಯಕುರುಸೃಂಜಯಕೈಕಯಾರ್ಣಾಃ।**
**ಅನ್ಯೇಽಪಿ ಸಾಲ್ವಕಪಿವಲ್ಕಲದಂತವಕ್ರಸಪ್ರೋಕ್ಷ –**
**ಶಂಬರವಿಡೂರಥ ರುಗ್ಮಿಮುಖ್ಯಾಃ।**
**ಯಾಸ್ಯಂತ್ಯದರ್ಶನಮಿತಾ ಬಲಪಾರ್ಥಭೀಮ–**
**ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥ ಇತಿ।**

ಅಥವಾ ಶಕಟಾಸುರಭಂಜನ ಇತಿ ಪದೇನ (ಭೂಭಾರ)ಭಂಜನೀಕೃತವೃಕೋದರಃ (ಬಹುವ್ರೀಹಿಃ) ಭಗವಾನ್ ಶ್ರೀಕೃಷ್ಣೋ ನಿಗದ್ಯತೇ । ತಥಾಹಿ – ''ಭೂಭಾರಹರಣೇ ವಿಷ್ಣೋಃ ಪ್ರಧಾನಂಗಂ ಹಿ ಮಾರುತಿಃ'' ಇತ್ಯುಕ್ತದಿಶಾ ಭಗವಾನ್ ಶ್ರೀಕೃಷ್ಣಃ ಉಪನಿಷದಿ ಸರ್ವದೇವತಾಭಂಜನತ್ವೇನ ''ಸಂವರ್ಗ'' ಇತಿ ಸ್ತುತಸ್ಯ ಮುಖ್ಯವಾಯೋರವತಾರಭೂತಂ ಭೀಮಮೇವ ಬಲಕಾರ್ಯಸ್ಯ ಪ್ರಧಾನಾಂಗತ್ವಾತ್ ದುರ್ಯೋಧನಬಕಕೀಚಕಕಿರ್ಮೀರ ಜಟಾಸುರಡಿಂಬಜರಾಸಂಧಾದಿಮಹಾಸುರಭಂಜನತ್ವೇನ ಕೃತವಾನ್ ಕಿಲ । ತಸ್ಮಾದು–ಕ್ತಾರ್ಥೇ ಇದಂ ಪದಂ ತಸ್ಮಿನ್ ಸಾಧು ಸಂಗಚ್ಛತೇ। ಅತ್ರ ವೃಕೋದರಾದಿಪದಂ ವಿಹಾಯ ಶಕಟಾಸುರಪದೇನ ಭೀಮಸ್ಯ ಗ್ರಹಣಂ ತು ಸರ್ವದೇವತಾಭಂಜನತ್ವೇನ ಸಂವರ್ಗ–ದ್ಯಾಯಾಂ ಪ್ರತಿಪಾದಿತಸ್ಯ ''ಸಂವರ್ಗ'' ಇತಿ ಕೀರ್ತಿತಸ್ಯ ಮುಖ್ಯವಾಯೋಃ ಅವತಾರತ್ವ–ಸೂಚನಾಮುಖೇನ ಮಹಾಸುರಭಂಜನಶಕ್ತಿದ್ಯೋತನಾರ್ಥಮಿತಿ ಮಂತವ್ಯಮ್ । ಶಕಟಾಸುರಪದೇನ ಭೀಮಸ್ಯ ಗ್ರಹಣೇ ತಸ್ಯ ವಾಯೋಃ ಅವತಾರತ್ವಂ ಸೂಚಿತಂ ಭವತಿ। ತಥಾ – ರಾಜಾ ಪೌತ್ರಾಯಣಃ ಸಾರಥಿಮುಖೇನ ಕ್ವಚಿತ್ಪ್ರದೇಶೇ ಶಕಟಸ್ಯ ಅಧಸ್ತಾತ್ ಉಪವಿಷ್ಟಂ ಜ್ಞಾನಿನಂ ರೈಕ್ವಂ ಜ್ಞಾತ್ವಾ ತಸ್ಮಾತ್ ವಿದ್ಯಾಂ ಪ್ರಾಪ್ತುಕಾಮಃ ತಮುಪೇತ್ಯ ಗೋನಿಷ್ಕ–ಅಶ್ವತರೀರಥಾ(ಶಕಟಾ)ದಿಕಂ ದಕ್ಷಿಣಾತ್ವೇನ ದಾತುಂ ಪ್ರವೃತ್ತಃ। ತದಾ ರೈಕ್ವಃ ಅಸಂತೃಪ್ತಃ ಗೋಸಹಿತಂ ಹಾರಸಹಿತಂ ಅಶ್ವತರೀರಥಾಖ್ಯಂ ಶಕಟಂ ''ಹಾರೇತ್ವಾ ಶೂದ್ರ ತವೈವ ಸಹ ಗೋಭಿರಸ್ತು'' ಇತಿ ನಿರಾಕೃತವಾನ್ । ತಥಾಚ ಪೌತ್ರಾಯಣದತ್ತಂ ಶಕಟಂ ಅಸ್ಯತಿ (ಅಸು ಕ್ಷೇಪಣೇ ಧಾತೋಃ ತಾಚ್ಛೀಲ್ಯಾರ್ಥೇ ''ಉ'' ಪ್ರತ್ಯಯಃ) – ನಿರಸ್ಯತಿ –

ನಿರಾಕರೋತಿ ಇತಿ ಶಕಟಾಸುಃ ರೈಕ್ವಃ । ಅತ್ರ ನಿರಾಸಾರ್ಥಕ 'ಅಸು ಕ್ಷೇಪಣೇ' ಧಾತೋಃ ತಾಚ್ಛೀಲ್ಯಾರ್ಥೇ ''ಉ''ಪ್ರತ್ಯಯೇ ಸತಿ ಅಸುಃ ಇತಿ ರೂಪಂ ಸಿದ್ಧ್ಯತಿ । ಪೌತ್ರಾಯಣದತ್ತಸ್ಯ ಕನ್ಯಾರಹಿತಸ್ಯ ಶಕಟಾದಿಕಸ್ಯ ಅತೃಪ್ತ್ಯಾ ನಿರಾಕರಣಂ ಸಕಲಕಲ್ಪಸ್ಥಿತರೈಕ್ವಾಣಾಂ ಸ್ವಭಾವಃ (ಶೀಲಂ) ಇತಿ ದ್ಯೋತನಾರ್ಥಂ ತಾಚ್ಛೀಲ್ಯಾರ್ಥೇ ''ಉ'' ಪ್ರತ್ಯಯ ಇತಿ ವೇದಿತವ್ಯಮ್ । ತಂ ಶಕಟಾಸುಶಬ್ದಿತಂ ರೈಕ್ವಂ ತದುಪಾಸಿತಸಂವರ್ಗವಿದ್ಯಾವಿಷಯತ್ವೇನ ರಮಯತೀತಿ ಶಕಟಾಸುರಃ ಸಂವರ್ಗವಿದ್ಯಾಪ್ರತಿಪಾದ್ಯಃ ವಾಯುದೇವಃ । ವಾಯುದೇವಸ್ಯ ರೈಕ್ವಾಧಿೀತಸಂವರ್ಗವಿದ್ಯಾಪ್ರತಿಪಾದ್ಯತ್ವಂ ರೈಕ್ವರಂಜಕತ್ವಂ ಚ ಅಧೋನಿರ್ದಿಷ್ಟ-ಪ್ರಮಾಣವಚನಾಭ್ಯಾಂ ಸಿದ್ಧ್ಯತಃ –

> **''ರಾಜಾ ಪೌತ್ರಾಯಣಃ ಶೋಕಾಚ್ಛೂದ್ರೇತಿ ಮುನಿನೋದಿತಃ ।**
> **ಪ್ರಾಣವಿದ್ಯಾಮವಾಪ್ಯಾಸ್ಮಾತ್ ಪರಂ ಧರ್ಮಮವಾಪ್ತವಾನ್ ॥ ಇತಿ ಪಾದ್ಮೇ ।**
>
> **ಸಂವೃಕ್ತೇ ಸರ್ವದೇವಾನ್ ಯದ್ವಾಯುಃ ಸಂವರ್ಗ ಈರಿತಃ ।**
> **ಮಹಿಮಾऽಸ್ಯ ಮಹಾನೇಷ ಯದನಾದ್ಯೋತ್ತಿ ದೇವತಾಃ ॥ ಇತಿ ಪ್ರಭಂಜನೇ ।**

ಅತ್ರ ರೈಕ್ವಾತ್ ಪ್ರಾಪ್ತಸಂವರ್ಗಶಬ್ದಿತವಾಯುವಿದ್ಯಯಾ ಪೌತ್ರಾಯಣಸ್ಯಾಪಿ ಯದಾ ಮಹಾಧರ್ಮಪ್ರಾಪ್ತಿಸ್ತದಾ ತದ್ವಿದ್ಯೋಪದೇಶಕಸ್ಯ ರೈಕ್ವಸ್ಯ ತದ್ಧರ್ಮಸಿದ್ಧಿರಸ್ತೀತಿ ಕಿಮು ವಕ್ತವ್ಯಮ್ ।

ಏವಂ ಚ ರೈಕ್ವೋಪಾಸಿತಸಂವರ್ಗವಿದ್ಯಾವಿಷಯತ್ವೇನ ತಸ್ಯ ಮಹಾಧರ್ಮಾದಿ-ಪ್ರಾಪ್ತಿಪ್ರಯೋಜಕತ್ವಾತ್, ಪೌತ್ರಾಯಣದತ್ತಕನ್ಯಾನಿಷ್ಕಶಕಟಾದಿಪ್ರಾಪ್ತಿಪ್ರಯೋಜಕತ್ವಾಚ್ಚ ವಾಯುದೇವಸ್ಯ ರೈಕ್ವರಂಜಕತ್ವಂ ಸಿದ್ಧಮ್ । ತಸ್ಮಾತ್ ಉಕ್ತಾರ್ಥೇ ಶಕಟಾಸುಶಬ್ದಿತಂ ರೈಕ್ವಂ ರಮಯತೀತಿ ನಿರ್ವಚನಾನುಸಾರೇಣ ಶಕಟಾಸುರಶಬ್ದಃ ಮುಖ್ಯಪ್ರಾಣಾವತಾರ-ಭೂತೇ ಭೀಮೇ ಸಾಧು ಸಂಗಚ್ಛತೇ ಇತಿ ಬೋಧ್ಯಮ್ । ಸ ಏವ ಶಕಟಾಸುರಶಬ್ದಿತ ಭೀಮಃ ಭಂಜನಃ – ಪ್ರಭಂಜನಃ । ಉಕ್ತದಿಶಾ ಮಹಾಸುರಭಂಜನಃ ಯೇನ (ಯಸ್ಯ ಅನುಗ್ರಹೇಣ) ಯಸ್ಮೈ ವಾ (ಯಸ್ಯ ಪ್ರೀತ್ಯರ್ಥಂ ವಾ) ಸಃ ಭಗವಾನ್ ಕೃಷ್ಣಃ ಶಕಟಾಸುರಭಂಜನಃ । ತಥಾಚೋಕ್ತಂ ಪ್ರಾತಃಸಂಕಲ್ಪ ಗದ್ಯೇ –

> **''ಸರ್ವತಾತ್ತ್ವಿಕಾಸುರಭಂಜಕೇನ ತಥಾ ತತ್ ಪ್ರೇರಣಾಪ್ರಯುಕ್ತಾಶೇಷ-ದುರ್ಮತಭಂಜಕೇನ ಅತ ಏವ 'ಪ್ರಭಂಜನ'ಶಬ್ದವಾಚ್ಯೇನ'' ಇತಿ ।**

ತಸ್ಮಾತ್ ಭಂಜನಶಬ್ದಸ್ಯ ಉಕ್ತಾರ್ಥಃ ಸಮಂಜಸ ಏವ ಇತಿ ಸಿದ್ಧಮ್ । ತಥಾ ಚ ಪ್ರಭಂಜನೀಕೃತಭೀಮೋ ಭಗವಾನ್ ಶ್ರೀಕೃಷ್ಣಃ ''ಶಕಟಾಸುರಭಂಜನ'' ಇತಿ ಸಾಧು ಪ್ರಕೀರ್ತಿತಃ ಇತಿ ಸ್ಥಿತಮ್ ।

*****

**(ಇದರ ಕನ್ನಡ ಅನುವಾದ ಮುಂದಿನ ಸಂಚಿಕೆಯಲ್ಲಿ)**

# ಕಾಮಧೇನು

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

**ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯಚ ।**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥**

ಈ ಮಂತ್ರವನ್ನು ದಿನಕ್ಕೊಂದು ಬಾರಿಯಾದರೂ ಉಚ್ಚರಿಸದ ಆಸ್ತಿಕನೊಬ್ಬನಿದ್ದಾನೆಯೇ ಎಂಬ ಪ್ರಶ್ನೆಗೆ ''ಇಲ್ಲ'' ಎಂಬುದೇ ಉತ್ತರ.

ಶ್ರೀಮದ್ರಾಘವೇಂದ್ರಗುರುಸಾರ್ವಭವಮರು ಮಾಡಿದ ಲೋಕಾನುಗ್ರಹ ಅಂತಹದ್ದು. ಅವರಿಂದ ಅನುಗೃಹೀತರಾದವರು ಮಾಧ್ವರಷ್ಟೇ ಅಲ್ಲ. ಆಸ್ತಿಕರಷ್ಟೇ ಅಲ್ಲ ; ನಾಸ್ತಿಕರನ್ನೂ ಆಸ್ತಿಕರನ್ನಾಗಿ ಮಾಡಿ ಅನುಗ್ರಹಿಸಿದವರು ಅವರು. ಮುಕ್ತಿಯ ದಾರಿಯನ್ನಷ್ಟೇ ಅಲ್ಲದೆ ಜಗತ್ತಿಗೆ ಭುಕ್ತಿಯ ದಾರಿಯನ್ನೂ ಭಕ್ತಿಯ ದಾರಿಯನ್ನೂ ತೋರಿದವರು ಅವರು. ಅದಕೆಂದೇ ಅವರು ನಮಗೆ ಬರಿದೇ ಗುರುವಾಗಿರದೆ ಕಾಮಧೇನು – ಕಲ್ಪವೃಕ್ಷವಾಗಿದ್ದಾರೆ.

''ಹರಿರೇವ ಪರೋ ಹರಿರೇವ ಗುರುಃ । ಹರಿರೇವ ಜಗತ್ಪಿತೃಮಾತೃಗತಿಃ'' ಎಂದು ಸಾರಿದ ಗುರುಗಳಾದ ಶ್ರೀಮನ್ಮಧ್ವಾಚಾರ್ಯರ ಸಂದೇಶವನ್ನು ಅನುಸಂಧಾನಪುರಸ್ಸರವಾಗಿ ಅಕ್ಷರಶಃ ಪರಿಪಾಲಿಸಿ, ಅನುಷ್ಠಾನಕ್ಕಿಳಿಸಿ, ಉಪಾಸನೆಗನುಗುಣವಾದ ಫಲವನ್ನು ಪಡೆದು ತಾವೂ ಜಗತ್ತಿಗೆ ತಾಯಿ, ತಂದೆ,ಗುರು ಎಲ್ಲವೂ ಆದವರು. ಶ್ರೀಮನ್ಮೂಲರಾಮನನ್ನು ಆರಾಧಿಸಿ ಶ್ರೀಮದ್ರಾಘವೇಂದ್ರ ಎಂದು ಪ್ರಸಿದ್ಧರಾದವರು. ಪಾಮರಜಗತ್ತಿನಲ್ಲಿ ಆ ಪ್ರಸಿದ್ಧಿಯ ಪರಾಕಾಷ್ಠೆ ಎಷ್ಟೆಂದರೆ ರಾಘವೇಂದ್ರ ಎಂದರೆ ಮೂಲರಾಮನನ್ನೂ ಮರೆಸುವಷ್ಟು, ಕಾಮಧೇನು ಎಂದರೆ ಸುರಲೋಕದ ಕಾಮಧೇನುವನ್ನೂ ಮರೆಸುವಷ್ಟು.

ಹೌದು ; ನಮ್ಮ ಬಳಿ ಯಾರಾದರೂ ಬಂದು ಶ್ರೀಮದ್ರಾಘವೇಂದ್ರ ಎಂಬುದು ಯಾರ ಹೆಸರು ಎಂದು ಕೇಳಿದರೆ ಥಟ್ಟನೇ ಉತ್ತರಿಸೋದು ''ಮಂತ್ರಾಲಯದ ಗುರುಗಳದ್ದು'' ಎಂದು. ಕಾಮಧೇನು ಯಾರು ಎಂಬ ಪ್ರಶ್ನೆಗೂ ನಮ್ಮ ಬಳಿ ಅದೇ ಉತ್ತರ. ಆದರೆ ಅವರ ಬಳಿಯೇ ಈ ಪ್ರಶ್ನೆಯನ್ನಿಟ್ಟರೆ ಅವರುತ್ತರಿಸೋದು ''ಶ್ರೀಮದ್ರಾಘವೇಂದ್ರ ಎಂಬುದು ರಘುಕುಲದಲ್ಲಿ ಶ್ರೇಷ್ಟನಾದ ಶ್ರೀರಾಮನ ಹೆಸರು'', ''ಕಾಮಧೇನು ಎಂದರೆ ಸುರಲೋಕದ ಧೇನು ಮತ್ತು ಅದರ ಸಂತತಿಯೇ ಆದ ಭೂಲೋಕದ ಧೇನು=ಹಸುಗಳು= ಗೋಸಂತತಿ''.

ತನಗೂ ಮಿಗಿಲಾಗಿ ತನ್ನ ಸ್ವಾಮಿಯಾದ ಶ್ರೀರಾಮನನ್ನು ಸರ್ವೋತ್ತಮನೆಂದು ಪೂಜಿಸಿದರೆ, ತಾನು ಪೂಜಿಸುವ ಗೋಪಾಲಕೃಷ್ಣನನ್ನು ಭೂಲೋಕದಲ್ಲಿಂದು ಅನಾಥಗಳಾಗಿರುವ ಕಾಮಧೇನುಗಳೊಳಗೆ ಪೂಜಿಸಿದರೆ ನಮ್ಮ ಪಾಲಿನ ಕಾಮಧೇನುವಾದ ಶ್ರೀಮದ್ರಾಘವೇಂದ್ರ ಗುರುಸಾರ್ವಭೌಮರಿಗೆ ನಮ್ಮ ಮೇಲೆ ಅತಿಪ್ರೀತಿ.

ಹಾಗೆ ನಡೆದು, ಅಂತಹ ಗುರುಗಳ, ಅಂತಹ ಪ್ರೀತಿಗೆ ಭಾಜನರಾಗೋಣ.

*****

ಸಂಪಾದಕೀಯ -

# ವೃದ್ಧಾಶ್ರಮದತ್ತ ಸಾಗುತ್ತಿರುವ ಹಿರಿಯರು

ಒಂದು ಕಾಲವಿತ್ತು ; ಆ ಕಾಲದಲ್ಲಿ ಮನೆತುಂಬಾ ಜನ, ಅಣ್ಣತಮ್ಮಂದಿರು ಒಂದಾಗಿ ಬಾಳುತ್ತಿದ್ದ ಅವಿಭಕ್ತ ಕುಟುಂಬಗಳು ಎಲ್ಲೆಡೆ ರಾರಾಜಿಸುತ್ತಿದ್ದವು. ಒಂದು ಕಡೆ ಹಿರಿಯರಾದ ತಂದೆತಾಯಿಗಳು ಹಾಗೂ ಅವರ ಓರಗೆಯ ಜನ, ಮತ್ತೊಂದೆಡೆ ಮನೆತುಂಬಾ ನಲಿದಾಡುವ ಮಕ್ಕಳು, ದಿನನಿತ್ಯ ಹಬ್ಬದ ವಾತಾವರಣ. ಹಬ್ಬ ಹರಿದಿನಗಳಲ್ಲಂತೂ ಸಂಭ್ರಮವೋ ಸಂಭ್ರಮ. ಪ್ರತಿಯೊಬ್ಬರೂ ಒಂದಲ್ಲ ಒಂದು ಬಗೆಯ ಕಾರ್ಯದಲ್ಲಿ ಮಗ್ನರಾದವರು. ಮಕ್ಕಳದಂತೂ ತಮ್ಮದೇ ಸಾಮ್ರಾಜ್ಯ. ಎಲ್ಲದಕ್ಕೂ ಗುರುಹಿರಿಯರ ನೇತೃತ್ವ. ಅವರ ಕೃಪಾಛತ್ರದಲ್ಲಿ ಸಾಗುತ್ತಿದ್ದ ಅಂದಿನ ಕುಟುಂಬಗಳು ಆನಂದದ ತವರು ಎನ್ನಿಸುವಂತಿದ್ದವು. ಮಾತೃದೇವೋ ಭವ ; ಪಿತೃದೇವೋ ಭವ ಎಂಬ ಶಾಸ್ತ್ರವಾಕ್ಯಗಳ ಅನುಸರಣೆ ಒಂದುರೀತಿಯಲ್ಲಿ ಉಳಿದುಕೊಂಡಿತ್ತು ಎನ್ನಬಹುದಾದ ವಾತಾವರಣ ಅದಾಗಿತ್ತು.

ಈಗ ಕಾಲ ಬದಲಾಗಿದೆ. ಗಂಡ-ಹೆಂಡತಿ, ಅಪರೂಪಕ್ಕೊಮ್ಮೆ ಎಂಬಂತೆ ಒಂದೋ ಎರಡೋ ಮಕ್ಕಳು. ಗಂಡ-ಹೆಂಡತಿಯರಿಬ್ಬರೂ ಉದ್ಯೋಗನಿರತರು. ಸಾಮಾನ್ಯವಾಗಿ ಮಧ್ಯಾಹ್ನದ ವೇಳೆಯಲ್ಲಿ ಮನೆಗಳಿಗೆ ಬೀಗವೇ. ಸಂಜೆ ಅವರಿಬ್ಬರೂ ಮನೆಗೆ ಬರುವ ಹೊತ್ತಿಗೆ ಇಬ್ಬರಿಗೂ ಸುಸ್ತು. ವಿಶ್ರಾಂತಿಯತ್ತ ಗಮನ. ಯಾಂತ್ರಿಕವೆಂಬಂತಹ ಜೀವನ. ಇರುವ ಒಂದೋ ಎರಡೋ ಮಕ್ಕಳು ದಾದಿ ಮೊದಲಾದವರ ಕೈಯಲ್ಲಿ. ಅದಕ್ಕೂ ತಂದೆತಾಯಿಗಳ ಒಡನಾಟ ಅಪರೂಪ. ಮನೆಯಲ್ಲಿ ಹಿರಿಯರಿಗಂತೂ ಅವಕಾಶವೇ ಇರದು. ಹೆಚ್ಚಿನ ಸಂದರ್ಭಗಳಲ್ಲಿ ಇವರ ಸಂಸಾರ ವಿದೇಶಗಳಲ್ಲಿ - ಎಂದರೆ ತಂದೆತಾಯಿಗಳೊಂದಿಗೆ ಮಕ್ಕಳು ಇರುವ ಕಾಲ ಮುಗಿದಿದೆ ಎಂಬಂತಾಗಿದೆ. ಹಾಗೆ ನೋಡಿದರೆ ದಂಪತಿಗಳು ಮನೆಯಲ್ಲಿ ಇರುವ ಸಮಯಕ್ಕಿಂತ ಹೊರಗಡೆ ಕಳೆಯುವ ಸಮಯವೇ ಹೆಚ್ಚು. ದಂಪತಿಗಳಿಬ್ಬರೂ ಐಟಿ-ಬಿಟಿ ಉದ್ಯೋಗಿಗಳಾಗಿದ್ದರಂತೂ ಅವರ ಪರಸ್ಪರ ಭೇಟಿ ಆಕಸ್ಮಿಕವೆನ್ನುವಷ್ಟು ದೂರ. ಕೆಲಸ ಹಾಗೂ ಸಂಚಾರದ ಒತ್ತಡದಲ್ಲಿ ಸದಾ ಮನಸ್ಸಿನಲ್ಲಿ ಖಿನ್ನತೆ. ಹೆಚ್ಚಿನ ಮನೆಗಳಲ್ಲಿ ಅಡಿಗೆಯ ವ್ಯವಸ್ಥೆಯೇ ಇರುವುದಿಲ್ಲ. ಕಛೇರಿಗೆ ತೆರಳುವ ವೇಳೆ ಹಾದಿಯಲ್ಲೋ ಅಥವಾ ಕಛೇರಿಯ ಬಳಿಯಲ್ಲೋ ಒಂದೆಡೆ ಊಟ. ಅದರಂತೆ ಮನೆಗೆ ಬರುವ ವೇಳೆಯಲ್ಲೂ ತಿನ್ನುವ ವ್ಯವಸ್ಥೆ. ಇನ್ನು ಕೆಲವರದಂತೂ ಕ್ಯಾರಿಯರ್ ಊಟದ ವ್ಯವಸ್ಥೆ. ನಿಗದಿತ ಸಮಯಕ್ಕೆ ಕ್ಯಾರಿಯರ್‌ಗಳಲ್ಲಿ ಬರುವ ಆಹಾರವೇ ಇವರ ದಿನನಿತ್ಯದ ಭೋಜನದ ವ್ಯವಸ್ಥೆ. ಇಂದಿನ ಕಾಲದ ಹೆಚ್ಚಿನ ಗೃಹಿಣಿಯರಿಗೆ ಅಡುಗೆಯ ಕೆಲಸವೂ ಹೊಸದೇ. ಮನೆಯಲ್ಲಿ ಪೂಜೆ, ಸಂಧ್ಯಾವಂದನೆ ಮೊದಲಾದವುಗಳಿರಲಿ, ಅವುಗಳಿಗೆ ಅಗತ್ಯವಾದ ಮುದ್ರೆ, ಗೋಪೀಚಂದನಗಳಂತಹ ವ್ಯವಸ್ಥೆಗಳು ಸಹ ಕಾಣುವುದು ವಿರಳವೆನ್ನಿಸುವಂತಹ ವಾತಾವರಣ. ಮಕ್ಕಳಿಗಂತೂ ಶಾಲೆಗಳಲ್ಲಿ ದೊರೆಯುವ ಶಿಕ್ಷಣವೇ ಪ್ರಧಾನ. ಸಂಸ್ಕೃತಿಯ ಶಿಕ್ಷಣಕ್ಕಂತೂ ಅವಕಾಶವೇ

ಇರದು. ವೃದ್ಧರಾದ ತಂದೆತಾಯಿಗಳನ್ನು ಗಮನಿಸಲು ಯಾರಿಗೂ ಸಮಯವೇ ಇರದು. ಕೆಲವು ದಿನಗಳ ಹಿಂದೆ ಅಂತಹವರನ್ನು ಮನೆಯ ಮೇಲೆ ಕಣ್ಣಾಗ್ಗವಲು ಎಂಬಂತೆಯಾದರೂ ಇಟ್ಟುಕೊಳ್ಳುವ ಪದ್ಧತಿ ಇತ್ತು. ಅದು ಸಹ ಈಗ ಮರೆಯಾಗುತ್ತಿದೆ. ಒಂದು ಹಂತ ಬರುತ್ತಲೇ ಅವರು ತಮಗೆ ಭಾರ, ಅವರ ಒಡನಾಟವೇ ಅನಪೇಕ್ಷಿತ ಎಂಬ ವಿಚಿತ್ರ ಬಗೆಯ ಮನೋಭಾವ. ಅವರನ್ನು ಪೂರ್ತಿಯಾಗಿ ದೂರಮಾಡಿಕೊಳ್ಳಲು ಸಮಾಜದ ಭಯ. ಕೆಲವೆಡೆಯಂತೂ ಆ ಯೋಚನೆಯೂ ಇರದು. ಕಾರಣ ಒಟ್ಟಾಗಿ ಸಮಾಜವೇ ಆ ರೀತಿ ಆಗುತ್ತಿರುವುದು. ಅಂತೂ ಕೆಲವರು ಅಂತಹ ವೃದ್ಧರಿಗೆ ಎಂತಹುದಾದರೂ ವ್ಯವಸ್ಥೆಯನ್ನು ಮಾಡಲು ಬಯಸುವರು.

ಅದಕ್ಕಾಗಿ ಇತ್ತೀಚೆಗೆ ವೃದ್ಧಾಶ್ರಮಗಳು ತಲೆಯೆತ್ತುತ್ತಿವೆ. ಅವುಗಳಲ್ಲೂ ಬಹುಬಗೆ. ಕೆಲವಂತೂ ಐಷಾರಾಮಿ ವ್ಯವಸ್ಥೆಯವು. ತಮ್ಮ ಸಂಪನ್ಮೂಲಕ್ಕೆ ಸರಿಹೊಂದುವಂತಹ ವೃದ್ಧಾಶ್ರಮಕ್ಕೆ ತಂದೆತಾಯಿಗಳನ್ನು ಸಾಗಿಸುವ ಕಾತರ ಇಂದಿನವರಿಗೆ. ಖರ್ಚು ಕಡಿಮೆ ಎನ್ನಿಸುವಂತಹ ವೃದ್ಧಾಶ್ರಮಗಳಿಗೆ ಅವರ ಆದ್ಯತೆ. ಎಷ್ಟೋ ನಿಷ್ಠಾವಂತ ಸದಾಚಾರಿಗಳು ಸಹ ಇಂತಹ ಮಕ್ಕಳಿಂದಾಗಿ ಸಾರ್ವಜನಿಕ ವೃದ್ಧಾಶ್ರಮಗಳನ್ನು ಸೇರುವಂತಾಗಿದೆ, ಎಂದರೆ ಅಂತ್ಯಕಾಲಕ್ಕೆ ತೀರ್ಥ ಹಾಗೂ ನೈವೇದ್ಯದ ವ್ಯವಸ್ಥೆಯೂ ಇಲ್ಲದ ದುರ್ಭರವೆನ್ನಿಸುವಂತಹ ಜೀವನ ಇವರದಾಗುವುದು. ಮನೆಯಲ್ಲಿ ಇವರಿಗೆ ಆಸರೆ ನೀಡದೆ ಇರಲು ನಿಜವಾದ ಯಾವ ಕಾರಣವೂ ಇರುವುದಿಲ್ಲ. ಅವರು ಅನಪೇಕ್ಷಿತ ಎಂಬುದಷ್ಟೇ ಇವರ ದೃಷ್ಟಿ. ಸಂಸ್ಕೃತಿ, ಧರ್ಮ ಮೊದಲಾದವುಗಳ ಚಿಂತನೆಯಿಂದ ದೂರಾದ ಇಂತಹವರಿಗೆ ಅವುಗಳ ನಿಧಿ ಎನ್ನಿಸುವಂತಹ ಹಿರಿಯರ ಮಹತ್ವ ತಿಳಿಯುವುದಾದರೂ ಎಂತು ! ಕೆಲವರಂತು ಹಾಗೆ ವೃದ್ಧಾಶ್ರಮಕ್ಕೆ ಸೇರಿಸಿದ ಹಿರಿಯರಿಗೆ ಔಷಧೋಪಚಾರ ವ್ಯವಸ್ಥೆ ಮಾಡಿಸುವಲ್ಲೂ ತಾತ್ಸಾರ ತೋರುವರು. ಹಾಗೆಂದು ಸಂಬಂಧಿಸಿದವರಿಗೆ ತಿಳಿಸುವುದು ಸಹ ಉಂಟು. ಮತ್ತೆ ಕೆಲವರು ಅಂತಹ ಹಿರಿಯರು ನಿಧನರಾದ ಬಳಿಕವೂ ಆ ವಿಷಯವನ್ನು ತಿಳಿಸಕೂಡದೆಂದು ರಹಸ್ಯವೆಂಬಂತೆ ಅರಿಕೆಮಾಡಿಕೊಂಡು, ಅದಕ್ಕೆ ಅಲ್ಪಸ್ವಲ್ಪ ವೆಚ್ಚವನ್ನು ಸಹ ನೀಡಿ, ಜವಾಬ್ದಾರಿ ಕಳೆದುಕೊಂಡ ಸಂತೃಪ್ತಿ ಹೊಂದುವುದುಂಟು.

ತಂದೆ-ತಾಯಿಗಳಂತಹ ಪೂಜ್ಯರ ಬಗ್ಗೆ ಈ ಬಗೆಯ ಧೋರಣೆ ನಂಬಲೂ ಆಗದಂತಹುದು. ಹೆತ್ತು ಹೊತ್ತು ಬೆಳೆಸಿದವರಿಗೆ ಕನಿಷ್ಠ ಕೃತಜ್ಞತೆಯನ್ನೂ ತೋರದ ಕೃತಘ್ನರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ಒಬ್ಬರನ್ನೊಬ್ಬರು ಈ ವಿಷಯದಲ್ಲಿ ಅನುಕರಣೆ ಮಾಡುತ್ತಾ ಇಂತಹ ವಿಕೃತ ಪದ್ಧತಿ ವ್ಯಾಪಕವಾಗಿ ಹರಡುತ್ತಿದೆ. ಇಂತಹ ಜನ ಮುಂದೆ ತಾವು ವೃದ್ಧರಾದಾಗ, ತಮ್ಮ ಮಕ್ಕಳಿಂದ ತಮಗೆ ಒದಗುವ ಗತಿಯೂ ಸಹ ಇಂತಹುದೇ ಎಂಬ ವಿಚಾರವನ್ನು ಮರೆಯುವರು. ಇದನ್ನು ಕಣ್ಣಾರೆ ಕಂಡ ಅವರ ಮಕ್ಕಳು ಸಹಜವಾಗಿಯೇ ಇಂತಹ ವಿಕೃತಿಯನ್ನೇ ಬೆಳೆಸಿಕೊಳ್ಳುವರಲ್ಲವೆ ! ಮೇಲ್ನೋಟಕ್ಕೆ ವಿದ್ಯೆ ಹೆಚ್ಚಿರುವಂತೆ ಕಾಣುವ ಈ ಕಾಲದ ಇಂತಹ ವಿಕೃತ ಚಿಂತನೆ ಅಸಂಸ್ಕೃತರಲ್ಲೂ ಸಹ ಕಾಣದಷ್ಟು ನಿಕೃಷ್ಟವಾದುದು. ಈ ಬಗ್ಗೆ ಎಚ್ಚರಿಕೆ ನೀಡುವಂತಹ ವ್ಯವಸ್ಥೆ ನಮ್ಮಲ್ಲಿ ಯಾವ ರೀತಿಯಲ್ಲೂ

ರೂಪುಗೊಂಡಿಲ್ಲ. ಆರ್ಥಿಕ, ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಇಂದಿನ ಜನ ತಾತ್ತ್ವಿಕನ್ಯಾಯದ ಬಗ್ಗೆ ಮಾತ್ರ ಜಾಣಕುರುಡನ್ನು ಪ್ರದರ್ಶಿಸುವುದು ಎಂತಹ ವಿಪರ್ಯಾಸ ! ಇಂತಹ ವ್ಯವಸ್ಥೆಯ ಸುಳಿಗೆ ಸಿಕ್ಕ ಅನೇಕ ಹಿರಿಯರು ತಮ್ಮ ದುರ್ಭರ ಜೀವನವನ್ನು ನನ್ನ ಮುಂದೆ ಹೇಳಿಕೊಂಡು ಕಣ್ಣೀರುಗರೆದಿರುವ ಪ್ರಸಂಗಗಳು ಅಸಂಖ್ಯ. ಇದರ ಬಗ್ಗೆ ಎಚ್ಚರ ಮೂಡಿಸುವಂತಹ ವಿವೇಕವನ್ನು ನಾವು ಇನ್ನಾದರೂ ತೋರಲು ಸಾಧ್ಯವೆ? ಯೋಚಿಸಬೇಕು. ಇದಕ್ಕೆ ದಾರಿತೋರಬಲ್ಲ ಮಠಮಾನ್ಯಗಳು ಉತ್ಸವ ಮೊದಲಾದವುಗಳಲ್ಲಿ ತೊಡಗಿಕೊಂಡಿದ್ದು , ಈ ಬಗ್ಗೆ ಗಮನಹರಿಸುವವರೇ ಇಲ್ಲದಂತಾಗಿದೆ.

ಇದಕ್ಕೆಲ್ಲಾ ಅಪವಾದವೆಂಬಂತೆ ತಂದೆತಾಯಿಗಳನ್ನು, ಗುರುಹಿರಿಯರನ್ನು ತುಂಬು ಗೌರವದಿಂದ ಕಾಣುವ ಕೆಲವು ಸುಸಂಸ್ಕೃತವರ್ಗದ ಜನರೂ ಇರುವರು ಎಂಬುದು ನಿಜ. ಆದರೆ ಅದೇನಿದ್ದರೂ ನಗಣ್ಯವೆನ್ನಿಸುವಷ್ಟು ಅಲ್ಪಸಂಖ್ಯೆಯದು.

*****


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

## ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪ್ಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನಡೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತ ದೇವತೆ-ಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| **೧. ಮಹಾಪೋಷಕರು (ಆಜೀವ ಸದಸ್ಯರು)** | **ರೂ. ೧,೦೦,೦೦೦** |
| **೨. ಪೋಷಕರು (೧೦ ವರ್ಷಗಳ ಸದಸ್ಯತ್ವ)** | **ರೂ. ೫೦,೦೦೦** |
| **೩. ವಾರ್ಷಿಕ ಸದಸ್ಯರು** | **ಪ್ರತಿವರ್ಷ ರೂ. ೧೦,೦೦೦** |
| **೪. ಸಾಮಾನ್ಯ ಸದಸ್ಯರು** | **ಪ್ರತಿವರ್ಷ ರೂ. ೨,೫೦೦** |

ವಿ.ಸೂ. : ಆಸಕ್ತರು '**ಗೋವರ್ಧನಗಿರಿ ವಿಶ್ವಸ್ತ ಮಂಡಳಿ**', ಶ್ರೀಪೇಜಾವರಮಠ, ಉಡುಪಿ - ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.

# ಪ್ರಣಾಮದ ಅನುಸಂಧಾನ

**- ಸಗ್ರಿ ರಾಘವೇಂದ್ರ ಉಪಾಧ್ಯಾಯ**

ಪದ್ಯಮಾಲಾದಲ್ಲಿ (೧೧೪) ಶಂಬಭ್ರಮಣ ನಡೆಸಿದ ಬಳಿಕ, ಮೂರ್ತಿಯಿಂದ ಭಗವಂತನನ್ನು ಪ್ರತ್ಯಾವಹನೆ ನಡೆಸುವ ಮುಂಚೆ '**ಪ್ರದಕ್ಷಿಣನಮಸ್ಕಾರಾನ್ ಸೂಕ್ತಪಾಠಂ ತತಶ್ಚರೇತ್**' – ಎಂಬುದಾಗಿ ದೇವಪೂಜೆ ಅಂಗವಾಗಿ ಪ್ರದಕ್ಷಿಣ ನಮಸ್ಕಾರಗಳನ್ನು ನಡೆಸಲು ತಿಳಿಸಲಾಗಿದೆ.

**ತೀರ್ಥಕೋಟಿಸಹಸ್ರಾಣಿ ವ್ರತಕೋಟಿಶತಾನಿ ಚ ।**
**ನಾರಾಯಣಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥**

ಕೋಟಿಕೋಟಿ ತೀರ್ಥಯಾತ್ರೆಗಳನ್ನು ನಡೆಸಿದಾಗ, ಕೋಟಿಕೋಟಿ ವ್ರತಗಳನ್ನು ಆಚರಿಸಿದಾಗ ಉಂಟಾಗುವ ಫಲ ನಾರಾಯಣನಿಗೆ ಪ್ರಣಾಮ ಸಲ್ಲಿಸಿದಲ್ಲಿ ಉಂಟಾಗುವ ಫಲದ ೧೬ನೆಯ ಒಂದು ಭಾಗದಷ್ಟೂ ಆಗಲಾರದು ಎಂದು ಕೃಷ್ಣಾಮೃತಮಹಾರ್ಣವ-ದಲ್ಲಿ(೮೭) ಉಲ್ಲೇಖಗೊಂಡಂತೆ ಸಾಧನಾಕ್ಷೇತ್ರದಲ್ಲಿ ಪ್ರಣಾಮದ ಹಿರಿಮೆ ಬಹಳಷ್ಟಿದೆ. ಭೀಷ್ಮರಂತೂ ತಮ್ಮ ಭೀಷ್ಮಸ್ತವರಾಜದಲ್ಲಿ '**ಏಕೋಽಪಿ ಕೃಷ್ಣಸ್ಯ...**' ಎಂಬ ಮಾತಿನಿಂದ ಹತ್ತು ಅಶ್ವಮೇಧಯಾಗಗಳಿಗಿಂತಲೂ ಶ್ರೀಕೃಷ್ಣನ ಪ್ರಣಾಮದ ಫಲ ಅಧಿಕವಾಗಿದೆ; ಅದರಿಂದ ಮೋಕ್ಷ ದೊರೆಕಿಯೇ ತೀರುವುದೆಂದು ಘೋಷಿಸಿರುವರು.

ಕಾತ್ಯಾಯಿನೀವ್ರತದಲ್ಲಿ ತೊಡಗಿದ್ದ ಗೋಪಿಕಾಕನ್ಯೆಯರು ವಿವಸ್ತ್ರರಾಗಿ ಜಲಾವಗಾಹನ ನಡೆಸಿದ ಅಪರಾಧದ ಪರಿಹಾರಕ್ಕಾಗಿ '**ಬದ್ಧಾಂಜಲಿಂ ಮೂರ್ಧ್ನ್ಯಪನುತ್ತಯೇಽಂಹಸಃ ಕೃತ್ವಾ ನಮೋ ವೋ ವಸನಂ ಪ್ರಗೃಹ್ಯತಾಮ್**'– ಎಂದು ಶ್ರೀಕೃಷ್ಣನು ತಿಳಿಸಿದಂತೆ ತಲೆಯ ಮೇಲೆ ಕೈಜೋಡಿಸಿ ನಮಸ್ಕಾರವನ್ನು ಮಾಡಿ ತಮ್ಮ ಆ ದೋಷದಿಂದ ದೂರರಾದರೆಂಬ ನಿರೂ-ಪಣೆಯಿಂದ '**ಯಾನಿ ಕಾನಿ ಚ ಪಾಪಾ... ಪ್ರದಕ್ಷಿಣ ಪದೇಪದೇ**' – ಎಂದಿರುವಂತೆ ಪ್ರದಕ್ಷಿಣ ನಮಸ್ಕಾರದಿಂದ ಎಂತಹ ಪಾಪವೂ ಪರಿಹಾರವಾಗುವುದೆಂದೂ ಸ್ಪಷ್ಟವಾಗುವುದು.

## ವಾಸುದೇವನ ಶಿಕ್ಷಣ :

ಪುರಾಣಗಳಲ್ಲಿ ಪ್ರತಿಯೊಂದು ಧಾರ್ಮಿಕ ಆಚರಣೆಯನ್ನೂ ಹೀಗೆ ಭಾರೀ ಫಲಪ್ರದವನ್ನಾಗಿ ಪ್ರಶಂಸಿಸಲಾಗುತ್ತಿದ್ದು, ಅದು ಅರ್ಥವಾದ ರೂಪದಲ್ಲಷ್ಟೇ ನಿರೂಪಿತವಾಗಿದೆ ಎಂದು ಅರ್ಥೈಸಿಕೊಳ್ಳುವಂತೆ ಪ್ರಣಾಮದ ಹಿರಿಮೆಯನ್ನೂ ಅರ್ಥವಾದ ರೂಪವಾಗಿ ತೆಗೆದುಕೊಳ್ಳಬಾರದು. ಮಧ್ವಗುರುಗಳು ವಾಸುದೇವನಾಗಿದ್ದಾಗ ಕೊಡವೂರಿನಿಂದ ಉಡುಪಿ ಅನಂತಾಸನನಲ್ಲಿಗೆ ಬಂದು ಅವನಿಗೆ ಸಾಷ್ಟಾಂಗ ಪ್ರಣಾಮ

ಸಲ್ಲಿಸಿದರು. ಅವರು ಯಾವಾಗಲೂ ದೇವರ ನಮನ, ದರ್ಶನ, ಸ್ತುತಿ – ಇವುಗಳನ್ನು ನಡೆಸುತ್ತ ಇರುವವರಾದರೂ **'ಅಪಿ ತಥೇತಿ ವಿಧಾಯ ವಿಶೇಷತಃ ಸ ನನು ಸಾಧುಜನಾನ್ ಸಮಶಿಕ್ಷಯತ್'** – ಎಂದು ಮಧ್ವವಿಜಯದಲ್ಲಿ ತಿಳಿಸಿರುವಂತೆ ಸಜ್ಜನರಿಗೆ ಪ್ರಣಾಮದ ವಿಧಾನದ ಬಗ್ಗೆಯೂ, ಹಿರಿಮೆಯ ಬಗ್ಗೆಯೂ ಶಿಕ್ಷಣ ನೀಡುವುದಕ್ಕಾಗಿ ಹಾಗೆ ನಮಸ್ಕರಿಸಿದರು. ದೇವತೆಗಳೂ, ಬ್ರಾಹ್ಮಣರೂ ಆಶ್ಚರ್ಯಚಕಿತರಾಗಿ ನೋಡುವಂತೆ ಅಷ್ಟಾಂಗಪೂರ್ವಕವಾಗಿ, ಅನುಸಂಧಾನಪೂರ್ವಕವಾಗಿ ನಮಸ್ಕರಿಸುವರು – **'ಸಮನಮತ್'**. ಹಾಗೆಯೇ ಶ್ರೀಹರಿಯ ನಮಸ್ಕಾರಗಳು **'ಸುಕೃತಾ ಇಮಾಃ'** – 'ಸರಿಯಾದ ಕ್ರಮದಿಂದ ಒಳ್ಳೆಯ ಅನುಸಂಧಾನದೊಂದಿಗೆ ನಡೆಸಲ್ಪಟ್ಟಲ್ಲಿ ಚೆನ್ನಾಗಿ ಆಚರಿಸಲ್ಪಟ್ಟ ಅಶ್ವಮೇಧಯಾಗಗಳ ಸಮೂಹಕ್ಕಿಂತಲೂ ಅಧಿಕಫಲವನ್ನು ನೀಡಬಲ್ಲವು' ಎಂದೂ ತಿಳಿಸಿದರು.

ವಾಸುದೇವನ ಮೂಲಕ ನಡೆದ ಪ್ರಣಾಮದ ಕುರಿತಾದ ಪ್ರಾತ್ಯಕ್ಷಿಕೆಯಿಂದ ಭೀಷ್ಮರು ಕೃಷ್ಣಪ್ರಣಾಮಕ್ಕೆ ತಿಳಿಸಿರುವ ಫಲಾಧಿಕ್ಯದ ಕುರಿತಾದ ಮಾತು ಅರ್ಥವಾದ ಅಲ್ಲ ಎಂದು ತಿಳಿದುಬರುವಂತೆ ಆ ಬಗೆಯ ಫಲ ದೊರಕಬೇಕೆಂದರೆ, ಪ್ರಣಾಮ ಒಳ್ಳೆಯ ರೀತಿಯಿಂದ ಆಚರಿಸಲ್ಪಡಬೇಕು (ಸುಕೃತಾಃ) ಎಂದೂ ಸ್ಪಷ್ಟವಾಗುವುದು.

## ದಾಸ್ಯ ಮತ್ತು ಆತ್ಮನಿವೇದನಗಳ ಸಂಕೇತ :

**'ಉರಸಾ ಶಿರಸಾ ದೃಷ್ಟ್ಯಾ...'** ಎಂದಿರುವಂತೆ ಎದೆ, ಶಿರಸ್ಸು, ದೃಷ್ಟಿ , ಮನಸ್ಸು , ಮಾತು, ಪಾದಗಳು, ಕೈಗಳು ಹಾಗೂ ಮಂಡಿಗಳು – ಹೀಗೆ ದೇಹದ ಪ್ರಮುಖ ಅಂಗಗಳನ್ನು ಬಳಸಿಕೊಂಡು ಪ್ರಣಾಮ ನಡೆಸಬೇಕೆಂದು ಪ್ರಣಾಮದ ಕುರಿತಾದ ಬಾಹ್ಯವಿಧಾನದ ಮಾಹಿತಿಯಾದರೆ, ಪ್ರಣಾಮಕ್ಕೆ ಅಂತಃಸತ್ವವನ್ನು ತುಂಬಬೇಕೆಂದರೆ ಆ ಬಗ್ಗೆ ಅನುಸಂಧಾನವನ್ನು ಅಳವಡಿಸಿಕೊಳ್ಳಬೇಕು. ಭಕ್ತಿಯ ಪ್ರಕಾರಗಳಲ್ಲಿ ಸೇರುವ ದಾಸ್ಯ ಹಾಗೂ ಆತ್ಮನಿವೇದನ – ಇವುಗಳಿಗೆ ಪುಷ್ಟಿ ದೊರಕುವಂತೆ ಪ್ರಣಾಮದ ಬಗ್ಗೆ ಅನುಸಂಧಾನ ತಾಳಬೇಕು. ದೇಹದ ಪ್ರಮುಖ ಅವಯವಗಳಾದ ಎದೆಯೇ ಮುಂತಾದ ಎಂಟೂ ಅವಯವಗಳನ್ನು ದೇವರ ಎದುರು ನಿವೇದಿಸಿಕೊಂಡಾಗ ಅವು ಪ್ರತಿನಿಧಿಸುವ ಎಲ್ಲ ಅವಯವಗಳೂ, ಅವುಗಳನ್ನೊಳಗೊಂಡ ಸಮಗ್ರದೇಹವೂ ನಿನಗೆ ಸಮರ್ಪಿತ. ಅರ್ಥಾತ್, ನಿನ್ನಿಂದಲೇ ನೀಡಲ್ಪಟ್ಟದ್ದು; ನಿನ್ನಿಂದಲೇ ತನ್ನ ತನ್ನ ಕಾರ್ಯವನ್ನು ನಡೆಸುತ್ತಿದೆ. ಮುಖ್ಯವಾಗಿ ನಿನ್ನ ಸೇವೆಗಾಗಿಯೇ ಇರುವಂತಹದ್ದು – ಎಂದು ಅವುಗಳ ಸ್ವಾಮಿತ್ವ, ಕಾರ್ಯನಿರ್ವಾಹಕತ್ವ, ಸೇವಾಸಮರ್ಪಕತ್ವ – ಈ ಮೂರರ ಅನುಸಂಧಾನ ನಡೆಸಲ್ಪಟ್ಟಿತೆಂದರೆ ಪ್ರಣಾಮದಿಂದಾಗಿ ದಾಸ್ಯವನ್ನು ಅನುಸಂಧಾನ ಮಾಡಿದಂತಾಗುವುದು.

ಭಕ್ತಿಯ ೯ ಪ್ರಕಾರಗಳಲ್ಲಿ ಉಳಿದ ೮ ಪ್ರಕಾರಗಳಿಗಿಂತಲೂ ಅಧಿಕಫಲಪ್ರದವಾಗಿರುವ ಪ್ರಯುಕ್ತ ಅತಿಶ್ರೇಷ್ಠ ಎನಿಸಿರುವ 'ಆತ್ಮನಿವೇದನ' ಎಂಬ ಭಕ್ತಿಪ್ರಕಾರಕ್ಕೆ ಪೋಷಕವಾಗುವಂತೆ

ಪ್ರಣಾಮವನ್ನು ಸಲ್ಲಿಸಬೇಕೆಂದರೆ ಪ್ರಣಾಮಕ್ಕಾಗಿ ವಿನಿಯೋಗಿಸಿಕೊಳ್ಳಲಾಗುವ ಎದೆಯೇ ಮುಂತಾದ ೮ ಅಂಗಗಳಲ್ಲೂ ಆಯಾ ಅಂಗದ ತತ್ತ್ವಾಭಿಮಾನಿಯ ಪ್ರೇರಕನಾಗಿ ಭಗವಂತನೇ ಇದ್ದು ಅವುಗಳ ಮೂಲಕ ಚಟುವಟಿಕೆಗಳನ್ನೆಲ್ಲ ನಡೆಸುತ್ತಿರುವನೆಂದು ವಿಶೇಷವಾಗಿ ಅವನ ಅಂತರ್ಯಾಮಿತ್ವವನ್ನು ಅನುಸಂಧಾನ ಮಾಡಬೇಕು:

**ಮುಕ್ತಸ್ಯಾಪಿ ಮಮಾಂತಸ್ಥೋ ನಿಯಂತೈವ ಹರಿಃ ಸದಾ ।**
**ಇತಿ ಜ್ಞಾನಂ ಸಮುದ್ದಿಷ್ಟಂ ಸಮ್ಯಗಾತ್ಮನಿವೇದನಮ್' ॥**

**(ಭಾಗವತ ತಾ.ನಿ.೭/೫/೨೩)**

– ಎಂದು ತಿಳಿಸಿರುವಂತೆ ಆತ್ಮನಿವೇದನದಲ್ಲಿ ತನಗೆ ಅಂತರ್ಯಾಮಿಯಾಗಿ ಅನುಗ್ರಹಿಸುತ್ತಿರುವನೆಂಬ ಅಂಶಕ್ಕೇ ಹೆಚ್ಚು ಒತ್ತು. ಆದ್ದರಿಂದ ಅಷ್ಟಾಂಗಗಳಿಂದ ಪ್ರಣಾಮವನ್ನು ಸಲ್ಲಿಸುತ್ತಿರುವಾಗ ಆಯಾ ಅಂಗದಲ್ಲಿ ಭಗವಂತನು ಅಂತರ್ಯಾಮಿ–ಯಾಗಿದ್ದು ಆಯಾ ಅಂಗದ ಅಭಿಮಾನಿಯ ಮೂಲಕ ಪ್ರೇರಿಸುತ್ತಿರುವನೆಂಬ ಅನುಸಂಧಾನದೊಂದಿಗೆ 'ನನ್ನ ಸಮಗ್ರ ಬದುಕಿನಲ್ಲಿ ಹಿಂದೆ ಹಾಗೂ ಮುಂದೆ ಆಯಾ ಅಂಗದಿಂದ ಬೇರೆ ಬೇರೆ ಚಟುವಟಿಕೆಯನ್ನು ಪ್ರೇರಿಸುವನು' – ಎಂಬ ಅನುಸಂಧಾನವನ್ನು ತಾಳಿದಲ್ಲಿ ಆಯಾ ಅಂಗದಿಂದ ನಡೆಸಲಾಗುವ ನಮ್ಮ ಸಮಗ್ರ ಬದುಕಿನ ಸಾಧನೆಗಳನ್ನೂ ಅವನಿಗೆ ಅರ್ಪಿಸಿದಂತಾಗುವುದು. ಪ್ರಣಾಮದಲ್ಲಿ ಜಾನುಗಳೂ (ಮಂಡಿಗಳೂ) ಸೇರಿಸಲ್ಪಟ್ಟಿದ್ದು, ಪಾಯು ಮತ್ತು ಉಪಸ್ಥ ಇಂದ್ರಿಯಗಳ ಸಾಧನೆಗಳನ್ನು ಅವುಗಳ ಮೂಲಕ ಅರ್ಪಿಸಬಹುದಾಗಿದೆ.

## ಪ್ರಣಾಮದ ಪ್ರಾತ್ಯಕ್ಷಿಕೆಗಳು :

ಆಂಜನೇಯ ಶ್ರೀರಾಮನಿಗೆ ಚೂಡಾಮಣಿಯನ್ನು ಅರ್ಪಿಸುವಾಗ ಸಲ್ಲಿಸಿದ ಪ್ರಣಾಮ, ವಾಸುದೇವ ಉಡುಪಿ ಅನಂತಾಸನನಿಗೆ ಸಲ್ಲಿಸಿದ ಪ್ರಣಾಮ, ಮಧ್ವಗುರುಗಳು ವೇದವ್ಯಾಸಾಶ್ರಮದಲ್ಲಿ ಶ್ರೀವೇದವ್ಯಾಸರಿಗೆ ಸಲ್ಲಿಸಿದ ಪ್ರಣಾಮ, ಪ್ರಹ್ಲಾದ ಹಿರಣ್ಯಕಶಿಪನ್ನು ಸಂಹರಿಸಿ ಅನುಗ್ರಹಿಸಿದ ನರಸಿಂಹನಿಗೆ ಸಲ್ಲಿಸಿದ ಪ್ರಣಾಮ, ಉದ್ಧವ ಉದ್ಧವಗೀತೆಯನ್ನು ಶ್ರೀಕೃಷ್ಣನಿಂದ ಕೇಳಿ ಅವನ ಆದೇಶದಂತೆ ಕಲಾಪಗ್ರಾಮಕ್ಕೆ ತೆರಳುವಾಗ ಸಲ್ಲಿಸಿದ ಪ್ರಣಾಮ – ಇವೆಲ್ಲ ಪ್ರಣಾಮವನ್ನು ಹೇಗೆ ಸಲ್ಲಿಸಬೇಕೆಂಬುದಕ್ಕೆ ಪ್ರಾತ್ಯಕ್ಷಿಕೆಗಳಂತೆ ಇದ್ದು ಇವುಗಳ ಆನುಸಂಧಾನಿಕ ಚಿಂತನೆಯೊಂದಿಗೆ ಪ್ರಣಾಮ ಸಲ್ಲಿಸಲ್ಪಟ್ಟಲ್ಲಿ ಅಂತಹ ಪ್ರಣಾಮ ಆನುಸಂಧಾನಿಕವಾಗಿ ಸತ್ತ್ವಪೂರ್ಣ ಎನಿಸಬಲ್ಲದು.

(ಮುಂದಿನ ಸಂಚಿಕೆಯಲ್ಲಿ : **ಮಧ್ವಚರಿತೆಯಲ್ಲಿ ಅನುಸಂಧಾನ**)

*****

# ಗ್ರಹಣವಿಚಾರ
## (ವ್ಯಾಸನಕೆರೆ ಜಯಂತರ ಲೇಖನಕ್ಕೆ ಪ್ರತಿಕ್ರಿಯೆ)

ಲೇಖಕರು : ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರು

ಕೇವಲ ಗ್ರಹಣಗಳಿಂದ ಶ್ರೀಮದಾಚಾರ್ಯರ ಕಾಲನಿರ್ಣಯವನ್ನು ಮಾಡಲಾಗು-ವುದಿಲ್ಲ ಎಂದು ಜಯಂತರೇ ಒಪ್ಪಿದ್ದಾರೆ. ಇದು ನಮಗೂ ಸಮ್ಮತ. ಪ್ರಮಾಣಾಂತರ-ಗಳಿಂದ ತಿಳಿದುಬರುತ್ತಿರುವ ಕಾಲನಿರ್ಣಯಕ್ಕೆ ಪ್ರಕೃತವಾದ ಸೂರ್ಯಗ್ರಹಣವು ಅಭ್ಯುಚ್ಚಯಯುಕ್ತಿ ಎಂಬುದೇ ನಮ್ಮ ಅಭಿಪ್ರಾಯವೂ ಆಗಿದೆ. 1296ರ ಗ್ರಹಣವು ಆಚಾರ್ಯರ ಕಾಲಕ್ಕೆ ಸೂಚಕ ಎಂದು ನಾವು ಹೇಳಿದ್ದು, ಆ ಅವಧಿಯಲ್ಲಿ ಬೇರೆ ಪೂರ್ಣಸೂರ್ಯಗ್ರಹಣವು ಬಂದಿಲ್ಲ ಎಂಬ ಅಭಿಪ್ರಾಯದಿಂದಲೇ ಹೊರತಾಗಿ, ಬೇರೆ ಗ್ರಹಣಗಳೇ ಬಂದಿಲ್ಲ ಎಂದಲ್ಲ. NASAದಿಂದ ಪ್ರಕಟವಾದ ನಕ್ಷೆಯ ಚಿತ್ರದಲ್ಲಿ ನೋಡಿರಿ Total and Annular Eclipse ಎಂದಿದೆ. ಪಾರ್ಶ್ವಗ್ರಹಣವನ್ನು ತೋರಿಸಿಲ್ಲ ಎಂದು ನಕ್ಷೆ ತಯಾರಿಸಿದವರೇ ಹೇಳಿಕೊಂಡಿದ್ದಾರೆ. ಶ್ರೀಕೃಷ್ಣನ ಅವತಾರಕಾಲಾವಧಿಯಲ್ಲಿ ಹೇಗೆ ವರ್ಣಿಸಿದ್ದಾರೋ, ಅದರಂತೆ ಸುಮಧ್ವವಿಜಯದಲ್ಲಿ ವರ್ಣಿತವಾದದ್ದೂ ಮಹತ್ತ್ವಪೂರ್ಣವಾದ ಪೂರ್ಣಸೂರ್ಯಗ್ರಹಣವಿರಬೇಕು ಎಂದು ನಮ್ಮ ಊಹೆ. ತತ್ರಾಪಿ, ಈ ಸೂರ್ಯಗ್ರಹಣವು ಭಾನುವಾರ ಸಂಭವಿಸಿದೆ. ಇಂಥಾ ಗ್ರಹಣಕ್ಕೆ ಚೂಡಾಮಣಿ ಎನ್ನುತ್ತಾರೆ. ಇದು ಅನಂತಫಲವನ್ನು ಕೊಡುತ್ತದೆ ಎಂದು ಧರ್ಮಶಾಸ್ತ್ರಗಳಲ್ಲಿ ಹೇಳಿದೆ. ಇಂಥಾ ಮಹಾಪುಣ್ಯಕರವಾದ ಗ್ರಹಣವನ್ನು ಸುಮಧ್ವ-ವಿಜಯದಲ್ಲಿ ಉಲ್ಲೇಖಿಸಿರಬೇಕೆಂದು ನಮ್ಮ ಅಭಿಪ್ರಾಯ.

1275ರ ಗ್ರಸ್ತೋದಯ ಗ್ರಹಣಕ್ಕೆ ಇಂಥಾ ಮಹತ್ತ್ವವಿರುವುದಿಲ್ಲ. ಎರಡು ಚಂದ್ರ-ಗ್ರಹಣದ ಮಧ್ಯೆ ಬಂದಿರುವುದು, ಶುಕ್ರಗ್ರಸ್ತವಾಗಿರುವುದು ಇವೆಲ್ಲ ಎಷ್ಟೇ ಅಪರೂಪ-ವಾದರೂ ಧಾರ್ಮಿಕದೃಷ್ಟಿಯಿಂದ ಚೂಡಾಮಣಿಯಂತೆ ಯಾವುದೇ ಮಹತ್ತ್ವಕ್ಕೆ ಕಾರಣವಲ್ಲ.

**ಜಯಂತರ ಗ್ರಹಣ ಕುರಿತ ಲೇಖನದಲ್ಲಿ ಊಹಾಪೋಹೆಗಳೇ ಅತಿಯಾಗಿವೆ !**

1. ಹಿಡಿದಸ್ನಾನವನ್ನು ವರ್ಣಿಸಿಲ್ಲ ಎಂಬುವುದು ನೇರವಾಗಿ ಸುಮಧ್ವವಿಜಯಕ್ಕೆ ವಿರೋಧಿ. 16ನೇ ಸರ್ಗ 19ನೇಶ್ಲೋಕದಲ್ಲಿ **ಸಸ್ನುಸ್ತೇ ದ್ವಿಜನಿಕರಾಃ** ಪ್ರಶಸ್ತಕಾಲೇ ಎಂದಿದೆ. ಗ್ರಹಣಹಿಡಿದ ಕಾಲವು ಪ್ರಶಸ್ತಕಾಲವೇ ಹೊರತಾಗಿ, ಗ್ರಹಣಬಿಟ್ಟಮೇಲಿನ ಕಾಲ ಪರ್ವಕಾಲವಲ್ಲ.

2. ಐತರೇಯ ವ್ಯಾಖ್ಯಾನವು ಈ ಸ್ನಾನಕ್ಕೆ ಮುಂಚೆ ವರ್ಣಿತವಾಗಿದೆ. ಆದ್ದರಿಂದ, ಜನಗಳು ಪುಣ್ಯಕಾಲಕ್ಕೆ ಕಾಯುತ್ತಿದ್ದ ಸಂದರ್ಭದಲ್ಲಿ ಆಚಾರ್ಯರು ವ್ಯಾಖ್ಯಾನ ಮಾಡಿದರೆಂದು ಸುಸಂಗತವಾಗುತ್ತದೆ. ಗ್ರಹಣಕಾಲದಲ್ಲಿ ಸ್ನಾನ, ಜಪ, ಶ್ರಾದ್ಧ, ತರ್ಪಣ,

ದಾನಗಳು ವಿಹಿತವಾಗಿರುವಂತೆ ವ್ಯಾಖ್ಯಾನವು ವಿಹಿತವಾಗಿಲ್ಲ. ಆದ್ದರಿಂದಲೂ, ವ್ಯಾಖ್ಯಾನವು ಗ್ರಹಣಕಾಲದಲ್ಲೇ ನಡೆಯಿತೆಂದು ಊಹಿಸಲಾಗುವುದಿಲ್ಲ.

3. ಸುಮಧ್ವವಿಜಯದಲ್ಲಿ ವರ್ಣಿಸಿದ ಅನೇಕ □ಟನೆಗಳಿಗೆ ಬಹಳ ಸಮಯ ಬೇಕಾಗುವುದರಿಂದ 1275ರ 1□ಂ□29ನಿಮಿಷದ ಗ್ರಹಣವು ಸಂಭಾವಿತ ಎನ್ನುವ ಪಕ್ಷಕ್ಕೆ, 1296ರ 3□ಂ□35ನಿಮಿಷದ ಗ್ರಹಣವು ಮತ್ತೂ ಸಂಭಾವಿತ ಅಲ್ಲವೇ□

4. ಸಾಧಾರಣವಾಗಿ ಅಷ್ಟಮಹಾಮಂತ್ರಗಳು, ರಾಮಕೃಷ್ಣಾದಿ ಉಪಮಂತ್ರಗಳ ಜಪಕ್ಕೆ 1 ರಿಂದ 1.15 □ಂ□ಕಾಲ ಹಿಡಿಸುತ್ತದೆ ಎಂದು ಅಷ್ಟಮ□ದ ಯತಿಗಳ ಆಹ್ನಿಕ ನೋಡಿದವರಿಗೆ ಗೊತ್ತು. ಹೀಗಿರುವಾಗ, 1 □ಂ□ 29ನಿಮಿಷದ ಅವಧಿಯಲ್ಲಿ ಸ್ನಾನ, ಜಪಗಳ ನಂತರ ಸುದೀ□ ಪ್ರವಚನ ಅಸಂಭಾವಿತ.

5. ಆಚಾರ್ಯರು ಹಿಡಿದ ಸ್ನಾನಮಾಡಿದ್ದು ಮಂಜು, ಮಳೆಗಳಿಂದ ಕಾಣದೇ ಇರಬಹುದು ಇತ್ಯಾದಿ ನಿರಾಧಾರ ಊಹೆ. ಮೇಲೆ ಹೇಳಿದಂತೆ ಹಿಡಿದಸ್ನಾನವನ್ನೇ ಮಾಡಿರುವುದು. 1296ರ ಗ್ರಹಣವು ಆರಂಭವಾದದ್ದು ಪ್ರಾತ□8.37ಕ್ಕೆ ಆದ್ದರಿಂದ, ಕಣ್ವತೀರ್ಥದಲ್ಲಿ ಪ್ರಾತ□ಸ್ನಾನಮಾಡಿ ಬಂದವರು, ಅಲ್ಲಿಯವರೆಗೆ ಪ್ರವಚನಮಾಡಿದ್ದು ಸುದೀ□ ಎಂಬುದು ಸುಸಂಗತ.

6. ಆಚಾರ್ಯರು ಗ್ರಹಣವನ್ನು ಮುಗಿಸಿಕೊಂಡು ಬರುವಾಗಲೇ ಗಂಡವಾಟನ ಜಯ ಇತ್ಯಾದಿ ಪಾರಂತೀ ದೇವಸಾ□ನದ□ಂಪ್ರೋ□ಕ್ಷಣೆಗೆ ಅವತ್ತೇ ಮಾಡಿಸಿದರು ಎಂಬುದೂ ಸಲ್ಲದ ಊಹೆ. **ಉಪರಾಗೇ ಸ್ನಾತ್ವಾ ಗಮನಸಮಯೇ** ಎಂಬ ರಾಯರ ಮಾತು ಸಾವಕಾಶ. ಈ ಎರಡು ಪ್ರ□ೋಗಗಳನ್ನು ನೋಡಿರಿ. **ಅ□ ಕಾವೇರ್ಯಾಂ ಸ್ನಾತ್ವಾ ಗಮನಸಮಯೇ ರಂಗನಾಥಸ್ಯ ದರ್ಶನಂ ಕೃತವಂತಃ ; ಆ) ಗಂಗಾಯಾಂ ಸ್ನಾತ್ವಾ ಗಮನಸಮಯೇ ಶ್ರೀನಿವಾಸಸ್ಯ ದರ್ಶನಂ ಕೃತವಂತಃ** □ಅ□ಪ್ರೋಗದಲ್ಲಿ ಕಾವೇರಿಯಲ್ಲಿ ಸ್ನಾನಮಾಡಿ ಬರುವಾಗ □ಪ್ರಯಾಣಮಾಡುವಾಗ□ಅಂದೇ ರಂಗನಾಥನ ದರ್ಶನವಾಯಿತು ಎನ್ನಬಹುದು. □ಆ□ಪ್ರೋಗದಲ್ಲಿ ಗಂಗಾಸ್ನಾನಮಾಡಿ ಬರುವಾಗ ಶ್ರೀನಿವಾಸನ ದರ್ಶನವಾಯಿತು ಎನ್ನುವುದಕ್ಕೆ ಅಂದೇ ಆಯಿತು ಎನ್ನಲಾಗುವುದಿಲ್ಲ.

ಗಂಡವಾಟ, ಪೂರ್ವವಾಟ, □ವ,ಅಗ್ನಿ ಮೊದಲಾದ ಅನೇಕರು ಒಂದೇ ದಿನ ತಮ್ಮ ತಮ್ಮ ಪರೀಕ್ಷೆ ನಡೆಸಿದರು ಎಂಬುದಕ್ಕೂ ಸುಮಧ್ವವಿಜಯವಾಗಲೀ, ಅಣುಮಧ್ವವಿಜಯವಾಗಲೀ ಪ್ರಮಾಣವಲ್ಲ. ರಾಯರಮಾತಿಗೆ ಗ್ರಹಣದಲ್ಲಿ ಸ್ನಾನಮಾಡಿದ ನಂತರ □ಎಂದರೆ ಗ್ರಹಣಸ್ನಾನದ □ಟನೆಗಳು ನಡೆದ ನಂತರ□ ಪಾರಂತೀದೇವಾಲಯವನ್ನು ಕುರಿತು ಪ್ರಯಾಣಮಾಡುವಾಗ ಅಲ್ಲಲ್ಲಿ ಲ□ಮಾದ್ಯೈ□ಶ್ವರ್ಯವನ್ನು ತೋರಿಸಿದರು ಎಂದರ್ಥ. ರಾಯರಮಾತಿನಲ್ಲಿರುವ □ಕ್ತ್ವಾ□ಪ್ರತ್ಯಯವು ಉತ್ತರಕಾಲವನ್ನು ಸೂಚಿಸುವುದೇ ಹೊರತಾಗಿ, ಅವ್ಯವಹಿತ ಉತ್ತರಕಾಲವನ್ನಲ್ಲ.

7. ಅಣುಮಧ್ವವಿಜಯದ □□ನೇ ಶ್ಲೋಕದಲ್ಲಿರುವ **ಸಪದಿ**□ಕೂಡಲೆ□ಎಂಬ ಶಬ್ದವು ಸುಮಧ್ವವಿಜಯದ 36ನೇ ಶ್ಲೋಕದ **ದಿನಾರ್ಧಮಾತ್ರಾತ್** ಎನ್ನುವುದರ ಸಂಗ್ರಹ.

ಅರ್ಧದಿನದಲ್ಲಿ ಸಂಪ್ರೋಕ್ಷಣೆ ಮಾಡಿಸಿದರು ಎಂದಭಿಪ್ರಾಯ. ಗ್ರಹಣಸ್ನಾನಮಾಡಿ ಬಂದುಕೂಡಲೇ ಮಾಡಿಸಿದರು ಎಂದರ್ಥವಲ್ಲ. ಬಹುದೂರವಿರುವ **ಪಾರಂತೀ-ದೇವಸ್ಥಾನಕ್ಕೆ** ಗ್ರಹಣಾನಂತರವೇ ಬರಲು ಮನುಷ್ಯದೃಷ್ಟಿಯಿಂದ ಸಾಧ್ಯವೂ ಇಲ್ಲ. □ೋಗ-ಶಕ್ತಿಯಿಂದ ಹಾರಿಬಂದರು ಎಂಬುವುದಕ್ಕೂ ಪ್ರಮಾಣವಿಲ್ಲ. ಗ್ರಸ್ತೋದಯ ಗ್ರಹಣದಲ್ಲಿ ನಂತರ ಮೂರುದಿನಗಳು ಶುಭಕರ್ಮಗಳಿಗೆ ವರ್ಜ್ಯ. ಆದ್ದರಿಂದ, ಅಂದು ಈ □ೀರ್ಣೋದ್ಧಾರದ ಕಾರ್ಯ ಧರ್ಮಶಾಸ್ತ್ರಕ್ಕೆ ಸಮ್ಮತವೂ ಅಲ್ಲ. ಹೀಗಾಗಿ, ಚಾತುರ್ಮಾಸ್ಯದ ಮಧ್ಯೆ ಪ್ರಯಾಣ, ನದೀತರಣ ಮೊದಲಾದ ಅನಿಷ್ಟಾಪತ್ತಿಗಳು ಸಂಗತವಲ್ಲ.

ಶ್ರೀರ□ುವರ್ಯತೀರ್ಥರ □ೀಕೆಯಲ್ಲಿ **ಸಪದಿ** ಎಂಬುವುದನ್ನು ಮುಂದಕ್ಕೆ ಅನ್ವಯಮಾಡಿ □ೀ□್ರವಾಗಿ ಸರಿದಂತರ ಗ್ರಾಮದಲ್ಲಿ ಮಳೆಸುರಿಸಿದರು ಎಂದು ವ್ಯಾಖ್ಯಾನಿಸಿರುತ್ತಾರೆ.

**ಪಾರಂತೀಶಾಭಿನಂದೀ** ಎಂಬುದಕ್ಕೆ ಅನ್ವಯಮಾಡಿದರೂ, ಸಪದಿ ಎಂಬುದು ಕ್ರಿಯಾ-ವಿಶೇಷಣವಾದ್ದರಿಂದ ಅಭಿನಂದನೆಗೆ ವಿಶೇಷಣವಾಗಿ, ಈ ಅಭಿನಂದನೆ ಅಥವಾ ಸಂಪ್ರೋ□ಕ್ಷಣೆಯಲ್ಲಿ □ೀ□್ರತ್ವವನ್ನು ತೋರಿಸುವುದೇ ಹೊರತಾಗಿ, ಆಚಾರ್ಯರ ಆಗಮನದಲ್ಲಿ ಅಲ್ಲ. ಆಚಾರ್ಯರ ಆಗಮನವನ್ನು ಹೇಳುವ ಯಾವ ಶಬ್ದವೂ ಈ ಶ್ಲೋಕದಲ್ಲಿ ಇಲ್ಲ. ಗೂ□ಭಾವಪ್ರಕಾ□ಕೆಯಲ್ಲೂ, **ಶೀಘ್ರಂ ಸರ್ವಸಂಪತ್ಸಮೃದ್ಧಿಂ ತದ್ದೇವಾಲಯೇऽ-ಕರೋದಿತಿ ಭಾವಃ** □□ೀ□್ರವಾಗಿ ಆ ದೇವಾಲಯದಲ್ಲಿ ಎಲ್ಲಾ ಸಂತತ ಸಮೃದ್ಧಿಯನ್ನು ಮಾಡಿಸಿದರು□ಎಂದಿದೆ. □ೀ□್ರವಾಗಿ ಪಾರಂತೀದೇವಾಲಯಕ್ಕೆ ಬಂದರು ಎಂದು ಹೇಳಿಲ್ಲ.

8. □□ಆಚಾರ್ಯರು□ದ್ದಾರೆಂದು ಅ□ಾ□ನಿಗಳಿಗೆ□್ರಾಂತಿ ಬಂದಿತು□ ಎಂದು ಸುಮಧ್ವವಿಜಯದಲ್ಲಿ ಇಲ್ಲ. ಹೀಗಿದ್ದರೆ, ಒಂದು ವೇಳೆ ವಯಸಿ□ ಬಗೆ□ೂಹೆಯು ಸಂಗತವಾಗುತ್ತಿತ್ತೋ □ನೋ□ಹುಹಕಿ ಜನಗಳು ಜಗದು□ುಗಳು □□ದ್ದು ಹೋಗುತ್ತಿದ್ದಾರೆ ಹಾಸ್ಯಮಾಡಿದರು□□ದು ಸುಮಧ್ವವಿಜಯದಲ್ಲಿ ಹೇಳಿದೆ. ಈ ಹಾಸ್ಯಕ್ಕೂ, ವಯಸಿ□ೂ ಯಾವುದೇ ಸಂಬಂಧ ಇಲ್ಲ.

ಇಂದೂ ಸಹ 80ವರ್ಷದ ಶ್ರೀಪೇ□ಾವರಸ್ವಾಮಿಗಳುಕಣ್ವತೀರ್ಥದಲ್ಲಿ ಗ್ರಹಣಸ್ನಾನ ಮಾಡಿದಾಗ, ಯಾರಿಗೂ □ಅವರುಬಿದ್ದಾ□ರೆಂದುಭ್ರಾಂತಿ ಬಂದಿಲ್ಲ. ಹೀಗಿರುವಾಗ ವ□ೋಧರ್ಮಗಳೇ ಲೇಪವಾಗದಿದ್ದರಿಂದ, ನಿತ್ಯತರುಣರಂತೆ ಇರುವ ಆಚಾರ್ಯರ ವಿಷಯದಲ್ಲಿ □ದ್ದಾ□ೆಂಬ ಭ್ರಾಂತಿಯು ಹೇಗೆ ಬಂದೀತು□

9. ಈ ಪ್ರಸಂಗವು ಸುಮಧ್ವವಿಜಯದ 16ನೇ ಸರ್ಗದಲ್ಲಿ ಬಂದಿರುವುದರಿಂದ ಆಚಾರ್ಯರ ಬದರಿಕಾಶ್ರಮಗಮನಕ್ಕೆ ಹತ್ತಿರವಿರಬೇಕು ಎಂಬ ಊಹೆಯೂ ಸರಿಯಲ್ಲ.

□ಕೆಂದರೆ, ಈ ಸಂದರ್ಭದಲ್ಲಿ ಆಚಾರ್ಯರ □ಷ್ಯನೊಬ□ ಆಚಾರ್ಯರ ನಾನಾಮಹಿಮೆಗಳನ್ನು ವರ್ಣಿಸುತ್ತಿದ್ದಾನೆ□ೀ ಹೊರತಾಗಿ, ಅವು ನಡೆದ ಕ್ರಮದಲ್ಲೇ ಅಥವಾ ಆಚಾರ್ಯರ ಗಮನದ ಹತ್ತಿರಕಾಲದಲ್ಲೇ ವರ್ಣಿಸುತ್ತಿದ್ದಾನೆ ಎಂಬುದಕ್ಕೆ □ೂ

ಆಧಾರವಿಲ್ಲ. ಉದಾಹರಣೆಗೆ, ಇಲ್ಲಿ□ೀ ಗೋಮತೀತೀರದ □ಟನೆಯನ್ನೊಂದನ್ನು ವರ್ಣಿಸಲಾಗಿದೆ. □16ನೇಸರ್ಗ 2-5ಶ್ಲೋಕಗಳು□. ಇದು ನಡೆದದ್ದು ಆಚಾರ್ಯರ ಉತ್ತರಭಾರತ ಯಾತ್ರೆಯ ಸಂದರ್ಭದಲ್ಲಿ. ಅದರ ವರ್ಣನೆ ಬಂದದ್ದು 10ನೇಸರ್ಗದಲ್ಲಿ.

ವರ್ಣನೆಗಳಲ್ಲಿ ಹಿಂದು ಮುಂದು ಆಗಿದೆ□ಂದು ಗ್ರಂಥಕರ್ತರಾದ ಪಂಡಿತಾ-ಚಾರ್ಯರೇ ಒಪ್ಪಿದ್ದಾರೆ. ಅದು ಕೇವಲ ವಿನ□ೋಕ್ತಿಯಲ್ಲ. ವಸ್ತುತ□ಆಗಿದೆ. ಅದಕ್ಕೆ ಮೇಲಿನದು ಒಂದು ಉದಾಹರಣೆ ಅಷ್ಟೆ. ಅದಕ್ಕೂ ಕಾರಣವನ್ನು ತಾವೇ, □□ಕುತೂಹಲವಶಾತ್□ ಆಗಿದೆ□ಂದು ತಿಳಿಸಿದ್ದಾರೆ.

10. ಆದ್ದರಿಂದಲೇ ಭೀಮನಕಲ್ಲು ಎತ್ತಿ ಇಟ್ಟದ್ದು, ವಯಸಾದ□ ಮೇಲೆ□ೀ ಎಂದು ಊಹಿಸುವುದು ಸರಿಯಲ್ಲ. 30ಟನ□ತೂಕದ ಬಂಡೆಯನ್ನು ಎತ್ತಿ ತರುವುದು ವೃದ್ಧರ ವಿಷಯದಲ್ಲಿ ಅಪೂರ್ವ, ತರುಣರ ವಿಷಯದಲ್ಲಿ ಅಪೂರ್ವವಲ್ಲ ಎಂಬುವುದು ಹಾಸ್ಯಾಸ್ಪದ. ಬಾಲಕನಾಗಿದ್ದಾಗ ಹಾಲು-ಮೊಸರು ಮುಚ□ು ಬಂಡೆಯಿಟ್ಟ ಕಥೆಯ ಉಲ್ಲೇ□ ಸುಮಧ್ವವಿಜಯದಲ್ಲಿ ಇಲ್ಲವಾದ್ದರಿಂದ ಈ ಗ್ರಂಥದ ದೃಷ್ಟಿಯಿಂದ ಈ ಶಾರೀರ-ಬಲದ ವರ್ಣನೆ ಅಪೂರ್ವವೇ. ಪ್ರಮಾಣಾಂತರದಿಂದ ಅದು ತಿಳಿದು ಬಂದಿದೆ ಎಂದರೆ, ಆಚಾರ್ಯರು ಬ್ರಹ್ಮಚರ್ಯದಲ್ಲಿ ಭಾರಗಳನ್ನು ಎತ್ತಿದ್ದಕ್ಕೂ ಅಪೂರ್ವತೆ ಬರದೇ ಹೋಗಲಿ.

ಮೇಲಾಗಿ, ಅಪೂರ್ವತೆ ಎಂಬುವುದಕ್ಕೆ ಪ್ರಮಾಣಾಂತರ ಅಪ್ರಾಪ್ತವಾದ ವಿಷಯದ ನಿರೂಪಣೆ ಎಂದರ್ಥವೇ ಹೊರತಾಗಿ, ಆ ವಿಷಯನಿರೂಪಣೆಯಿಂದ ಅರ್ಥಾತ□ ಸಿದ್ಧವಾಗುವ ಮಹಾಪ್ರಮೇಯವು ಪ್ರಮಾಣಾಂತರದಿಂದ ಪ್ರಾಪ್ತವಾಗಿರಬಾರದು ಎಂದರ್ಥವಲ್ಲ. ಹಾಗೆನ್ನುವ ಪಕ್ಷದಲ್ಲಿ, ವಿಷ್ಣುಸರ್ವೋತ್ತಮತ್ವಕ್ಕೆ ಸಾಧಕವಾದ ಅನೇಕ ವೇದೇತಿಹಾಸಪುರಾಣಗಳ ವಚನಗಳು ಪರಸ್ಪರ ಅಪೂರ್ವತೆಯನ್ನು ಕಳೆದುಕೊಳ್ಳುತ್ತವೆ ಎನ್ನಬೇಕಾದೀತು □

ಆದ್ದರಿಂದ, ಆಚಾರ್ಯರ ಶಾರೀರಬಲಕ್ಕೆ ಪ್ರ□ೋಜಕವಾದ ಅನೇಕ □ಟನೆಗಳ ವರ್ಣನೆ ಬಾಲ್ಯದಲ್ಲೇ ಆಗಲಿ, ಮಧ್ಯವಯಸಿ□ನಲ್ಲೇಆಗಲಿ, ವಾರ್ಧಕ್ಯದಲ್ಲಿ ಆಗಲೀ ವರ್ಣಿತವಾದರೆ ಯಾವುದೇ ರೀತಿ ಅಪೂರ್ವತೆಯ ಹಾನಿಯಿಲ್ಲ.

ಭೀಮಸೇನದೇವರು ಸ್ವರ್ಗಾರೋಹಣ ಸಂದರ್ಭದಲ್ಲಿ ಬಂಡೆಯನ್ನು ಎತ್ತಿ ಇಟ್ಟದ್ದಕ್ಕೂ ಆಚಾರ್ಯರು ವಯಸಾ□ದಮೇಲೆ ಬಂಡೆ ಎತ್ತಿ ಇಟ್ಟದ್ದಕ್ಕೂ ಗಮನಾರ್ಹವಾದ ಯಾವುದೇ ಸಂಬಂಧವಿಲ್ಲ. ಹಾಗಾದರೆ, ಹನುಮಂತದೇವರೂ ವಯಸಾದ□ ಮೇಲೆ ಬೆಟ್ಟ ಹೊತ್ತುತಂದರೇ□ ಸಣ್ಣ ವಯಸಿ□ನಲ್ಲಿತಂದದ್ದು ಮಹಾತ್ಮೆ ಅಲ್ಲವೆ□ ಶ್ರೀಕೃಷ್ಣನು ಪರಂಧಾಮಕ್ಕೆ ಹೋಗುವ ಮುನ್ನ ಗೋವರ್ಧನ ಎತ್ತಿದನೇ□ □ಳು ವರ್ಷದ ಬಾಲಕ ಎತ್ತಿದ್ದು ಸೋ□ಗವಲ್ಲವೇ□

ಇಂಥಾ ಅಸಂಬದ್ಧ ವರ್ಣನೆಗಳಿಂದ □ದುಗರ ಮನಸು□ಎಲ್ಲೋ ಹೋದೀತೇ ಹೊರತಾಗಿ ಪ್ರಕೃತಕ್ಕೆ □ನೂಉಪ□ೋಗವಿಲ್ಲ.

11. ಆಚಾರ್ಯರು ತಮ್ಮ ದೇಹದ ಕಾಂತಿಯಿಂದ ಬೆಳಕು ಚೆಲ್ಲುತ್ತಾ, ಸಮುದ್ರಸ್ನಾನಕ್ಕೆ ಹೋದರು ಎಂಬುದು ಕೇವಲ ಊಹೆ. ಹಾಗೆ ಪ್ರಕಟವಾದ ದೇಹಕಾಂತಿಯು, ಹಿಡಿದ ಸ್ನಾನ ನಸುಗತ್ತಲೆಯಲ್ಲಿ ಮಾಡಿದಾಗ ಮುಚಿ□ಹೋಯಿತೇ□ಆದ್ದರಿಂದ, ಜನರಿಗೆ ಆಚಾರ್ಯರ ಸ್ನಾನ ಕಾಣದೇ ಹೋಯಿತೇ□

ಆಚಾರ್ಯರ □ಷ್ಯರೊಬ□ರುಆಚಾರ್ಯರ ಮಗು□ಲ್ಲಾಲೆ ನಿರ್ಮಾಲ್ಯವಿಸರ್ಜನೆ ಮಾಡಿದಾಗ, ಬೆಳಗಿನ ರ□ಾವದಲ್ಲಿ ದೀಪಹಚಿ□ಕೊಂಡಿದ್ದರ ಎಂದಿದೆ □ಸು.ವಿ.- □□ನೇಸರ್ಗ,□□ನೇಶ್ಲೋಕ□ಹಗೇಕೆ, ಆಚಾರ್ಯರ ದೇಹದಿಂದ ಬೆಳಕು ಚೆಲ್ಲಲಿಲ್ಲ□

12.1275ರ ಗ್ರಹಣ ಪೂರ್ಣಗ್ರಹಣಕಂಡ ಸ್ಥಳದಿಂದ 200 ಕಿ.ಮೀ. ದೂರ ಎನ್ನುತ್ತಾರೆ ಜಯಂತರು. 1296ರ ಪೂರ್ಣಸೂರ್ಯಗ್ರಹಣ ಮಂಗಳೂರಿನ ಮೇಲೇ ಹಾದು-ಹೋಗಿದೆ. ಯಾವುದು ಹೆಚ್ಚು ಸಂಭಾವಿತ?

13. ಶಾಸ್ತ್ರೀಯ ವ್ಯವಹಾರದಲ್ಲಿ ಗ್ರಹಣವೆಂದರೆ ರಾಹುವಿನಿಂದ ಗ್ರಸ್ತವಾಗುವುದೇ ಹೊರತಾಗಿ ಇಲ್ಲಿ ಕೇತುಗಳ ಪಾತ್ರವೇನೂ ಇಲ್ಲ. ಮೋಹಿನಿಯು ಕತ್ತರಿಸಿದ್ದು ರಾಹುವಿನ ತಲೆ, ಅದಕ್ಕೆ ಅಮೃತಸೇಕವಾಗಿ ಅಮರವಾಯಿತು, ಗ್ರಹವಾಯಿತು. ಪರ್ವಕಾಲದಲ್ಲಿ ಪೂರ್ವದ್ವೇಷದಿಂದ ಸೂರ್ಯಚಂದ್ರರನ್ನು ನುಂಗಲು ಹೋಗುತ್ತದೆ. ಅದನ್ನೇ ಉಪರಾಗ ಎನ್ನುತ್ತಾರೆ ಎಂದು ಭಾಗವತಾದಿ ಸಚ್ಛಾಸ್ತ್ರಗಳಿಂದ ತಿಳಿದುಬರುವ ವಿಷಯ. ಅದಕ್ಕೆ ತಕ್ಕಂತೆಯೇ ಅಮರಕೋಶಾದಿ ವಚನಗಳಿವೆ.

ನೆರಳುಗಳ Node ಮತ್ತು Antinodeಗಳನ್ನು ರಾಹು ಮತ್ತು ಕೇತು ಎಂದು ವ್ಯವಹರಿಸುವ ನವೀನ ಖಗೋಳಶಾಸ್ತ್ರದಂತೆ, ಗ್ರಹಣವು ರಾಹುಗ್ರಸ್ತವೋ ಅಥವಾ ಕೇತುಗ್ರಸ್ತವೋ ಆಗಿರಲಿ. ಅದರ ಹಿಂದೆ ಇರುವುದು, ಶಾಸ್ತ್ರೀಯವಾಗಿ ರಾಹುವೆಂಬ ದೈತ್ಯನ ಪಾತ್ರವೇ ಹೊರತಾಗಿ, ಕೇತುಗಳ ಪಾತ್ರವಲ್ಲ.

14. **ಸ್ತಂಭಿತಾಬ್ಧಿಃ** ಎಂಬುದಕ್ಕೆ ಶ್ರೀರಘುವರ್ಯರ ವ್ಯಾಖ್ಯಾನ ಹೀಗಿದೆ : **ಕದಾಚಿತ್ ಸೂರ್ಯೋಪರಾಗಕಾಲೇಽಖಿಲಜನೈಃ ಸಹ ಸ್ನಾನಾರ್ಥಂ ಕಣ್ವತೀರ್ಥಪ್ರದೇಶೇಬ್ಧಿಂ ಗತಃ ಮಧ್ವಸ್ತತ್ತೀರೇ ವೇದಾನ್ ವ್ಯಾಚಖ್ಯೌ । ತದ್ವ್ಯಾಖ್ಯಾಂ ಶ್ರುತ್ವಾ ಸದ್ಭಿಃ ಸ್ತುತೋಽಸೌ ತೇಷಾಂ ಸ್ವಸ್ಮಿನ್ ಭಕ್ತ್ಯತಿಶಯಾರ್ಥಂ ಸ್ನಾನಾನಂತರಂ ಕಟಾಕ್ಷಂ ಪ್ರಯುಜ್ಯಾಬ್ಧಿಂ ತಟಾಕವತ್ ಚಲನರಹಿತಂ ಕೃತವಾನ್** – ಎಂದರೆ ಒಮ್ಮೆ ಸೂರ್ಯಗ್ರಹಣದಲ್ಲಿ ಎಲ್ಲ ಜನರಿಂದಲೂ ಕೂಡಿಕೊಂಡು **ಸ್ನಾನಕ್ಕೋಸ್ಕರ** ಕಣ್ವತೀರ್ಥ ಪ್ರದೇಶದಲ್ಲಿ ಸಮುದ್ರಕ್ಕೆ ಪ್ರಯಾಣಮಾಡಿದ ಶ್ರೀಮದಾಚಾರ್ಯರು ಸಮುದ್ರತೀರದಲ್ಲಿ ವೇದಗಳನ್ನು ವ್ಯಾಖ್ಯಾನಮಾಡಿದರು. ಆ ವ್ಯಾಖ್ಯಾನವನ್ನು ಕೇಳಿ ಸಜ್ಜನರಿಂದ ಕೊಂಡಾಡಲ್ಪಟ್ಟ ಆಚಾರ್ಯರು, ಅವರಿಗೆ ತಮ್ಮಲ್ಲಿ ಭಕ್ತ್ಯತಿಶಯವನ್ನು ಹೆಚ್ಚಿಸಲು, **ಸ್ನಾನಾನಂತರ** ಕಟಾಕ್ಷವನ್ನು ಬೀರಿ ಸಮುದ್ರವನ್ನು ಕೆರೆ-ಯಿಂದ ಸ್ಥಗಿತಗೊಳಿಸಿದರು. ಇದನ್ನು ಪರಿಶೀಲಿಸಿದಾಗ, ಸುಮಧ್ವವಿಜಯದ ಮೂಲಕ್ಕೂ ಅನುಸಾರವಾಗಿ ಸ್ವರಸವಾಗಿ ತಿಳಿದುಬರುವುದು ಏನೆಂದರೆ, ಸಮುದ್ರಮುಟ್ಟಲು

ಅರ್ಹತೆಗಾಗಿ ಕಣ್ವತೀರ್ಥದಲ್ಲಿ ಸ್ನಾನ, ನಂತರ ಸುದೀರ್ಘಕಾಲ ಐತರೇಯ ಪ್ರವಚನ, ನಂತರ ಗ್ರಹಣನಿಮಿತ್ತ ಸ್ನಾನ ಎಂದೇ ಹೊರತಾಗಿ, ಗ್ರಹಣ ಹಿಡಿದಿದ್ದಾಗಲೇ ಸುದೀರ್ಘ-ಪ್ರವಚನ ನಂತರ ಬಿಟ್ಟಸ್ನಾನ ಎಂದಲ್ಲ. ಯಾರೂ ಸಹ ಗ್ರಹಣಸ್ನಾನಾರ್ಥವಾಗಿ ಹೋದವರು, ಹಿಡಿದ ಸ್ನಾನಕ್ಕೆ ಮಹತ್ತ್ವವನ್ನು ಕೊಡುವರೇ ಹೊರತಾಗಿ ಬಿಟ್ಟಸ್ನಾನಕ್ಕೆ ಅಲ್ಲ.

ಗ್ರಹಣಗಳ ಶೋಧನೆಯಲ್ಲಿ ನಾವು ಡಾ॥ ಬಿ.ಎನ್.ಕೆ.ಶರ್ಮರವರನ್ನು ಅಂಧಾನುಗ ಅಂಧರಂತೆ ಅನುಸರಿಸಿಲ್ಲ. ಗ್ರಹಣಗಳು ಆಚಾರ್ಯರ ಕಾಲನಿರ್ಣಯ ಮಾಡಲು ಸಹಾಯಕವೆಂದು ಮೊದಲು ವಿದ್ವಾಂಸರ ಗಮನವನ್ನು ಸೆಳೆದದ್ದು ಅವರ EUREKA ಎಂಬ ಲೇಖನ. ನಾವು ಶೋಧಿಸಿದಾಗ, 1317ರ ಗ್ರಹಣವು ದಕ್ಷಿಣಭಾರತಕ್ಕೆ ಕಂಡಿಲ್ಲವಾದ್ದರಿಂದ, 1296ರ ಗ್ರಹಣವು ಅತ್ಯಂತ ಸಂಭಾವಿತ ಎಂದು ತಿಳಿಸಿದ್ದೇವೆ.

*****

**ಸಾದರಸ್ವೀಕಾರ :**

## 1.''ವಿವೇಕ ಕುಸುಮ''

**(ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ನಿರೂಪಿತವಾದ ನವಕೃತ್ಯೋಪದೇಶದ ಸಾರ)**

ಸಂಪಾದಕ : **ಆನಂದತೀರ್ಥ ಶ್ರೀ ಮಠದ,** ಬಿ.ಇ.

ಪ್ರಕಾಶಕರು : **ಗೀತಾಪ್ರಕಾಶನ,** ವಿ□ಪುರ

*****

## 2. Chintamani Ragoonatha Charry and Contemporary Indian Astronomy

**By B.S.Shylaja**

Published by **Navakarnataka Publications Private Ltd.,**
Embassy Centre, Crescent Road, Bangalore - 560 001
in association with
**Bangalore Association for Science, Education**
Jawaharlal Nehru Planetarium, High Grounds, Bangalore - 560 001
email : info@taralaya.org ; website : www.taralaya.org

**Pages : 96, Price : Rs.75/-**

*****

# ಶ್ರೀಮದಾಚಾರ್ಯರ ಕಾಲನಿರ್ಣಯದಲ್ಲಿ ಸೂರ್ಯಗ್ರಹಣದ ಪಾತ್ರ

## (ಪೂಜ್ಯರಾದ ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರ ಲೇಖನಕ್ಕೆ ಮರುಪ್ರತಿಕ್ರಿಯೆ)

- ಜಯಂತ ವ್ಯಾಸನಕೆರೆ

ಸುಮಧ್ವವಿಜಯದಲ್ಲಿನ ಸೂರ್ಯಗ್ರಹಣಪ್ರಸಂಗದ ಆಧಾರದ ಮೇಲೆಯೇ ಶ್ರೀಮದಾಚಾರ್ಯರ ಕಾಲನಿರ್ಣಯವು ನಿರವಕಾಶವಾಗಿ ಸಾಧ್ಯವಿಲ್ಲದಿದ್ದರೂ ಶ್ರೀರಾಘವೇಂದ್ರಸ್ವಾಮಿಗಳ ಗೂಢಭಾವಪ್ರಕಾಶಿಕಾ, NASA ಸಂಸ್ಥೆಯು ನೀಡಿರುವ ಗ್ರಹಣಗಳ ವಿವರಗಳು[1] [N] ಮುಂತಾದವುಗಳ ಬೆಳಕಿನಲ್ಲಿ ನೋಡಿದಾಗ, ಸೂರ್ಯ-ಗ್ರಹಣಪ್ರಸಂಗವು ಶ್ರೀಮದಾಚಾರ್ಯರೇ ತಿಳಿಸಿರುವ ಅವರ ಕಾಲಕ್ಕೆ ಸಂವಾದಿಯಾಗಿದೆ, ಪೋಷಕವಾಗಿದೆ ಎಂದು [ಜ]ದಲ್ಲಿ ಪ್ರತಿಪಾದಿಸಲಾಗಿತ್ತು. ಅದರಲ್ಲಿ [ವಿ1]ವನ್ನೂ ವಿಮರ್ಶಿಸಲಾಗಿತ್ತು. ಈ ಬಗ್ಗೆ[ವಿ2]ದಲ್ಲಿ ವ್ಯಕ್ತವಾದ ಆಕ್ಷೇಪಗಳಿಗೆ ಇಲ್ಲಿ ಸಮಾಧಾನವನ್ನು ನೀಡಲಾಗಿದೆ.

[ವಿ1] ಹಾಗೂ [ವಿ2] ನಿಂತಿರುವುದು ಅನೇಕ ಕಲ್ಪನೆಗಳ ಮೇಲೆ. ಆದರೆ ಇವು ನಿರಾಧಾರ ಹಾಗೂ ಪ್ರಮಾಣವಿರುದ್ಧವಾಗಿದ್ದು ವಸ್ತುಸ್ಥಿತಿ ಬೇರೆಯೇ ಆಗಿದೆ.

[ವಿ1]ದಲ್ಲಿ ಕಾಲನಿರ್ಣಯವನ್ನು ಮಾಡಲು ''1296ರ ಗ್ರಹಣವನ್ನು ಬಿಟ್ಟು ಬೇರಾವ ಗ್ರಹಣವೂ ದಕ್ಷಿಣಕನ್ನಡದಲ್ಲಿ ಬಂದಿಲ್ಲ'' ಎಂಬ ವಿಚಾರವನ್ನು ಮುಂದಿಡಲಾಗಿತ್ತು. ಆದರೆ ಪ್ರಕೃತ ಕಾಲಾವಧಿಯಾದ ಕ್ರಿ.ಶ. 1260ರಿಂದ 1320ರ ನಡುವೆ ಕಣ್ವತೀರ್ಥದಲ್ಲಿ ಕಂಡ ಎಲ್ಲ ಸೂರ್ಯಗ್ರಹಣಗಳನ್ನು [ಜ]ದಲ್ಲಿ ಪಟ್ಟಿಮಾಡಿ ಅವುಗಳಲ್ಲಿ 1275ರ ಸೂರ್ಯಗ್ರಹಣವೇ ಅತ್ಯಂತ ಸಂಭಾವಿತ ಎಂದು ಅನೇಕ ಪ್ರಮಾಣಗಳಿಂದ ಪ್ರತಿಪಾದಿಸಲಾಗಿತ್ತು. ಈ ಬಗ್ಗೆ [ವಿ2]ದಲ್ಲಿ ''1296ರ ಗ್ರಹಣವು ಆಚಾರ್ಯರ ಕಾಲಕ್ಕೆ ಸೂಚಕ ಎಂದು ನಾವು ಹೇಳಿದ್ದು , ಆ ಅವಧಿಯಲ್ಲಿ ಬೇರೆ ಪೂರ್ಣಸೂರ್ಯಗ್ರಹಣವು ಬಂದಿಲ್ಲ ಎಂಬ ಅಭಿಪ್ರಾಯದಿಂದಲೇ ಹೊರತಾಗಿ, ಬೇರೆ ಗ್ರಹಣಗಳೇ ಬಂದಿಲ್ಲ ಎಂದಲ್ಲ ... ಸುಮಧ್ವವಿಜಯದಲ್ಲಿ ವರ್ಣಿತವಾದದ್ದೂ

---

1. ಈ ಲೇಖನದಲ್ಲಿ ಬಳಸಿರುವ ಆಕರಗಳ ಸಂಜ್ಞೆಗಳು ಹೀಗಿವೆ :

[N] = [N]ಆಕರ = http://eclipse.gsfc.nasa.gov. Eclipse Predictions by Fred Espenak (NASA's GSFC)

[ಜ] = [ಜ]ಆಕರ = ಜಯಂತ ವ್ಯಾಸನಕೆರೆ, ಶ್ರೀವ್ಯಾಸಮಧ್ವ, ಮೇ-ಜೂನ್ 2012.

[ವಿ1] = [ವಿ1]ಆಕರ = ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರು, ''ಶ್ರೀಮದಾಚಾರ್ಯರ ಕಾಲದ ಬಗ್ಗೆ ಹೊಸ ಬೆಳಕು'', 2012.

[ವಿ2] = [ವಿ2]ಆಕರ = ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರು, ಶ್ರೀವ್ಯಾಸಮಧ್ವ, ಆಗಸ್ಟ್ 2012.

ಮಹತ್ತ್ವಪೂರ್ಣವಾದ ಪೂರ್ಣಸೂರ್ಯಗ್ರಹಣವಿರಬೇಕು ಎಂದು ನಮ್ಮ ಊಹೆ.'' ಎಂಬುದಾಗಿ ಊಹಿಸಲಾಗಿದೆ.

ಆದರೆ, ಕ್ರಿ.ಶ. 866ರಿಂದ 1680ರ ನಡುವೆ ಕಣ್ವತೀರ್ಥದಲ್ಲಿ ಯಾವ ಪೂರ್ಣ-ಸೂರ್ಯಗ್ರಹಣವೂ ಸಂಭವಿಸಿಲ್ಲ. 1184ರಿಂದ 1517ರ ವರೆಗೆ 'annular' ಗ್ರಹಣವೂ ಪೂರ್ಣವಾಗಿ ಸಂಭವಿಸಿಲ್ಲ. ಅದರಂತೆ 1296ರ ಗ್ರಹಣವೂ ಕಣ್ವ-ತೀರ್ಥದಲ್ಲಿ ಪೂರ್ಣಸೂರ್ಯಗ್ರಹಣವಾಗಿ ಕಂಡೇ ಇಲ್ಲ ! ಈ ವಿಷಯವನ್ನು [ಜ]ದಲ್ಲಿಯೇ ಸ್ಪಷ್ಟವಾಗಿ ತಿಳಿಸಲಾಗಿತ್ತು. ಇನ್ನೂ ಹೆಚ್ಚಿನ ಸ್ಪಷ್ಟತೆಗಾಗಿ [N]ದಿಂದಲೇ ಸಂಪಾದಿಸಲಾದ ಚಿತ್ರ-1ನ್ನು ನೋಡಿ. ಇದು ಕಣ್ವತೀರ್ಥದಲ್ಲಿ 1296ರಲ್ಲಿ ಕಂಡ ಸೂರ್ಯಗ್ರಹಣದ ವಿವರ. ಇದರಲ್ಲಿ ಅಂದಿನದು ಒಂದು ಪಾರ್ಶ್ವಗ್ರಹಣ(partial eclipse) ಮಾತ್ರ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

Lat.: 12.726° N
Long.: 74.8774" E

Partial Solar Eclipse
Magnitude: 0.949

| Event | Date | Time (UT) | Alt | Azi |
|---|---|---|---|---|
| Start of partial eclipse (C1) : | 1296/10/28 | 03:07:20.5 | 029.1° | 116.4 |
| Maximum eclipse : | 1296/10/28 | 04:21:07.1 | 044.5° | 127.7 |
| End of partial eclipse (C4) : | 1296/10/28 | 05:44:07.1 | 057.8° | 151.8 |

ಚಿತ್ರ - 1

ಇನ್ನು ಕಣ್ವತೀರ್ಥದಲ್ಲಿ ಪೂರ್ಣಸೂರ್ಯಗ್ರಹಣವಾಗಿ ಕಾಣದೇ ಪಾರ್ಶ್ವ-ಗ್ರಹಣವಾಗಿದ್ದರೂ, ಬೇರೆಲ್ಲೋ ಪೂರ್ಣಸೂರ್ಯಗ್ರಹಣವಾಗಿ ಕಂಡ 1296ರ ಗ್ರಹಣವು, ತನ್ನಂತೆಯೇ ಬೇರೆಡೆ ಪೂರ್ಣಸೂರ್ಯಗ್ರಹಣವಾಗಿ ಕಂಡು ಕಣ್ವತೀರ್ಥ-ದಲ್ಲಿ ಪಾರ್ಶ್ವಗ್ರಹಣವಾಗಿ ಕಂಡ ಇತರ ಗ್ರಹಣಗಳಿಗಿಂತ ವಿಲಕ್ಷಣವೆನಿಸುತ್ತದೆ ಎಂಬುದು ಅಭಿಪ್ರೇತವಾಗಿದ್ದಲ್ಲಿ, ಅದು "The Madhva Vijaya itself does not say that the eclipse was visible in Kanva Tirtha. It simply says Uparagahetoh - on account of an Eclipse. What if the people who had gathered accepted the Acharya's prediction of an Eclipse on March 14 (1317) and wanted it to be celebrated.'' ಎಂಬ[1] ಪ್ರತಿಪಾದನೆಯಷ್ಟೇ (!) ಪೂರ್ವಾಗ್ರಹದಿಂದ ಕೂಡಿದೆ ಎಂದೆನಿಸೀತು.

ಸೋಜಿಗವೆಂದರೆ [ವಿ1] ಹಾಗೂ [ವಿ2]ಗಳಲ್ಲಿ [N]ವನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿಲ್ಲ. ಶ್ರೀಮದಾಚಾರ್ಯರ ಬದರಿಕಾಶ್ರಮಪ್ರವೇಶವು ಕ್ರಿ.ಶ. 1280

1. Dr. B.N.K. Sharma, ""The solar eclipse on March 14th 1317'' in the booklet ""My concluding research papers'', 2004.

ಅಥವಾ ಅದಕ್ಕೂ ಮುನ್ನ ಎನ್ನುವುದು ತಾನೇ [ವಿ1] ಹಾಗೂ [ವಿ2]ಗೆ ಪ್ರತಿಪಕ್ಷ. ಆ ಪಕ್ಷಕ್ಕೆ ಅಂದಿನ ಸೂರ್ಯಗ್ರಹಣವು 1280ಕ್ಕಿಂತ ಮುಂಚೆಯೇ ಸಂಭವಿಸಿದೆ ಎನ್ನುವುದೇ ತಾನೇ ಅಭಿಪ್ರೇತ. ಹೀಗಿರುವಾಗ 1281ರಿಂದ 1300ರ ನಡುವೆಯಷ್ಟೇ ಸಂಭವಿಸಿರುವ ಗ್ರಹಣಗಳ ನಕ್ಷೆಯನ್ನು ಮಾತ್ರ [ವಿ1]ರಲ್ಲಿ ತೋರಿಸಿ, 1296ರ ಗ್ರಹಣವನ್ನು ಕಣ್ವತೀರ್ಥದಲ್ಲಿ ಪೂರ್ಣಸೂರ್ಯಗ್ರಹಣವೆಂದು ಕಲ್ಪಿಸಿಕೊಂಡು, ಅಂತಹ ಗ್ರಹಣವೇ ಇನ್ನೊಂದಿಲ್ಲವೆಂದು ಹೇಳಿ, ಅದರ ಆಧಾರದ ಮೇಲೆ ಕಾಲನಿರ್ಣಯವನ್ನು ಮಾಡುವುದು ಒಂದು ನಿಷ್ಪಕ್ಷಪಾತ ಚಿಂತನೆಯಾದೀತೇ?

ಇನ್ನು ಚೂಡಾಮಣಿಯೋಗದ ಬಗ್ಗೆ. ಸೂರ್ಯಗ್ರಹಣವು ಭಾನುವಾರವಾಗುವಂತೆ ಚಂದ್ರಗ್ರಹಣವು ಸೋಮವಾರವಾದರೂ ಚೂಡಾಮಣಿ ಯೋಗವೆನ್ನುತ್ತಾರೆ (ರವಿಗ್ರಹಃ ಸೂರ್ಯವಾರೇ ಸೋಮೇ ಸೋಮಗ್ರಹಸ್ತಥಾ । ಚೂಡಾಮಣಿರಿತಿ ಖ್ಯಾತಃ ...). ಈ ಯೋಗವು ಅಪರೂಪವಾದದ್ದೇನಲ್ಲ. ಆಗಾಗಿ ಸಂಭವಿಸುತ್ತಲೇ ಇರುವಂಥದ್ದು. ಉದಾಹರಣೆಗೆ ಕ್ರಿ.ಶ.1200ರ ವಿಜಯದಶಮಿಯಿಂದ 1318ರ ಮಧ್ವನವಮಿ-ಯವರೆಗೆ[1] ಕಣ್ವತೀರ್ಥದಲ್ಲೇ ಕಂಡ ಒಟ್ಟು 41 ಸೂರ್ಯಗ್ರಹಣಗಳಲ್ಲಿ 8 ಭಾನುವಾರ-ವಾಗಿವೆ. ಅದೇ ಅವಧಿಯಲ್ಲಿ ಕಣ್ವತೀರ್ಥದಲ್ಲಿ ಕಂಡದ್ದು ಒಟ್ಟು 195 ಚಂದ್ರಗ್ರಹಣಗಳು. ಅವುಗಳಲ್ಲಿ 41 ಸೋಮವಾರ[2] ಸಂಭವಿಸಿವೆ. ಅವುಗಳಲ್ಲೂ ಛಾಯಾಕಲ್ಪವಾಗದ ಚಂದ್ರಗ್ರಹಣಗಳು 27. ಆದ್ದರಿಂದ, 1296ರ ಗ್ರಹಣವು ಚೂಡಾಮಣಿಯಾದ ಮಾತ್ರಕ್ಕೇ ಅದೇ ಸುಮಧ್ವವಿಜಯದಲ್ಲಿ ಹೇಳಿದ ಗ್ರಹಣವಿರಬೇಕು ಎಂದು ಊಹಿಸುವುದು ಸರಿಯಲ್ಲ. ಮಿಗಿಲಾಗಿ, ಸಾಲುಸಾಲಾಗಿ ಗ್ರಹಣಗಳಾಗುವುದನ್ನು ಅನಿಷ್ಟ ಶಕುನ- ವೆಂದು ಕಾಣಲಾಗುತ್ತದೆ. ಆದ್ದರಿಂದ, 1275ರಲ್ಲಿ ಕೇವಲ 45 ದಿನಗಳ ಅಂತರದಲ್ಲಿಯೇ 4 ಗ್ರಹಣಗಳಾಗಿರುವುದಕ್ಕೆ ಧಾರ್ಮಿಕ ಮಹತ್ತ್ವವಿಲ್ಲವೆಂದು ಹೇಳಲಾಗುವುದಿಲ್ಲ. 1275ರ ಮೇ 26ರಂದು (ಭಾನುವಾರ) ಕಂಡ ಶುಕ್ರಗ್ರಹಕೃತಸೂರ್ಯಗ್ರಹಣವನ್ನೂ ಒಂದರ್ಥದಲ್ಲಿ ಚೂಡಾಮಣಿಯೆನ್ನಬಹುದು. 1275ರ ಜೂನ್ 25ರಂದು ಕಂಡ ಸೂರ್ಯಗ್ರಹಣದ ಆಸುಪಾಸಿನಲ್ಲಿ ಮತ್ತೊಂದು ಪರ್ವಕಾಲವಾದ ಕರ್ಕಸಂಕ್ರಮಣವೂ ಒದಗಿದೆ (ಜೂನ್ 15ರಂದು ಸಾಯನ ಕರ್ಕ ಸಂಕ್ರಮಣವಾದರೆ ಜೂನ್ 29ರಂದು

---

1. [ವಿ1]ದಲ್ಲಿ ಶ್ರೀಮದಾಚಾರ್ಯರ ಬದರಿಕಾಶ್ರಮಪ್ರವೇಶಕಾಲವನ್ನು 1317 ಎಂದು ಬಹು ಬಾರಿ ಹೇಳಲಾಗಿದೆ. ಆದರೆ ಪಿಂಗಳ ಸಂವತ್ಸರದ ಮಾಘಶುದ್ಧನವಮಿಯು 1318ರಲ್ಲಿ ಒದಗಿದ್ದು, [ವಿ1] ಪ್ರಮಾಣವೆಂದು ಒಪ್ಪುವ ಅಣುಮಧ್ವಚರಿತಕ್ಕೆ ಅನುಗುಣವಾಗಬೇಕೆಂದಿದ್ದರೂ ಅದು 1318 ಎಂದಿರಬೇಕಿತ್ತು.
2. ಸೋಮವಾರ ಬೆಳಿಗ್ಗೆ 2.00 ಘಂಟೆಯಿಂದ ಮಂಗಳವಾರ ಬೆಳಿಗ್ಗೆ 2.00 ಘಂಟೆಯವರೆಗಿನ ಕಾಲಾವಧಿಯಲ್ಲಿ ಗ್ರಹಣಸ್ಪರ್ಶವಾದವುಗಳನ್ನು ಇಲ್ಲಿ ಪರಿಗಣಿಸಲಾಗಿದೆ. ಪರ್ಯಾಯ/ಇನ್ನೂ ಹೆಚ್ಚಿನ ಪರಿಷ್ಕೃತ ಲಕ್ಷಣಗಳಿಂದ 41 ಎಂಬ ಸಂಖ್ಯೆಯಲ್ಲಿ ಒಂದೋ ಎರಡು ಬದಲಾವಣೆಗಳಾಗಬಹುದೇ ಹೊರತು ಇಲ್ಲಿನ ಆಶಯಕ್ಕೆ ಯಾವುದೇ ಧಕ್ಕೆ ಇಲ್ಲ.

ನಿರಯಣ ಕರ್ಕ ಸಂಕ್ರಮಣ). ಇವುಗಳ ಸಾಮೀಪ್ಯವು 1275ರ ಸೂರ್ಯಗ್ರಹಣದ ಧಾರ್ಮಿಕಮಹತ್ತ್ವವನ್ನು ಹೆಚ್ಚಿಸುವುದು. ಇನ್ನು ಬದರಿಕಾಶ್ರಮಗಮನಕ್ಕೆ ಅಂದಿನ ಸೂರ್ಯಗ್ರಹಣವು ಹತ್ತಿರವಿರಬೇಕೆಂದೇನಿಲ್ಲ ಎನ್ನುವ [ವಿ1] ಹಾಗೂ [ವಿ2] 1200ರಿಂದ 1280ರ ನಡುವೆ ಕಂಡ ಚೂಡಾಮಣಿ ಸೂರ್ಯಗ್ರಹಣಗಳನ್ನು ಪರಿಗಣಿಸುವುದೇ ಇಲ್ಲ. ಮಿಗಿಲಾಗಿ ಸುಮಧ್ವವಿಜಯದಲ್ಲಿ ಉಲ್ಲೇಖಿಸಿರಬೇಕೆಂದರೆ ಅದೊಂದು ಮಹತ್ತ್ವ-ಪೂರ್ಣವಾದ ಗ್ರಹಣವಾಗಿರಬೇಕೆನ್ನುವುದಷ್ಟೇ ನ್ಯಾಯ್ಯ. ಆ ಮಹತ್ತ್ವವು ಧಾರ್ಮಿಕ ಹಿನ್ನೆಲೆಯದ್ದೇ ಆಗಿರಬೇಕೆಂದು ಹೇಳಲಾಗುವುದಿಲ್ಲ. ಆದ್ದರಿಂದ, ಈ ಸಹಸ್ರಮಾನದಲ್ಲೇ ವಿಶಿಷ್ಟವಾದ 1275ರ ಸರಣಿ ಗ್ರಹಣಗಳಲ್ಲೊಂದಾದ ಸೂರ್ಯಗ್ರಹಣವನ್ನು ಸಕಲ-ಮತಿಗಳು ಆಚರಿಸಿದ್ದನ್ನೇ, ಸುಮಧ್ವವಿಜಯದಲ್ಲಿ ಸಾರಿರಬೇಕೆಂಬುದು ಸಮಂಜಸವೇ ಸರಿ.

ಇನ್ನು ಗ್ರಹಣಸ್ನಾನದ ಬಗ್ಗೆ : ಇಲ್ಲಿ ಗೂಢಭಾವಪ್ರಕಾಶಿಕೆಯನ್ನು [ವಿ2] ಪರಿಗಣಿಸಿಯೇ ಇಲ್ಲ ! ಗೂಢಭಾವಪ್ರಕಾಶಿಕೆಯಲ್ಲಿ 'ಕದಾಚಿತ್ ಸೂರ್ಯಗ್ರಹಣಕಾಲೇ ಸಮುದ್ರೇ ಸ್ನಾತ್ವಾ ತತ್ತೀರೇ ಋಕ್‌ಶಾಖಾಗತಸೂಕ್ತವಿಶೇಷಂ ಶಿಷ್ಯೇಭ್ಯೋ ವ್ಯಾಚಖ್ಯಾ-ವಿತಿ ಭಾವಃ' ಎಂಬುದಾಗಿದೆ. ಎಂದರೆ ಸೂರ್ಯಗ್ರಹಣಕಾಲದಲ್ಲಿ ಸಮುದ್ರದಲ್ಲಿ ಸ್ನಾನ ಮಾಡಿ ಐತರೇಯ ಶ್ರುತಿಯನ್ನು ವ್ಯಾಖ್ಯಾನಮಾಡಿದರೆಂದಾಗುತ್ತದೆ. ಇದರಿಂದ ಐತರೇಯ ಶ್ರುತಿಯ ವ್ಯಾಖ್ಯಾನಕ್ಕೂ ಮುಂಚೆಯೇ ಸಮುದ್ರಸ್ನಾನ ಮಾಡಿದ್ದರೆಂಬುದು ಸಂದೇಹಾತೀತವಾಗಿ ಸ್ಫುಟಪಡುವುದು. ಸುಮಧ್ವವಿಜಯದಲ್ಲಿ ಶ್ರುತಿವ್ಯಾಖ್ಯಾನದ ಬಳಿಕ ನಿರೂಪಿತವಾಗಿರುವುದು 'ಸಸ್ನುಸ್ತೇ ದ್ವಿಜನಿಕರಾಃ ಪ್ರಶಸ್ತಕಾಲೇ' ಎಂಬುದು. ಎಂದರೆ, ಶ್ರುತಿವ್ಯಾಖ್ಯಾನದ ಅನಂತರ ಮತ್ತೊಂದು ಸಮುದ್ರ ಸ್ನಾನವೆಂದಾಗುವುದು. ಆದ್ದರಿಂದ [ಜ]ದಲ್ಲಿ ಗೂಢಭಾವಪ್ರಕಾಶಿಕೆಯಲ್ಲಿ ಹೇಳಿರುವ ಸಮುದ್ರಸ್ನಾನವನ್ನು ಗ್ರಹಣ ಹಿಡಿದ ಸ್ನಾನವೆಂದೂ 'ಸಸ್ನುಸ್ತೇ ...' ಎನ್ನುವ ಸ್ನಾನವನ್ನು ಗ್ರಹಣ ಬಿಟ್ಟ ಸ್ನಾನವೆಂದೂ ನಿರ್ಣಯಿಸಲಾಗಿತ್ತು. [ವಿ2]ದಲ್ಲಿ ಗೂಢಭಾವಪ್ರಕಾಶಿಕೆಯಲ್ಲಿ ಹೇಳಿರುವ ಸ್ನಾನವನ್ನು ಗಣನೆಗೆ ತೆಗೆದುಕೊಳ್ಳದೇ ''(ಸುಮಧ್ವವಿಜಯದಲ್ಲಿ)'ಸಸ್ನುಸ್ತೇ ದ್ವಿಜನಿಕರಾಃ ಪ್ರಶಸ್ತಕಾಲೇ' ಎಂದಿದೆ. ಗ್ರಹಣ ಹಿಡಿದ ಕಾಲವು ಪ್ರಶಸ್ತಕಾಲವೇ ಹೊರತಾಗಿ, ಗ್ರಹಣಬಿಟ್ಟ ಮೇಲಿನ ಕಾಲ ಪರ್ವಕಾಲವಲ್ಲ''ಎಂಬ ಯುಕ್ತಿಯಿಂದ ಸುಮಧ್ವವಿಜಯದಲ್ಲಿ ಹೇಳಿದ ಸ್ನಾನವನ್ನು ಗ್ರಹಣ ಹಿಡಿದ ಸ್ನಾನವೆಂದು ಊಹಿಸಲಾಗಿದೆ. ಆದರೆ ಮೊದಲೇ ಹೇಳಿದಂತೆ ಇದು ರಾಯರ ಮಾತಿಗೆ ವಿರುದ್ಧ.

ಮಿಗಿಲಾಗಿ, ಸುಮಧ್ವವಿಜಯದಲ್ಲಿ 'ಪರ್ವಕಾಲೇ' ಎಂಬುದಾಗಿ ಇಲ್ಲ. 'ಪ್ರಶಸ್ತಕಾಲೇ' ಎಂದಿದೆಯಷ್ಟೇ. ಗ್ರಹಣ ಬಿಟ್ಟ ಮೇಲಿನ ಸ್ನಾನಕ್ಕೆ ಗ್ರಹಣ ಬಿಟ್ಟ ಮೇಲಿನ ಕಾಲವೇ ಪ್ರಶಸ್ತವಲ್ಲವೇ?! ಗ್ರಹಣ ಬಿಟ್ಟ ಸ್ನಾನವನ್ನು ಮಾಡದಿದ್ದಲ್ಲಿ 'ಮುಕ್ತೌ ಯಸ್ತು ನ ಕುರ್ವೀತ ಸ್ನಾನಂ ಗ್ರಹಣಸೂತಕೇ । ಸ ಸೂತಕೀ ಭವೇತ್ ತಾವತ್ ಯಾವತ್ ಸ್ಯಾದಪರೋ ಗ್ರಹಃ' ಎಂಬುದಾಗಿ ಪ್ರತ್ಯವಾಯ ಹೇಳಿರುವುದನ್ನು ಗಮನಿಸಬೇಕು. ಆದ್ದರಿಂದ ಈ ಯುಕ್ತಿಯೂ ಕೂಡುವುದಿಲ್ಲ.

ಮಿಗಿಲಾಗಿ, ಸುಮಧ್ವವಿಜಯದಲ್ಲಿ (16/11) 'ಬಾಲವೃದ್ಧರಿಂದೊಡಗೂಡಿ ಎಲ್ಲ ಗ್ರಾಮಸ್ಥರೂ ತತ್ಕ್ಷಣವೇ ಕಣ್ವತೀರ್ಥದಲ್ಲಿ ಮಿಂದು ಒದ್ದೊದ್ದೆಯಾಗಿಯೇ ಸೂರ್ಯ-ಗ್ರಹಣಕ್ಕಾಗಿ ಸಮುದ್ರಕ್ಕೆ ಆಗಮಿಸದರು' ಎಂಬುದಾಗಿದೆ. ಒದ್ದೊದ್ದೆಯಾಗಿ ಸಮುದ್ರಕ್ಕೆ ಆಗಮಿಸಿದರೆಂದರೆ, ಅದು ತತ್‌ಕ್ಷಣವೇ ಮಾಡಲಾಗುವ ಸ್ನಾನಕ್ಕೆಂದೇ ಅರ್ಥ. ರಾಯರ ಮಾತಿನಂತೆ, ಹಾಗೆ ಬಂದವರು ತತ್ಕ್ಷಣವೇ ಗ್ರಹಣಹಿಡಿದ ಸ್ನಾನ ಮಾಡಿದ್ದರೆ, ಅದು ಅರ್ಥವತ್ತಾಗಿಯೂ ತೋರುತ್ತದೆ. ಅದೇ ಏನಾದರೂ [ವಿ2]ದಲ್ಲಿ ಹೇಳಿದಂತೆ, ಸುದೀರ್ಘವಾದ ವ್ಯಾಖ್ಯಾನದ ನಂತರ ಗ್ರಹಣಹಿಡಿದ ಸ್ನಾನವಾಗಿದ್ದರೆ, ಕಣ್ವತೀರ್ಥದಲ್ಲಿ ಮಿಂದವರು ಮೈ ಒರೆಸಿಕೊಂಡು ಬಂದು ಸ್ವಚ್ಛವಾಗಿ ಪಾಠ ಕೇಳುವುದನ್ನು ಬಿಟ್ಟು ನಿಷ್ಕಾರಣವಾಗಿ ಎಲ್ಲರೂ ಒದ್ದೊದ್ದೆಯಾಗಿ ಬಂದು ಒದ್ದಾಡಿದ್ದರೆ ಅದು ಹಾಸ್ಯಾಸ್ಪದವೆನ್ನಿಸುತ್ತಿರಲಿಲ್ಲವೇ?

ಶ್ರೀರಘುವರ್ಯತೀರ್ಥರ ವ್ಯಾಖ್ಯಾನವು ಈ ಭಾಗದಲ್ಲಿ ಸಾವಕಾಶವಾಗಿದ್ದು ಅದಕ್ಕೆ ಎರಡು ಅರ್ಥಗಳು ಸಾಧ್ಯ. ಇದರಲ್ಲಿ ಒಂದನ್ನು ಮಾತ್ರ [ವಿ2]ನಲ್ಲಿ ಕೊಡಲಾಗಿದೆ. ರಾಯರ ನಿರವಕಾಶವಾದ ವಾಕ್ಯಕ್ಕೆ ಸಮನ್ವಿತವಾಗುವ ಮತ್ತೊಂದು ಅರ್ಥ ಹೀಗಿದೆ : ''ಒಮ್ಮೆ ಸೂರ್ಯಗ್ರಹಣಕಾಲದಲ್ಲಿ, ಎಲ್ಲ ಜನರಿಂದಲೂ ಕೂಡಿಕೊಂಡು ಸ್ನಾನಕ್ಕೋಸ್ಕರ ಕಣ್ವತೀರ್ಥಪ್ರದೇಶದಲ್ಲಿ ಸಮುದ್ರಕ್ಕೆ ಪ್ರಯಾಣಮಾಡಿದ ಶ್ರೀಮದಾಚಾರ್ಯರು, ಸಮುದ್ರತೀರದಲ್ಲಿ ವೇದಗಳನ್ನು ವ್ಯಾಖ್ಯಾನ ಮಾಡಿದರು....''. [ವಿ2]ನಲ್ಲಿರುವ ವಾಕ್ಯಕ್ಕೂ ಈ ವಾಕ್ಯಕ್ಕೂ ಎರಡು ಅರ್ಧವಿರಾಮ (comma)ಗಳಷ್ಟೇ ವ್ಯತ್ಯಾಸ. ಆದರೆ, ಈ ಅರ್ಥದಂತೆ ಸೂರ್ಯಗ್ರಹಣಕಾಲದಲ್ಲೇ ವೇದವ್ಯಾಖ್ಯಾನ ಮಾಡಿದರೆಂಬುದಾಗಿ ಅದು ರಾಯರ ಮಾತಿಗೆ ಸಂಪೂರ್ಣ ಸರಿಹೊಂದುತ್ತದೆ. ಆಗ 'ಸ್ನಾನಾರ್ಥಂ' ಎಂಬುದಕ್ಕೆ ಹಿಡಿದ ಹಾಗೂ ಬಿಟ್ಟ ಸ್ನಾನಕ್ಕೋಸ್ಕರವೆಂದೂ, 'ಸ್ನಾನಾನಂತರಂ' ಎಂಬುದಕ್ಕೆ ಹಿಡಿದ ಹಾಗೂ ಬಿಟ್ಟಸ್ನಾನಗಳೆರಡೂ ಮುಗಿದಮೇಲೆಂಬುದಾಗಿಯೂ ಅರ್ಥವಾಗುವುದರಿಂದ ಯಾವ ಗೊಂದಲಕ್ಕೂ ಅವಕಾಶವಿಲ್ಲ. ಇದರಂತೆಯೇ ಶ್ರೀಛಲಾರೀ ಆಚಾರ್ಯರ 'ಉಪರಾಗಕಾಲೇ' ಎಂಬುದೂ ಸಾವಕಾಶ. ಅದಕ್ಕೂ ಉಪರಾಗಸಂಬಂಧಿಕಾಲೇ - ಗ್ರಹಣಮೋಕ್ಷಕಾಲೇ ಎನ್ನುವುದೇ ಸರಿಯಾದ ಅರ್ಥ.

[ವಿ2]ನಲ್ಲಿ ಗ್ರಹಣಕಾಲದಲ್ಲಿ ವ್ಯಾಖ್ಯಾನವು ವಿಹಿತವಾಗಿಲ್ಲವೆಂದು ಹೇಳಲಾಗಿದೆ ! ಮೊದಲೇ ಹೇಳಿದಂತೆ ರಾಯರ ಮಾತು ಹಾಗೂ ಸುಮಧ್ವವಿಜಯಕ್ಕೆ ಇದು ನೇರವಾಗಿ ವಿರೋಧಿ. ಮಿಗಿಲಾಗಿ, ಸ್ವಾಧ್ಯಾಯಪ್ರವಚನಗಳಿಗೆ ವಿಹಿತವಾಗದ ಸಮಯವೆಂಬುದೇ ಇಲ್ಲ, ವಿಷ್ಣುಸರ್ವೋತ್ತಮತ್ವವನ್ನು ಸರ್ವದಾ ಪ್ರತಿಪಾದಿಸಬೇಕಾದದ್ದು ಯತಿಗಳ ಪರಮಮುಖ್ಯ ಕರ್ತವ್ಯ. 'ಬುಧೋಽಭಿಧಾನಂ .... ಯತಿರ್ವಿಶೇಷಾತ್' ಎಂಬುದನ್ನೂ ಇಲ್ಲಿ ಸ್ಮರಿಸಬೇಕು. ಅದರಲ್ಲೂ, ಪೀಠಾಧೀಶರಾದವರು, ಸಾವಿರಾರು ಜನರು ಸೇರಿರುವ ಸಂದರ್ಭದಲ್ಲಿ ಅವರನ್ನುದ್ದೇಶಿಸಿ ಪ್ರವಚನ ಮಾಡುವುದು ಸಮಯೋಚಿತವೇ ಹೊರತು

[ವಿ2]ದಲ್ಲಿ ಸೂಚಿಸಿರುವಂತೆ ''ಗ್ರಹಣಕಾಲದಲ್ಲಿ ಸ್ನಾನ, ಜಪ, ಶ್ರಾದ್ಧ ತರ್ಪಣ, ದಾನಗಳನ್ನು'' ಮಾಡುವುದಲ್ಲ.

ಆದ್ದರಿಂದಲೇ, ಅಷ್ಟಮಹಾಮಂತ್ರ, ರಾಮಕೃಷ್ಣಾದಿ ಮಂತ್ರಗಳ ಜಪದಲ್ಲೇ ಸಮಯ ಕಳೆಯುವುದರಿಂದ, ಅವುಗಳ ನಂತರ ಸುದೀರ್ಘ ಪ್ರವಚನ ಅಸಂಭಾವಿತ ಎಂಬ ಊಹೆಯೂ ಸೊಗಸದು. ಹಿಂದೆ ವಿವರಿಸಿದಂತೆ ಸುಮಧ್ವವಿಜಯದಿಂದ ತಿಳಿಯು-ವುದೆಂದರೆ ಅಂದು ಗ್ರಹಣಸಮಯದ ಸಿಂಹಪಾಲು ಪ್ರವಚನದಲ್ಲಿ ವಿನಿಯೋಗ-ವಾಯಿತೆಂದಷ್ಟೇ. ಉಳಿದ ಜಪಾದಿಗಳಲ್ಲಿ ಯಾವುದನ್ನು ಮಾಡಿದರೆಂಬುದಾಗಲೀ ಎಷ್ಟು ಹೊತ್ತು ಮಾಡಿದರೆಂಬುದಾಗಲೀ [ವಿ2]ದ ಊಹೆಯಷ್ಟೇ. ಸರ್ವದಾ ಸರ್ವವೈಷ್ಣವ-ಮಂತ್ರಜಾಪಕರಿಗೆ ಜಪಾದಿಗಳಿಗೆ 1 ರಿಂದ 1 1/4 ಘಂಟೆ ಕಾಲ ಹಿಡಿಸಿರಬೇಕೆನ್ನುವ ಊಹೆಯೂ ಸರಿಯಲ್ಲ.

ಸುಮಧ್ವವಿಜಯದ ಗ್ರಹಣಪ್ರಸಂಗದಲ್ಲಿ ಐತರೇಯಶ್ರುತಿವ್ಯಾಖ್ಯಾನವಷ್ಟೇ ಅಲ್ಲದೇ ಸಮುದ್ರದ ಸುಂದರ ವರ್ಣನೆ ಇದೆ. ಅದರ ಅಲೆಗಳ ವರ್ಣನೆ ಇದೆ. ಶ್ರೀಮದಾ-ಚಾರ್ಯರಿಗೂ ಸಮುದ್ರಕ್ಕೂ ಇರುವ ಸಾಧರ್ಮ್ಯ-ವೈಧರ್ಮ್ಯಗಳನ್ನು ಚಿಂತಿಸಲಾಗಿದೆ. ಜನರೆಲ್ಲರೂ ಶ್ರೀಮದಾಚಾರ್ಯರಿಗೆ ಭಕ್ತಿಯಿಂದ ನಮಸ್ಕರಿಸಿದ್ದನ್ನೂ ಅವರು ಮಾಡಿದ ಸನ್ಮಾನವನ್ನೂ ಹೇಳಲಾಗಿದೆ. ಇವೆಲ್ಲವೂ ಗ್ರಹಣ ಹಿಡಿದ ಸಮಯದಲ್ಲಿ ಸ್ವಾರಸ್ಯ-ಕರವಾದೀತೇ ಹೊರತು ಗ್ರಹಣ ಹಿಡಿಯುವುದಕ್ಕೂ ಮುಂಚೆ ಮಾಡಿದರಲ್ಲ. [ವಿ2] ಹೇಳುವಂತೆ ಗ್ರಹಣ ಹಿಡಿಯುವುದಕ್ಕೂ ಮುಂಚಿನ ಪ್ರಸಂಗಗಳನ್ನು ಇಷ್ಟೆಲ್ಲ ವಿವರವಾಗಿ ವರ್ಣಿಸಿ, ಹಿಡಿದ ಸ್ನಾನವನ್ನೂ ವಿವರವಾಗಿ ವರ್ಣಿಸಿ, ಹಿಡಿದ ಸ್ನಾನದ ಕಾಲದಲ್ಲಿ ಸಮುದ್ರವು ಕೆರೆಯಂತೆ ಶಾಂತವಾಯಿತೆಂದು ತಿಳಿಸಿದ ಮೇಲೆ, ಅತಿಮುಖ್ಯವಾದ ಗ್ರಹಣಕಾಲದ ವರ್ಣನೆಯನ್ನು ಸ್ವಲ್ಪವೂ ಮಾಡದೇ ''ಇತ್ಯಾದ್ಯೈರಪಿ ಚರಿತ್ರೈಃ'' ಎಂಬುದಾಗಿ ಆ ಪ್ರಸಂಗವನ್ನು ಅಲ್ಲಿಗೇ ಮುಕ್ತಾಯ ಮಾಡಿದ್ದರೆ, ಅದೊಂದು ನೀರಸ ನಿರೂಪಣೆಯಾಗುತ್ತಿತ್ತು.

ಇವೆಲ್ಲ ಕಾರಣಗಳಿಂದ ಐತರೇಯ ಶ್ರುತಿಯ ವ್ಯಾಖ್ಯಾನವು ಗ್ರಹಣ ಹಿಡಿದ ಸಮಯದಲ್ಲೇ ಎಂಬುದು ಸ್ಪಷ್ಟ. [ವಿ2]ದಲ್ಲೇ ''ಯಾರೂ ಸಹ ಗ್ರಹಣಸ್ನಾನಾರ್ಥವಾಗಿ ಹೋದವರು, ಹಿಡಿದ ಸ್ನಾನಕ್ಕೆ ಮಹತ್ತ್ವವನ್ನು ಕೊಡುವರೇ ಹೊರತಾಗಿ ಬಿಟ್ಟ ಸ್ನಾನಕ್ಕೆ ಅಲ್ಲ'' ಎಂದು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ, ಸುಮಧ್ವವಿಜಯದಲ್ಲಿ ಗ್ರಹಣ ಹಿಡಿದ ಸ್ನಾನವು ವರ್ಣಿತವಾಗದಿರುವುದು ಅಂದಿನದು ಗ್ರಸ್ತೋದಯ ಗ್ರಹಣವೆಂಬುದನ್ನು ದೃಢಪಡಿಸುತ್ತದೆ. ಎಂದರೆ, ಸೂರ್ಯೋದಯದ ವೇಳೆಯಾದ್ದರಿಂದ ಪಶ್ಚಿಮಘಟ್ಟ-ದಿಂದಲೂ, ಗ್ರಹಣವಾಗಿರುವುದಕ್ಕೆ ಚಂದ್ರನಿಂದಲೂ, June 25 ಆದ್ದರಿಂದ ಮಳೆ ಮಂಜು ಮೋಡಗಳಿಂದಲೂ ಸೂರ್ಯನ ಬೆಳಕು ಕುಂಠಿತಗೊಂಡು, ಕತ್ತಲಲ್ಲಿಯೇ ನಡೆದ ಹಿಡಿದ ಸ್ನಾನದ ವಿವರಗಳು ಸಾವಿರಾರು ಜನರ ನಡುವೆ ಮಂದದೃಷ್ಟಿಗಳಿಗೆ ಕಂಡಿಲ್ಲವೆನ್ನುವುದು ಅತ್ಯಂತ ಸಂಭಾವಿತ. [ವಿ2]ಹೇಳುವಂತೆ ನಿರಾಧಾರ ಊಹೆಯಲ್ಲ.

ಇನ್ನು ಗ್ರಹಣದ ಅವಧಿಯ ಬಗ್ಗೆ. ಹಿಂದೆ ವಿವರಿಸಿದ ಹಾಗೆ ಗ್ರಹಣ ಹಿಡಿದ ಸಮಯದಲ್ಲೇ ಐತರೇಯ ಶ್ರುತಿಯ ಸುದೀರ್ಘ ವ್ಯಾಖ್ಯಾನ ನಡೆದಿರುವುದು. ಆದ್ದರಿಂದ ಅದೊಂದು ಸುದೀರ್ಘ ಗ್ರಹಣವಾಗಿರಬೇಕು ಎಂಬುದಾಗಿ [ಜ]ದಲ್ಲಿ ತಿಳಿಸಲಾಗಿತ್ತು.

[ವಿ2]ದಲ್ಲಿ "1296ರ 3 ಘಂಟೆ 35 ನಿಮಿಷದ ಗ್ರಹಣವು ಮತ್ತೂ ಸಂಭಾವಿತ" ಎಂಬುದಾಗಿ 1296ರ ಗ್ರಹಣವನ್ನು 3 ಘಂಟೆ 35 ನಿಮಿಷದಷ್ಟು ಸುದೀರ್ಘವೆಂದು ಹೇಳಲಾಗಿದೆ. ಆದರೆ, ಚಿತ್ರ-1ರಲ್ಲಿ 1296ರ ಗ್ರಹಣದ ಸ್ಪರ್ಶಕಾಲ ಹಾಗೂ ಮೋಕ್ಷಕಾಲಗಳನ್ನು ಸ್ಪಷ್ಟವಾಗಿ ಕಾಣಬಹುದು. ಅದರಂತೆ, ಭಾರತೀಯ ಕಾಲಮಾನದಲ್ಲಿ ಗ್ರಹಣಸ್ಪರ್ಶ 8.37ಕ್ಕೆ ಹಾಗೂ ಗ್ರಹಣಮೋಕ್ಷ 11.14ಕ್ಕೆ. ಇದನ್ನು [ಜ]ದಲ್ಲೂ ಕೋಷ್ಟಕದಲ್ಲಿ ಕೊಡಲಾಗಿದೆ. ಗ್ರಹಣಸ್ಪರ್ಶಕಾಲವನ್ನು 8.37 ಎಂದು [ವಿ2] ಕೂಡ ಒಪ್ಪುತ್ತದೆ. ಆದ್ದರಿಂದ, 1296ರ ಗ್ರಹಣದ ಅವಧಿಯು 2 ಘಂಟೆ 37 ನಿಮಿಷಗಳಾಗುವುವು. [ವಿ2]ಹೇಳಿದಂತೆ 3 ಘಂಟೆ 35 ನಿಮಿಷಗಳಲ್ಲ.

ಇನ್ನು 1 ಘಂಟೆ 29 ನಿಮಿಷದ ಗ್ರಹಣದಲ್ಲಿ ಮಾಡಿದ ಪ್ರವಚನವನ್ನು ಸುದೀರ್ಘವೆನ್ನಬಹುದೇ? ಇಲ್ಲಿ, 'ಸುದೀರ್ಘ'ವೆಂದರೆ ಏನು ಎನ್ನುವುದನ್ನು ವಿವೇಚಿಸ-ಬೇಕಾಗುತ್ತದೆ. ಭಗವದ್ವ್ಯತಿರಿಕ್ತವಾದ ಯಾವ ಪ್ರಮೇಯದಲ್ಲೂ ದೊಡ್ಡದು ಅಥವಾ ಚಿಕ್ಕದು ಎನ್ನುವುದಕ್ಕೆ ಸಂದರ್ಭಾತೀತವಾದ ಅರ್ಥವಿಲ್ಲ; ಆ ಆ ಸಂದರ್ಭಕ್ಕೆ ಸಂಗತ-ವಾದಂತಹ ಒಂದು ಮಾನ (scale)ಕ್ಕೆ ಹೋಲಿಸಿದಾಗ ಮಾತ್ರ ಅವು ಅರ್ಥವತ್ತಾಗುವುವು. ಹಾಗಾದರೆ, ಪ್ರಕೃತ ಸಂದರ್ಭದಲ್ಲಿ, ಅಂದಿನ ಪ್ರವಚನವನ್ನು ಸುದೀರ್ಘವೆನ್ನಬೇಕಾದರೆ ಸಂಗತವಾದ ಕಾಲಮಾನ ಯಾವುದು?

ಶ್ರೀಮದಾಚಾರ್ಯರ ಪ್ರತಿನಿತ್ಯದ ದಿನಚರಿಯಲ್ಲಿ ಪಾಠಪ್ರವಚನಗಳಿಗೆ ಮೀಸಲಿಟ್ಟ ಕಾಲಾವಧಿ ಇರಬಹುದೇ? ಇಲ್ಲ. 'ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್' ಎಂದು ಉಪದೇಶಿಸಿದವರ ದಿನಚರಿಯಲ್ಲಿ ಪಾಠ ಪ್ರವಚನಗಳ ಕಾಲಾವಧಿಗೆ ಹೋಲಿಸಿದರೆ ಸುದೀರ್ಘತ್ವ ಖಂಡಿತ ಕೂಡಲಾರದು. ಹಾಗಾದರೆ, ಶ್ರೀಮದಾಚಾರ್ಯರು ಸಾಧಾರಣ-ವಾಗಿ ಅವಿಚ್ಛಿನ್ನವಾಗಿ ಮಾಡುತ್ತಿದ್ದ ಪ್ರವಚನಕಾಲಕ್ಕೆ ಹೋಲಿಸಬಹುದೇ? ಇಲ್ಲ. ಸುಮಧ್ವವಿಜಯದ 14ನೇ ಸರ್ಗದಲ್ಲಿ ಶ್ರೀಮದಾಚಾರ್ಯರ ದಿನಚರಿಯನ್ನು ವರ್ಣಿಸುತ್ತ ಸೂರ್ಯೋದಯದಿಂದಾರಂಭಿಸಿ (ಶ್ಲೋಕ 17) ಮಧ್ಯಾಹ್ನದವರೆಗೂ (ಶ್ಲೋಕ 26) ಪ್ರವಚನ ಮಾಡುತ್ತಿದ್ದರೆಂಬುದಾಗಿದೆ. ಇದನ್ನೇನಾದರೂ ಕಾಲಮಾನವೆಂದಿಟ್ಟುಕೊಂಡಲ್ಲಿ ಸುದೀರ್ಘವಾದ ವ್ಯಾಖ್ಯಾನಕ್ಕೆ ದಿನವಿಡೀ ಗ್ರಹಣವಾಗಬೇಕಾಗುತ್ತದೆ. ಇನ್ನು ಶ್ರೋತೃಗಳ ತಾಳ್ಮೆಯಿಂದ ನಿರ್ಧಾರಿತವಾಗುವ ಕಾಲಮಾನದ ಪ್ರಕಾರ ಸುದೀರ್ಘವೆಂದಲ್ಲಿ ಅದು ಪ್ರವಚನದೋಷವಾಗಿ ಬಿಡುತ್ತದೆ. ಉತ್ತಮ ಪ್ರವಚನದಲ್ಲಿ ಕೇಳುವವರಿಗೆ ಸಮಯ ಕಳೆದದ್ದೇ ಗೊತ್ತಾಗಬಾರದು. ಹಾಗೆಯೇ ಸಾಮಾನ್ಯವಾಗಿ ಲೋಕದಲ್ಲಿ ನಡೆಯುವ ಅನೇಕ ಘಂಟೆಗಳ ಪಾಠ ಪ್ರವಚನಗಳ ಕಾಲಾವಧಿಗೆ ಹೋಲಿಸಿದಾಗಲೂ ಸುದೀರ್ಘವೆನ್ನಿಸುವ ಗ್ರಹಣವೇ ಸಿಗುವುದಿಲ್ಲ. ಮಿಗಿಲಾಗಿ, ಅತ್ಯಂತ ಹೆಚ್ಚಿನ ಕಾಲಾವಧಿಯ ಗ್ರಹಣಕ್ಕೂ ಎರಡಕ್ಕೂ ಹೆಚ್ಚು ಪಟ್ಟು ದೀರ್ಘಾವಧಿಯ ದೈನಂದಿನ ಪ್ರವಚನವನ್ನೇಕೆ ಸುದೀರ್ಘವೆಂದು ಹೇಳಲಿಲ್ಲವೆನ್ನುವ ಶಂಕೆ ಬಂದೀತು.

ಹಾಗಾದರೆ ಸುದೀರ್ಘವೆಂದಾಗ ಮಾನದಂಡ ಯಾವುದು? ಜನರೆಲ್ಲ "ಸಾಧಾರಣವಾಗಿ ಅಷ್ಟಮಹಾಮಂತ್ರಗಳು, ರಾಮಕೃಷ್ಣಾದಿ ಉಪಮಂತ್ರಗಳ ಜಪಕ್ಕೆ 1 ರಿಂದ 1 1/4 ಘಂಟೆ ಕಾಲ ಹಿಡಿಸುತ್ತದೆ" ಎಂದು ಭಾವಿಸಿ, "1 ಘಂಟೆ 29 ನಿಮಿಷದ ಅವಧಿಯಲ್ಲಿ ಸ್ನಾನ, ಜಪಗಳ ನಂತರ ಸುದೀರ್ಘಪ್ರವಚನ ಹೇಗೆ ಸಾಧ್ಯ?" ಎಂಬುದಾಗಿ, ಒಂದುವೇಳೆ ಪ್ರವಚನ ನಡೆದರೂ ಅದು ಸಾಂಕೇತಿಕವಾಗಿ ಉಳಿದ 10-15 ನಿಮಿಷಗಳು ಮಾತ್ರ ಎಂದು ಊಹಿಸಿರುತ್ತಾರೆ. [ವಿ2]ದಲ್ಲಿ ಹೀಗೆ ಊಹಿಸಿರುವುದೇ ಇದಕ್ಕೆ ಸಾಕ್ಷಿ. ಜನರು ಪ್ರವಚನಕ್ಕೆಂದು ಎಣಿಸಿರುವ ಈ 10-15 ನಿಮಿಷಗಳ ಪುಟ್ಟ ಕಾಲಾವಧಿಯೇ ಪ್ರಕೃತ ಸಂದರ್ಭದಲ್ಲಿ ಸಂಗತವಾದ ಮಾನದಂಡ. ಆದರೆ, ಶ್ರೀಮದಾಚಾರ್ಯರು ಮಾಡಿದ್ದು ಇಂತಹ ಸಾಂಕೇತಿಕವಾದ ಪ್ರವಚನವಲ್ಲ. "ಸೌಲಭ್ಯೇ ಶ್ರವಣಾದೀನಾಂ ಅನ್ಯತ್ ಸಂಕೋಚಮರ್ಹತಿ" ಎಂಬಂತೆ ಆ ಗ್ರಹಣದ ಬಹುಕಾಲ, ಎಂದರೆ ಸುಮಾರು 1 ರಿಂದ 1 1/4 ಘಂಟೆಗಳ ಕಾಲ ಪ್ರವಚನವನ್ನೇ ಮಾಡಿ, ಜಪಾದಿಗಳನ್ನು ಲೋಕದೃಷ್ಟಿಯಲ್ಲಿ ಸಾಂಕೇತಿಕವಾಗಷ್ಟೇ ಮಾಡಿರುವರು. ಆದ್ದರಿಂದಲೇ ಜನರೆಲ್ಲ "ಓಹ್, ಎಂತಹ ಪ್ರವಚನ ಮಾಡಿದರು" ಎಂಬರ್ಥದಲ್ಲಿ ಉದ್ಗರಿಸಿದರೇ ಹೊರತು "ಓಹ್, ಎಂತಹ ಜಪ ಮಾಡಿದರು" ಎಂದಲ್ಲ. ಹೀಗಾಗಿ, ಇಲ್ಲಿ ವಿವರಿಸಿದ ಕಾಲಮಾನಕ್ಕೆ ಹೋಲಿಸಿದಾಗ ಅಂದು ವಾಸ್ತವವಾಗಿ ನಡೆದ ಪ್ರವಚನದ ಕಾಲವು ಸುದೀರ್ಘವೆಂಬುದು ಸುಸಂಗತ-ವಾಗುವುದರಿಂದ 1275ರ ಗ್ರಹಣದಲ್ಲಿ ಸುದೀರ್ಘ ಪ್ರವಚನ ಅಸಂಭಾವಿತವಲ್ಲ.

[ವಿ1]ದಲ್ಲಿ "ಮಂಗಳೂರು ಮೂಲಕ ಹಾದುಹೋದ ಸೂರ್ಯಗ್ರಹಣ 28-10-1296ರಲ್ಲಿ" ಎನ್ನಲಾಗಿದೆ. ಅದರಂತೆಯೇ [ವಿ2]ದಲ್ಲಿಯೂ "1296ರ ಸೂರ್ಯ-ಗ್ರಹಣ ಮಂಗಳೂರಿನ ಮೇಲೆ ಹಾದುಹೋಗಿದೆ" ಎಂಬುದಾಗಿ 1296ರ ಗ್ರಹಣಕ್ಕೆ ಸಲ್ಲದ ಪ್ರಾಧಾನ್ಯವನ್ನು ನಿರಾಧಾರವಾಗಿ ಊಹಿಸಲಾಗಿದೆ. ಆದರೆ ಅಂದಿನ ಪೂರ್ಣಸೂರ್ಯ-ಗ್ರಹಣವು ಹಾದುಹೋದದ್ದು ಮಂಗಳೂರಿನ ಮೇಲಲ್ಲ ; ಬೆಂಗಳೂರಿನ ಮೇಲೆ ! [N]ದಿಂದ ಸಂಪಾದಿಸಲಾದ ಚಿತ್ರ-2 ನ್ನು ನೋಡಿ. ಇದು [ವಿ1]ದಲ್ಲಿಯೇ ಮುದ್ರಿತವಾದ ನಕ್ಷೆಯ zoomed version !! ಆದ್ದರಿಂದ [ವಿ2]ದ ಈ ಊಹೆಯೂ ಸರಿಯಲ್ಲ.



ಚಿತ್ರ - 2

(ಮುಂದುವರೆಯುವುದು)

# ಶ್ರೀಮದಾಚಾರ್ಯರ ಅವತಾರಕಾಲ ಕ್ರಿ.ಶ. 1200 - ಮತ್ತೊಂದು ಪುರಾವೆ !

ಲೇಖಕರು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ
ಸಹಕಾರ : ಜಯಂತ ವ್ಯಾಸನಕೆರೆ ಹಾಗೂ ಆರ್. ಸುದರ್ಶನ

ಶ್ರೀಮದಾಚಾರ್ಯರದೇ ಮಹಾಭಾರತತಾತ್ಪರ್ಯನಿರ್ಣಯದಿಂದ ಅವರ ಅವತಾರಕಾಲವು ಕಲಿಯುಗಗತಾಬ್ದ □□□ ವರ್ಷಗಳು ಕಳೆದ ಮೇಲೆ ಎಂದು ಸು□-ಪಡುವುದು. ಇದು ಕ್ರಿ.ಶ. □□□□-□□□□ಕ್ಕೆ ಸರಿಹೊಂದುತ್ತದೆ. ಶ್ರೀನರಹರಿತೀರ್ಥರ ಶಾಸನಗಳು ಮುಂತಾದ ಅನೇಕ ಪುರಾವೆಗಳು ಇದಕ್ಕೇ ಸಂವಾದಿಯಾಗಿವೆ.□ ಇಂದಿನ ಹೆಚ್ಚಿನ ಸಂಶೋಧಕರ ನಿಲುವೂ ಇದೇ ಆಗಿದೆ.

ಇದೀಗ □ ಕಾಲವನ್ನು ದೃ□ಪಡಿಸುವ ಮತ್ತೊಂದು ಅಪೂರ್ವ ದಾಖಲೆಯು ಲಭ್ಯವಾಗಿದೆ. ದ್ವೈತವಾ□ಯದ ಶ್ರೇಷ□ಗ್ರಂಥಕಾರರಲ್ಲಿ ಒಬ□ಾದ ಶ್ರೀ□ಲಾರಿ ನರಸಿಂಹಾ-ಚಾರ್ಯರು ತಮ್ಮ ಸ್ಮೃತ್ಯರ್ಥಸಾಗರ ಎಂಬ ನಿಬಂಧಗ್ರಂಥದಲ್ಲಿ ಶ್ರೀಮಧ್ವಜಯಂತಿಯ ಬಗೆ□ತಿಳಿಸುತ್ತ ಸ್ಕಂದಪುರಾಣದ ವಚನಗಳನ್ನು ಆಧಾರವನ್ನಾಗಿ ನೀಡಿರುವರು :

**ಅಸ್ಯಾಂ ದಶಮ್ಯಾಂ ಮಧ್ವಜಯಂತೀ–**

**ಸ್ಕಂದ ಉವಾಚ :**
**ಪ್ರಣವಪ್ರಭವಾ ವೇದಾಃ ಸ್ವಯಂಭೂಪ್ರಭವಂ ಜಗತ್ ।**
**ಯಥಾಽಂಭೋಜಭವೋ ಬ್ರಹ್ಮಾ ತಥೈಷಾನಂದಸೂಸ್ತಿಭಿಃ ॥**
**ವಿಜಯಾದಶಮೀ ನಾಮ ಯದಿ ಸೂರ್ಯೋದಯೇ ಭವೇತ್ ।**
**ಬುಧಶ್ರವಣಸಂಯುಕ್ತಾ ಜಯಂತೀ ಜಗದೀಶಿತುಃ ॥**

**ಸ್ಕಾಂದೇ : ಗೋಭಿಲ ಉವಾಚ –**
**ಶುಕ್ಲಾಶ್ವಿನದಶಮ್ಯಾಂ ತು ಜಯಂತೀ ಜಗದಾತ್ಮನಃ ।**
**ಪೂರ್ಣಬೋಧಮುನೇಃ ಕಾರ್ಯಾ ಕಾಮಿತಾರ್ಥಪ್ರದಾಯಿನೀ ॥**
**ಸಾ ಚ ಸೂರ್ಯೋದಯೇ ಗ್ರಾಹ್ಯಾ ಶ್ರೇಯಸ್ಕಾಮೇನ ಸರ್ವದಾ ।**
**ಅನ್ಯಥಾ ನರಕಂ ಯಾತಿ ಯಾವದಾಭೂತಸಂಪ್ಲವಮ್ ॥**

---

1. ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ, ಶ್ರೀಮಧ್ವಾಚಾರ್ಯರ ಕಾಲನಿರ್ಣಯ, ಶ್ರೀವ್ಯಾಸ-ಮಧ್ವಸಂಶೋಧನಪ್ರತಿಷಾ□ನ, □□□□.
– ಶ್ರೀವ್ಯಾಸಮಧ್ವಸಂಶೋಧನಪ್ರತಿಷಾ□ನವು ಆಯೋ□ಸಿದ್ದ ವಿಚಾರಸಂಕಿರಣದ □ಲಶ್ರುತಿಯಾಗಿ ಅಧ್ಯಕ್ಷ□ೇ□ದಿಂದಪರಮಪೂಜ್ಯ ಶ್ರೀಪೇ□ಾವರ ಶ್ರೀಪಾದರು ಆ ಕೃತಿಯಲ್ಲಿ ವಿವರವಾಗಿ ನಿರೂ□ಸಿದ್ದಕ್ರಿ.ಶ. □□□□ಎಂಬ ಅವತಾರಕಾಲವನ್ನು ಅಂಗೀಕರಿಸುವುದೇ ಸೂಕ್ತ ಎಂದು ಅ□ಪ್ರಾಯಪ□ಟ್ಟದ್ದರು.
– ಇತ್ತೀಚಿನ ಇನ್ನೂ ಅನೇಕ □ಳವ□ಗೆಗಳನ್ನೊಳಗೊಂಡ □ ಕೃತಿಯ ವಿಸ□ ಹಾಗೂ ಪರಿಷ□ ಆವೃತ್ತಿಯನ್ನು ಪ್ರತಿಷಾ□ನವು ಶೀಘ್ರದಲ್ಲೇ ಹೊರತರಲಿದೆ.

ಇವು ಶ್ರೀಮದಾಚಾರ್ಯರ ಜಯಂತೀಕಲ್ಪದಲ್ಲಿ ಶ್ರೀಕೃಷ□ ಜಯಂತಿಯನ್ನು ತಿಳಿಸುವ :

**ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಲಾಷ್ಟಮೀ ಭವೇತ್ ।**
**ಜಯಂತೀ ನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶಿನೀ ॥**
**ಯಸ್ಯಾಂ ಜಾತೋ ಹರಿಃ ಸಾಕ್ಷಾನ್ನಿಶೀಥೇ ಭಗವಾನಜಃ ।**
**ತಸ್ಮಾತ್ ತದ್ದಿನಮತ್ಯಂತಂ ಪುಣ್ಯಂ ಪಾಪಹರಂ ಶುಭಮ್ ॥**

ಎಂಬ ವಾಕ್ಯಗಳಂತೆಯೇ ಇರುವುದು ಗಮನಾರ್ಹ.

ಆದ್ದರಿಂದ, □ ವಚನಗಳಿಂದ ತಿಳಿದು ಬರುವಂತೆ, ಶ್ರೀಮದಾಚಾರ್ಯರ ಅವತಾರವು ಸೂರ್ಯೋದಯಕಾಲದಲ್ಲಿ **ಬುಧವಾರ ಹಾಗೂ ಶ್ರವಣನಕ್ಷತ್ರ**ಗಳ ಯೋಗವಿದ್ದ **ಆಶ್ವೀಜ-ಶುಕ್ಲ-ದಶಮಿ(ವಿಜಯದಶಮಿ)**ಯಂದು ಎಂದಾಗುವುದು.[1]

ಅವತಾರಕಾಲವನ್ನು 1238 ಎನ್ನುವವರು ಪ್ರಧಾನವಾಗಿ ಉಲ್ಲೇ□ಸುವ, ಇತ್ತೀಚೆಗೆ □ಳಕಿಗೆ ಬಂದ ಅಣುಮಧ್ವಚರಿತ ಎಂಬ ಕೃತಿಯಲ್ಲೂ ಶ್ರೀಮದಾಚಾರ್ಯರ ಅವತಾರ-ದಿನವು ಆಶ್ವೀಜಶುಕ್ಲದಶಮೀ □ವಿಜಯದಶಮೀ□ಎಂಬ ಮಾಹಿತಿಯಿದೆ. ಇದರಿಂದ ಶ್ರೀಮದಾಚಾರ್ಯರ ಅವತಾರದಿನವು ವಿಜಯದಶಮಿ ಎಂಬುದು ಸು□ಪಡುವುದು.

ಆದರೆ ಅಣುಮಧ್ವಚರಿತವು 1238ರ ವಿಜಯದಶಮಿಯನ್ನು ಬುಧವಾರವೆಂದು ಉಲ್ಲೇ□ಸಿದ್ದು, ಇಂದು ಲಭ್ಯವಿರುವ ತಂತ್ರಾಂಶ ಹಾಗೂ 'An Indian ephemeris'[2] ವಿವರಗಳಂತೆ ಅಂದು ಬುಧವಾರವಾಗಿರದೇ ಸೋಮವಾರವಾಗುವುದು. ಹೀಗೆ ನಿಖರವಾದ ತಂತ್ರಾಂಶಕ್ಕೆ ತಾಳೆಹೊಂದದ, ಕೃತಿಕಾರರು ಮೊದಲಾದ ವಿಚಾರಗಳಲ್ಲಿ ಸಂದಿಗ□ವಾದ ಅಣುಮಧ್ವಚರಿತವನ್ನಾಧರಿಸಿ ಶ್ರೀಮದಾಚಾರ್ಯರ ಅವತಾರಕಾಲವನ್ನು ವಿಲಂಬಿ ಸಂವತ□ರಕ್ಕೊಂದಿಸುವುದಾಗಲೀ, ಶ್ರೀಮದಾಚಾರ್ಯರೇ ತಿಳಿಸಿರುವ ತಮ್ಮ ಅವತಾರಕಾಲಕ್ಕೆ □ಕಲಿಯುಗದ4300ವರ್ಷಗಳು ಗತಿಸಿದ ಬಳಿಕ□39 ವರ್ಷಗಳನ್ನು ಹೆಚ್ಚುವರಿಯಾಗಿ ಸೇರಿಸುವುದಾಗಲೀ ಸರ್ವಥಾ ಸಲ್ಲದು.[3]

ಸ್ಕಂದಪುರಾಣದಂತೆ ಶ್ರೀಮದಾಚಾರ್ಯರ ಅವತಾರದಿನವು ವಿಜಯದಶಮಿ ಮಾತ್ರವಾಗಿರದೆ, ಬುಧ-ಶ್ರವಣಯುಕ್ತವಾದ ವಿಜಯದಶಮಿಯಾಗಿರುವುದು ಎಂಬುದು ಗಮನಿಸಲೇ□ೇಕಾದ ಮುಖ್ಯಾಂಶ. ಇಂದು ಉಪಲಭ್ಯವಿರುವ ಅನೇಕ ತಂತ್ರಾಂಶಗಳು[4]

---

1. **ಬುಧ**ಜನರಿಗೆ ಸಚ್ಛಾಸ್ತ್ರ**ಶ್ರವಣ**ಮಾಡಿಸಲೆಂದೇ **ದಶ**ಪ್ರಮತಿಗಳ **ಉದಯ** !
   ವಿದ್ಯಾರಂಭದ ವಿಜಯದಶಮಿಯಂದೇ ಮಧ್ವವಿಜಯದ ಆರಂಭ !
2. L.D. Swamikannu Pillai, An Indian ephemeris, Agam, Delhi, 1982
3. ಇದನ್ನು ತಂತ್ರಾಂಶದ ಮಾಹಿತಿಗೆ ಹೊಂದಿಸಲೆಂದು 'ಬುಧವಾರ' ಎನ್ನುವುದರ ಬದಲು 'ವಿಧುವಾರ' ಎಂದಿದ್ದಿರಬೇಕು ಎಂದು ಊಹಿಸಲು ಕೆಲವರು ಪ್ರಯತ್ನಿಸಿರುವುದುಂಟು. ಸ್ಕಂದಪುರಾಣಕ್ಕೆ ವಿರುದ್ಧವಾಗುವುದರಿಂದಲೂ ಇದು ಅನಗತ್ಯ.
4. i) P.V.R. Narasimha Rao, Jagannatha Hora, Version 7.51.
   ii) Dale Larson-Fairfield Iowa, PCJyotish, Version 0.93f

ಮೊದಲಾದ ಸಾಧನಸ□ಕರ್ಯಗಳಿಂದಾಗಿ ಪ್ರಾಚೀನ ಪಂಚಾಂಗಗಣನೆಯು ಸುಶಕವಾಗಿದೆ. ಇದರಿಂದ ತಿಳಿದುಬರುವಂತೆ □

- ಕ್ರಿ.ಶ. 1200, ರ□ದ್ರನಾಮಸಂವತ□ರದ ಆಶ್ವೀಜ ಶುಕ್ಲದಶಮಿಯಂದು □Sept 20 - Julian; Sept. 27 - Gregorian) ಸೂರ್ಯೋದಯದ ವೇಳೆಗೆ **ಬುಧವಾರ ಹಾಗೂ ಶ್ರವಣನಕ್ಷತ್ರ**ಗಳೆರಡೂ ಪಾಜಕಕ್ಷೇತ್ರದಲ್ಲಿ ಒದಗಿವೆ □□
- ಕ್ರಿ.ಶ. 1200ಕ್ಕೆ 15 ವರ್ಷ ಹಿಂದೆ ಇಂತಹ ಯೋಗವು ಸಂಭವಿಸಿಲ್ಲ. 1200ರಲ್ಲಿ ಸಂಭವಿಸಿದ ಅನಂತರ 1227 ಹಾಗೂ 1254 ರಲ್ಲೇ ಸಂಭವಿಸಿರುವುದು.

ಇವುಗಳಲ್ಲಿ 1200ರ ಯೋಗವೇ ಶ್ರೀಮದಾಚಾರ್ಯರ ವಾಕ್ಯಕ್ಕೆ ಅತ್ಯಂತ ಅನುಗುಣವಾಗುವುದು. ಆದ್ದರಿಂದ ಕ್ರಿ.ಶ. 1200ರ ವಿಜಯದಶಮಿಯಂದೇ ಶ್ರೀಮದಾಚಾರ್ಯರ ಅವತಾರವೆಂಬುದು ಸಂದೇಹಾತೀತವಾಗಿ ಸು□ಪಡುವುದು.

□ ಹಿಂದಿನ ಪುರಾವೆಗಳಿಗೆ ಸಂವಾದಿಯಾದ ಸ್ಕಂದಪುರಾಣದ □ ಮಹತ್ವದ ಉಲ್ಲೇಖವು ಶ್ರೀಮದಾಚಾರ್ಯರ ಕಾಲದ ಬಗೆ□ವಿಶೇಷವಾದ □ಳಕನ್ನು ಚೆಲ್ಲುವುದಷ್ಟೇ ಅಲ್ಲದೇ ಪುರಾಣಗಳ ಪ್ರಾಮಾಣ್ಯಕ್ಕೂ ಕನ್ನಡಿ ಹಿಡಿದಿದೆ.

*****

## ನಮ್ಮ ನವಪ್ರಕಾಶನಗಳು

**೧. ಅಧಿಕಮಾಸ – ಪುಟಗಳು : ೬೪ ; ಬೆಲೆ : ರೂ. ೨೫/-**
**(ಅಧಿಕ ಭಾದ್ರಪದ ಮಾಸದ ನಿಮಿತ್ತ ಅಧಿಕಮಾಸದ ಮಾಹಾತ್ಮ್ಯ, ಆಚರಣೆಯ ವಿಧಿವಿಧಾನಗಳು, ಅಪೂಪ ದಾನವಿಧಿ, ಶ್ರೀಪುರುಷೋತ್ತಮಸ್ತೋತ್ರಗಳು ಹಾಗೂ ಪುರಾಣೋಕ್ತ ಅಧಿಕಮಾಸ ಮಾಹಾತ್ಮ್ಯದ ಕಥೆಗಳ ಸಮೇತ).**
**(೦೨.೦೮.೨೦೧೨ರಂದು ಬಿಡುಗಡೆಯಾಗಿದೆ)**

*****

**೨. ಚಾತುರ್ಮಾಸ್ಯವ್ರತ – ಪುಟಗಳು : ೮೦, ಬೆಲೆ : ೩೦/-**
**(ಚಾತುರ್ಮಾಸ್ಯದ ಸಮಗ್ರ ಪರಿಚಯ, ಪುರಾಣೋಕ್ತ ಕಥೆಗಳು ಹಾಗೂ ನಾರಾಯಣಾಷ್ಟೋತ್ತರ ಶತನಾಮಸ್ತೋತ್ರ ಮೊದಲಾದವುಗಳೊಂದಿಗೆ)**
**(ಆಗಸ್ಟ್ ೧೫, ೨೦೧೨ರಂದು ಬಿಡುಗಡೆ)**

*****

**೩. ವಿವಾಹಚಂದ್ರಿಕಾ (ವಿವಾಹ ಸಂಸ್ಕಾರದ ಸಮಗ್ರ ಕೈಪಿಡಿ) ರೂ. ೬೦/-**
**(ಸೆಪ್ಟಂಬರ್ ೧, ೨೦೧೨ರಂದು ಬಿಡುಗಡೆ)**

# ನಾಗಮಂಗಲದ ಸೌಮ್ಯಕೇಶವ ದೇವಸ್ಥಾನದ ಬಗ್ಗೆ ಮತ್ತಷ್ಟು ಮಾಹಿತಿ
## (ಜೂನ್ ರಕ್ಷಾಪುಟ -೧ರ ವಿವರಣೆಗೆ ಪ್ರತಿಕ್ರಿಯೆ)

ಲೇಖಕರು – ಶ್ರೀ ಎನ□ಎಸ□ವ್ಯಾಸರಾಜರಾವ□□ಂಗಳೂರು

ಶ್ರೀಯೋಗಾನರಸಿಂಹಸ್ವಾಮಿ ಮೂಲವಿಗ್ರಹ ಬಹಳ ಬಹಳ ಚೆನ್ನಾಗಿದೆ. ಒಟ್ಟು □ ಗರ್ಭಗುಡಿಗಳಿವೆ. ಮೂರನೇ ಗರ್ಭಗುಡಿಯಲ್ಲಿ ಮೂಲವಿಗ್ರಹ ಇದೆ. ಮಧ್ಯ ಗರ್ಭಗುಡಿಯ ಎಡಭಾಗದಲ್ಲಿ ಅಂದರೆ ಮೂಲವಿಗ್ರಹಕ್ಕೆ ಬಲಭಾಗದಲ್ಲಿ ಒಂದು ದೊಡ□ ಹುತ್ತವಿದ್ದು, ಅದರಲ್ಲಿ □□ ಹೆಡೆಯ ಸರ್ಪವಿದೆಯಂತೆ.ಬಹಳ ಮಡಿ. ಪಾತಾಳಲೋಕಕ್ಕೆ ಸಂಪರ್ಕವಿದೆ ಎನ್ನುತ್ತಾರೆ. ಹಿಂದೆ ವಿದ್ಯಾರಣ್ಯರು ಪರೀಕ್ಷೆಗೆ ಆಗಿದ್ದ ಅರ್ಚಕರು □ೇಡ ಎಂದು ಹೇಳಿದರೂ, □□□□ಕೊಡ ಹಾಲು ಹಾಕಿಸಿದರಂತೆ. ವಿದ್ಯಾರಣ್ಯರ ಪೂರ್ವಾಶ್ರಮದ ಒಬ□ನ□ □ರ್ಷದ ಮಗ ಹೋಗಿಬಿಟ್ಟನಂತೆ.

ಒಂದುದಿವಸ ಬಹಳ ಹಿಂದೆ ಅರ್ಚಕರೊಬ□□ಬಹಳ ವಯಸಾ□ದ್ದವರು□ರಾತ್ರಿ □-□ ಘಂಟೆ ಸಮಯದಲ್ಲಿ □ೆಗಾಯಿತು ಅಂತ ಸ್ನಾನಮಾಡಿ ದೇವಸ್ಥಾನದ □ಾಗಿಲು ತೆಗೆದು ಮೊದಲನೆ ಗರ್ಭಗುಡಿಯ □ಾಗಿಲನ್ನು ತೆಗೆದಾಗ ಕಾ□ಸದೆ ಸರ್ಪವನ್ನು ತುಳಿದುಬಿಟ್ಟರಂತೆ. ಬಹಳ ಪಶ್ಚಾತ್ತಾಪಪಟ್ಟು ಅವತ್ತಿನ ದಿನದಿಂದ □□ ದಿವಸಗಳಕಾಲ ಉಪವಾಸ ಮಾಡಿದ ಮೇಲೆ ಸ್ವಪ್ನದಲ್ಲಿ ಅವರಿಗೆ ಅದು ನನ್ನ ಸಮಯ – ನಿನಗೆ ಗೊತ್ತಿಲ್ಲದೆ ತುಳಿದಿದ್ದೀಯೆ. ಆದ್ದರಿಂದ ಆ ಗರ್ಭಗುಡಿಯ □ಾಗಿಲಿಗೆ ಗಂಟೆಗಳನ್ನು ಮಾಡಿಸಿ ಹಾಕು ಅಂತ. ಅದರಂತೆ ಮಾಡಿಸಿದರಂತೆ. □ಗಲೂ ಆ □ಾಗಿಲನ್ನು ನೋಡಬಹುದು. ಮತ್ತೆ ಅರ್ಚಕರು ಪ್ರಾ□ಸಿದರಂತೆ – ನನಗೆ ನಿನ್ನ ದರ್ಶನ ಕೊಡ□ೇಕು ಅಂತ. ಅದಕ್ಕೆ ಸ್ವಪ್ನದಲ್ಲಿ – ನೀನು ನೋಡಿದರೆ ಹೆದರುತ್ತೀ – ಆದ್ದರಿಂದ ಒಂದು ಗಾಡಿ ಕುಂಕುಮವನ್ನು ಹಾಕಿಸಿರು ಅಂತ. ಅದೇರೀತಿ ಮಾಡಲಾಗಿ ಮಾರನೇದಿವಸ ಕುಂಕುಮದ ರಾಶಿಯ ಮೇಲೆ ತನ್ನ □□ ಹೆಡೆಯನ್ನು ಒತ್ತಿ ಹೋಗಿತ್ತಂತೆ.

ಹಾಗೆ ಆ ದೇವಸ್ಥಾನದ ಅಡಿಗೆಮನೆಯಲ್ಲಿ ಒಂದು ತೊ□ಟ್ಟಿಲು □ಾವಿ ಇದೆ. ಕೆಳಗೆ ನೀರು ಉತ್ತರ–ದ□ಣಕಡೆಗೆ ಹರಿಯುತ್ತಂತೆ. ದ□ಣಕ್ಕೆ ನಂಜನಗೂಡಿಗೂ ಉತ್ತರಕ್ಕೆ ಕಾಶಿಗೂ ಹರಿಯುತ್ತಂತೆ. ಆಗೆ□□□□□ ನಿಂ□ಹಣು□ಹಾಕಲಾಗಿ ನಂಜನಗೂಡಿನಲ್ಲೂ ಹಾಗೂ ಕಾಶಿಯಲ್ಲೂ ಸಿಕ್ಕಿತಂತೆ.

ಇನ್ನು □ ದೇವಸ್ಥಾನದ ಒಳಗೆ □ಪ್ರಾಕಾರಗಳಿವೆ. ಸಾಮಾನ್ಯವಾಗಿ □ಹಂಗರು ಗಿಡ□□ ಅನ್ನುವುದು □ ರಿಂದ □ ಅಡಿ ಮೇಲೆ □ೆಳೆಯುವುದಿಲ್ಲ. ಆದರೆ ದೇವಸ್ಥಾನ ಕಟ್ಟೋಕ್ಕೆ ಮುಂಚೆ ಭಾರೀ ಕಾಡಾಗಿದ್ದ ಕಾರಣ ಸುಮಾರು □□ ಅಡಿ ಎತ್ತರ □ೆಳೆದಿದ್ದ ಒಂದು ಹಂಗರು ಗಿಡವನ್ನು ಕತ್ತರಿಸಿ ಅದನ್ನು ಇಟ್ಟು ದೇವಸ್ಥಾನ ಕ□ಟ್ಟಲಾಯ್ತಂತೆ. ಇದು ಮೂರನೇ ಪ್ರಾಕಾರದಲ್ಲಿದೆ. ಅದು ನೆಲದ ಮೇಲೆ ಇ□ಟ್ಟಿದ್ದಾರೆ. ಅದರ ಉದ್ದ □ಗ ಸುಮಾರು ಹತ್ತಿರ ಹತ್ತಿರ □□ಅಡಿ ತಲು□ದೆ – ಅಂದರೆ ಒಣಗಿದ – ಕತ್ತರಿಸಿದ ಮತ ಸ್ವಲ್ಪ ಸ್ವಲ್ಪ □ೆಳೆಯುತ್ತಿದೆ. □ಗ ಅದನ್ನು ಪ್ರಾಕಾರದಿಂದ ಹೊರಗೆ ತರುವುದಕ್ಕೆ ಆಗುವುದಿಲ್ಲ. ಅಂದರೆ ಅದನ್ನು ಇಟ್ಟು ಗುಡಿ ಕಟ್ಟಲಾಗಿದೆ.

*****

# ಅಧಿಕಮಾಸ ನಿಮಿತ್ತ[1] ಲೇಖನ

## (೧೮.೦೮.೨೦೧೨ ರಿಂದ ೧೫.೦೯.೨೦೧೨)

**ಲೇ : ವಿಪ್ರ**

ಒಂದು □ರವಿ□ಸಂಕ್ರಮಣವೂ□ಹ ಸಂಭವಿಸದ ಚಾಂದ್ರಮಾಸವನ್ನು □**ಅಧಿಕಮಾಸ** ಅಥವಾ **ಮಲಮಾಸ** ಎನ್ನುವರು. ಒಂದೇ ಚಾಂದ್ರಮಾಸದಲ್ಲಿ ಎರಡು □ರವಿ□ ಸಂಕ್ರಾಂತಿಗಳು ಸಂಭವಿಸಿದಲ್ಲಿ ಅದಕ್ಕೆ **ಕ್ಷಯಮಾಸ** ಅಥವಾ **ಮಲಮಾಸ** ಎಂದು ಹೆಸರು. ಪುರುಷೋತ್ತಮರೂ□ಶ್ರೀಹರಿಯು ಇದಕ್ಕೆ ನಿಯಾಮಕನಾದ್ದರಿಂದ ಇದಕ್ಕೆ **ಪುರುಷೋತ್ತಮಮಾಸ** ಎಂದೂ ಹೆಸರು. ವಿವಾಹ ಉಪನಯನಾದಿ ಮಂಗಲಕಾರ್ಯ-ಗಳಿಗೆ ಇದು ಯೋಗ್ಯವಲ್ಲ.

ಸರಾಸರಿ ಲೆಕ್ಕದಲ್ಲಿ ಮೂವತ್ಮೂರು ತಿಂಗಳಿಗೊಮ್ಮೆ ಒದಗುವ □ ಮಾಸವು, □ಮುಕ್ಕೋ□□ವತೆಗಳಿಗೂ ಶ್ರೀಹರಿಯೇ ಸ್ವಾಮಿ ಎಂಬ ತತ್ತ್ವಕ್ಕೂ, □ಅ□ಕ□ಶಬ್ದ ವಾಚ್ಯವಾದ ಪುಣ್ಯದ ಸಂಪಾದನೆಗೂ ಅವಕಾಶವೀಯುವ ಒಂದು ಉತ್ತಮ ಸಾಧನವಾಗಿ □ ಮಾಸದ ಮಹತ್ವ ಅಪಾರವಾದುದು□ಅ□ಕಸ್ಯಾ□ಕಂ □ಲಂ□ ವಿಷು□ಂಚಕ ಮೊದಲಾದ ವರ್ಷಪೂರ್ತಿ ಮಾಡ□ೇಕಾದ ವ್ರತಗಳನ್ನು ಕಾರ□ಾಂತರದಿಂದ ಮಾಡಲಾಗದವರು □ ಒಂದು ತಿಂಗಳಲ್ಲಿ □ದು ಉಪವಾಸಗಳನ್ನು ಮಾಡಿದರೆ ಅದು □ಲಘುವಿಷು□ಪಂಚಕ□ಮೊ□ಣ್ಯವಾಗುತ್ತದೆ ಎಂದೂ ಸಂಪ್ರದಾಯ ಉಂಟು.

ಪ್ರತಿಯೊಂದು ಅಪೂಪದಲ್ಲಿ ವಿಷು□□ಷು□ೊದಲಾದ ಭಗವದ್ರೂಪಗಳನ್ನು ಚಿಂತಿಸಿ ಒಟ್ಟು ಮೂವತ್ಮೂರು ಅಪೂಪಗಳನ್ನು ಅಧ್ಯಯನಶೀಲರಾದ ಸದಾ□ರ□□ಗೆ ಪ್ರತಿನಿತ್ಯವೂ ಚಿನ್ನದ ಸಮೇತ ಕಂಚಿನಪಾತ್ರೆಯಲ್ಲಿರಿಸಿ ದಾನ ಮಾಡುವುದು □ ವ್ರತದ ಮುಖ್ಯ ಅಂಶ. ಅಂತಹ ದಾನವನ್ನು ಪೃ□ ್ವೀದಾನಸಮವೆಂದೂ, ಸಕಲಪುರುಷಾರ್ಥಸಾಧಕವೆಂದೂ, ತತ್ತ್ವ□ಾನಪ್ರಾಪಕವೆಂದೂಪುರಾಣಗಳು ಪ್ರಶಂಸಿಸಿವೆ. ಪ್ರತಿನಿತ್ಯ □□□ಾಹ್ಮಣದಂಪತಿಗಳ ಭೋಜನ ಮೊದಲಾಗಿ ಅನೇಕರೀತಿಯಲ್ಲಿ □ಾಹ್ಮಣಭೋಜನವೂ ಇದರ ಮತ್ತೊಂದು ಮುಖ್ಯವಿ□ಯಾಗಿದೆ.

---

೧. **ಅಧಿಕಮಾಸದ ಬಗ್ಗೆ ಸಮಗ್ರ ವಿವರ ಹಾಗೂ ಶ್ರೀಪುರುಷೋತ್ತಮಮೂರ್ತಿಯ ಸ್ತೋತ್ರ ಮೊದಲಾದವುಗಳನ್ನು ನಮ್ಮ ಪ್ರಕಾಶನದ 'ಅಧಿಕಮಾಸ' ಎಂಬ ಕೃತಿಯಲ್ಲಿ ಕೊಡಲಾಗಿದೆ. ಬೆಲೆ:ರೂ.೨೫/-**

೨. ದ್ವಾತ್ರಿಂಶದ್ಭಿರ್ಗತೈರ್ಮಾಸೈರ್ದಿನೈಷೋಡಶಭಿಸ್ತಥಾ ।
ಘಟಿಕಾನಾಂ ಚತುಷ್ಕೇಣ ಪತತ್ಯಧಿಕಮಾಸಕಃ ॥
ಪಂಚಮೇ ಪಂಚಮೇ ವರ್ಷೇ ದ್ವೌ ಮಾಸಾವಧಿಮಾಸಕೌ ।
ತೇಷಾಂ ಕಾಲಾತಿರೇಕೇಣ ಗ್ರಹಾಣಾಮತಿಚಾರತಃ ॥
ಏಕಮಪ್ಯುಪವಾಸಂ ಯಃ ಕರೋತ್ಯಸ್ಮಿನ್ ತಪೋನಿಧೇ ।
ಅಸಾವನಂತಪಾಪಾನಿ ಪಾಪಾನಿ ಭಸ್ಮೀಕೃತ್ಯ ದ್ವಿಜೋತ್ತಮ ॥

ಕ್ಷಯಮಾಸ ಸಂಭವಿಸಿದ ವರ್ಷದಲ್ಲಿ ಅದಕ್ಕಿಂತ ಮುಂಚೆ ಒಂದು ಮತ್ತು ಅನಂತರ ಒಂದು ಹೀಗೆ ಎರಡು ಅ□ಕಮಾಸಗಳುಬರುತ್ತವೆ. ಅವುಗಳಲ್ಲಿ ಕ್ಷಯಮಾಸದ ಅನಂತರ ಬರುವ ಅ□ಕಮಾಸವೇ ಪ್ರಧಾನವಾದುದು.

ಇತರ ಮಾಸಗಳಲ್ಲಿ ಮಾಡುವ ಧಾರಣ-ಪಾರಣ, ವಿಷು□ಚಕ, ಏಕಭುಕ್ತ, ಅಲವಣ, ಲಕ್ಷಪ್ರದ□ಣ,ಲಕ್ಷನಮಸ್ಕಾರ, ಲಕ್ಷದೀಪ ಮೊದಲಾದ ವಿಶೇಷ ವ್ರತಗಳನ್ನು ಅ□ಕಮಾಸದಲ್ಲಿ ಮಾಡುವುದು ವಿಶೇಷ□ಲಕ್ಕೆ ಸಾಧಕ. ಸಾಧ್ಯವಾದಷ್ಟು ಹೆಚ್ಚು ದಿನ ಉಪವಾಸ, ವಿಶೇಷಸ್ನಾನ ಇವು ಅ□ಕಮಾಸದ ವಿಶೇಷವಿ□ಗಳು.

## ಅಧಿಕಮಾಸದಲ್ಲಿ ನಿಷಿದ್ಧ ಕಾರ್ಯಗಳು

**ಅನಿತ್ಯಮನಿಮಿತ್ತಂ ಚ ದಾನಂ ಚ ಮಹದಾದಿಕಮ್ ।**
**ಅಗ್ನ್ಯಾಧಾನಾಧ್ವರಾಪೂರ್ವತೀರ್ಥಯಾತ್ರಾಮರೇಕ್ಷಣಮ್ ॥**

**ದೇವಾರಾಮತಟಾಕಾದಿಪ್ರತಿಷ್ಠಾಂ ಮೌಂಜಿಬಂಧನಮ್ ।**
**ಆಶ್ರಮಸ್ವೀಕೃತಿಂ ಕಾಮ್ಯವೃಷೋತ್ಸರ್ಗಂ ಚ ನಿಷ್ಕ್ರಮಮ್ ॥**

**ರಾಜ್ಯಾಭಿಷೇಕಂ ಪ್ರಥಮಂ ಚೂಡಾಕರ್ಮವ್ರತಾನಿ ಚ ।**
**ಅನ್ನಪ್ರಾಶನಮಾರಂಭಂ ಗೃಹಾಣಾಂ ಚ ಪ್ರವೇಶನಮ್ ॥**

**ಸ್ನಾನಂ ವಿವಾಹಂ ನಾಮಾತಿಪನ್ನಂ ದೇವಮಹೋತ್ಸವಮ್ ।**
**ವ್ರತಾರಂಭಂ ಸಮಾಪ್ತಿಂ ಚ ಕಾಮ್ಯಕರ್ಮ ಚ ಪಾಪ್ಮನಾಮ್ ॥**
**ಪ್ರಾಯಶ್ಚಿತ್ತಂ ಚ ಸರ್ವಸ್ಯ ಮಲಮಾಸೇ ವಿವರ್ಜಯೇತ್॥**

**-ಬೃಹಸ್ಪತಿಃ(ಸ್ಮೃತಿಮುಕ್ತಾವಲಿಃ)**

ತುಲಾಪುರುಷದಾನಾದಿ ಮಹಾದಾನಗಳು, ಅಗ್ನ್ಯಾಧಾನ, ಯ□, ಉದ್ಯಾನವನಗಳ ನಿರ್ಮಾಣ, ಕೆರೆ ಕ□ಸುವುದು, ಉಪನಯನ, ಸನ್ಯಾಸ ಸ್ವೀಕಾರ, □ಯೋತಿಷ್ಟೋಮಾದಿ ಕಾಮ್ಯಕರ್ಮಗಳು, ಮಗುವನ್ನು ಮೊದಲ□ಾರಿಗೆಮನೆಯಿಂದ ಹೊರಕ್ಕೆ ಕರೆದೊಯ್ಯುವ ಕಾರ್ಯ, ಪಟ್ಟಾ□ಷೇಕ ಕಾರ್ಯ, ಚ□ಲ,ಉಪನಯನ, ವಿಶೇಷರೀತಿಯ ವ್ರತಗಳು, ಅನ್ನಪ್ರಾಶನ, ಗೃಹಾರಂಭ, ಗೃಹಪ್ರವೇಶ, ವಿಶೇಷತೀರ್ಥಸ್ನಾನ, ವಿವಾಹ, ನಾಮಕರಣ, ಪಾಪಗಳಿಗೆ ಪ್ರಾಯಶ್ಚಿತ್ತ, □ ಕಾರ್ಯಗಳನ್ನು ಅ□ಕಮಾಸದಲ್ಲಿ ಮಾಡಕೂಡದು. □ಅ□ಕಮಾಸದಲ್ಲಿ ಬಿಡುವ ಮೇಲಿನ ಕಾರ್ಯಗಳನ್ನು ಶುದ□ಾಸದಲ್ಲಿಯೇ ಮಾಡ□ೇಕು□ಅ□ಕಮಾಸಕ್ಕಿಂತಮುಂಚಿತವಾಗಿ ಪ್ರಾರಂ□ಸಿದ್ದ□ಷು□ಚಕಾದಿ□ವ್ರತ ಮತ್ತು ಕಾರ್ಯಗಳನ್ನು ಮಾತ್ರ ಅ□ಕಮಾಸದಲ್ಲೂ ಮುಂದುವರಿಸ□ೇಕು. ಹಿಂದಿನ ಆ ಮಾಸದಲ್ಲಿ ಮೃತರಾದವರ ಪ್ರಥಮಾಬ್ದಿಕ□ನ್ನು ಆ ಮಾಸದ ಅ□ಕಮಾಸದಲ್ಲಿಯೇ ಮಾಡ□ೇಕು. ಇತರ ಶ್ರಾದ್ಧಾ□ದಿಗಳನ್ನು ನಿಜಮಾಸದಲ್ಲಿಯೇ ಮಾಡ□ೇಕು. ಅ□ಕಮಾಸದಲ್ಲಿ ಸಂಕಲ್ಪಶ್ರಾದ□ನ್ನು ಮಾಡುವ ಪಕ್ಷವೂ ಉಂಟು. ಮಾಸಿಕ ಶ್ರಾದ□ನ್ನು ಅ□ಕಮಾಸದಲ್ಲಿ ಸಹ ಮಾಡ□ೇಕು.

## ಅಧಿಕಮಾಸದ ಮುಖ್ಯ ಕರ್ತವ್ಯ ಮತ್ತು ಅದರ ಫಲ

**ಅಧಿಮಾಸೇ ತು ಸಂಪ್ರಾಪ್ತೇ ಶುಭೇ ಸೂರ್ಯಾದಿದೈವತೇ।**
**ತ್ರಯಸ್ತ್ರಿಂಶದಪೂಪಾಂಶ್ಚ ದಾನಾರ್ಹಾಂಶ್ಚ ದಿನೇದಿನೇ॥**

**ಸುವರ್ಣಗುಡಸಂಯುಕ್ತಾನ್ ಕಾಂಸ್ಯಪಾತ್ರೇ ನಿಧಾಯ ಚ।**
**ವಿಷ್ಣುಪ್ರೀತ್ಯೈ ಪ್ರದದ್ಯಾಚ್ಚ ಪೃಥ್ವೀದಾನಫಲಂ ಲಭೇತ್॥**

**ದ್ವಾದಶ್ಯಾಂ ಪೌರ್ಣಮಾಸ್ಯಾಂ ವಾ ಕ್ಷಯೇ ಪಾತೇ ಶುಭೇಽಹ್ನಿ ವಾ।**
**ನಿಷ್ಕಿಂಚನೇನ ದಾತವ್ಯಾ ಘೃತಶರ್ಕರಯಾ ಸಹ॥**

**ಯಾವಂತಿ ಚೈವ ಛಿದ್ರಾಣಿ ತೇಷ್ವಪೂಪೇಷು ಪಾಂಡವ।**
**ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ॥ – ಭವಿಷ್ಯತ್ಪುರಾಣ**

**ಮಾಸಾಧಿಕೇ ತು ಸಂಪ್ರಾಪ್ತೇ ಯಾವತ್ಸರ್ವಾನಪೂಪಕಾನ್।**
**ತಾವದ್ವರ್ಷಮವಾಪ್ನೋತಿ ವಿಷ್ಣುಲೋಕಂ ಸನಾತನಮ್॥ – ಸ್ಮೃತಿ**

ಅ□ಕಮಾಸದಲ್ಲಿದ್ವಾದಶೀ, ಹು□□ಥವಾ ಯಾವುದೇ ಶುಭ ದಿನಗಳಲ್ಲಿ □ಲ್ಲ, ತುಪ್ಪಗಳೊಂದಿಗೆ ಕೂಡಿದ ಮೂವತ್ಮೂರು ಅಪೂಪಗಳನ್ನು ಕಂಚಿನ ಪಾತ್ರೆಯಲ್ಲಿರಿಸಿ ಸುವರ್ಣಸಮೇತ ಯೋಗ್ಯ□ ್ರಾಹ್ಮಣರಿಗೆ ಪ್ರತಿದಿನ ದಾನವೀಯ□ೀಕು. ಅದರಿಂದ ಅಪೂಪದಲ್ಲಿರುವ □ದ್ರಗಳ ಸಂಖ್ಯೆಯಷ್ಟು ದೀರ್ಘಕಾಲ ಸ್ವರ್ಗಲೋಕದಲ್ಲಿ ವಾಸಿಸುವ ಪುಣ್ಯವು ಲ□ಸುತ್ತದೆ. ಮೂವತ್ಮೂರು ದೇವತೆಗಳನ್ನು ಉದ್ದೇಶಿಸಿ ಮಾಡುವ ಅಪೂಪದಾನವು ಪೃ□ವೀದಾನದ □ಲವನ್ನು ತಂದುಕೊಡುತ್ತದೆ. ಅಪರೋಕ್ಷ□ಾನದ್ವಾರಾ ಮೋಕ್ಷಪದವನ್ನು ಹೊಂದಲು ಸಹ ಇದು ನೆರವಾಗುತ್ತದೆ.

## ಅಪೂಪದಾನವಿಧಿ

**ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೇ ನಿಧಾಯ ಚ।**
**ಸಘೃತಂ ಸಹಿರಣ್ಯಂ ಚ ಬ್ರಾಹ್ಮಣಾಯ ನಿವೇದಯೇತ್॥**

ಮೂವತ್ಮೂರು ಅಪೂಪ□ಅತಿರಸ□ಗಳಕ್ನುಚಿನ ಪಾತ್ರೆಯಲ್ಲಿರಿಸಿ ತುಪ್ಪ ಮತ್ತು ಚಿನ್ನದ ಸಮೇತ ಯೋಗ್ಯ□ ್ರಾಹ್ಮಣನಿಗೆಸಮ□ ್ಪಸ□ೀಕು.

## ಪ್ರತಿದಿನವೂ ಅಪೂಪದಾನವು ವಿಹಿತ

**ಅಧಿಮಾಸೇ ತು ಸಂಪ್ರಾಪ್ತೇ ಗುಡಸರ್ಪಿರ್ಯುತಾನಿ ಚ।**
**ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇ ದಿನೇ॥**

ಅ□ಕಮಾಸವು ಬಂದಾಗ, □ಲ್ಲತುಪ್ಪಗಳೊಂದಿಗೆ ಕೂಡಿದ ಮೂವತ್ಮೂರು ಅಪೂಪಗಳನ್ನು ಪ್ರತಿನಿತ್ಯವೂ ದಾನಮಾಡ□ೀಕು. □ಪ್ರತಿದಿನವೂ ಕೊಡುವ ಅವಕಾಶವನ್ನು ಅನೇಕ ಕಾರಣಗಳಿಂದಾಗಿ ಹೊಂದದವರು ಆ ತಿಂಗಳಲ್ಲಿ ಒಂದು ದಿನವಾದರೂ ಕೊಡಲೇ□ೀಕು□.

## ಅಪೂಪದಾನಮಂತ್ರ

ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥

ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಧೃಕ್ ।
ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಭಿವರ್ಧಯ ॥

ಯಸ್ಯ ಹಸ್ತೇ ಗದಾ ಚಕ್ರೇ ಗರುಡೋ ಯಸ್ಯ ವಾಹನಮ್ ।
ಶಂಖಃ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥

ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋ ವಂಚಯತಿ ಭೂತಾನಿ ತಸ್ಮೈ ಕಾಲಾತ್ಮನೇ ನಮಃ ॥

ಕುರುಕ್ಷೇತ್ರಮಯೋ ದೇಶಃ ಕಾಲಃ ಪರ್ವ ದ್ವಿಜೋ ಹರಿಃ ।
ಪೃಥ್ವೀಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥

ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾದಿವೃದ್ಧ್ಯರ್ಥಂ ತೇನ ದಾಸ್ಯಾಮಿ ಭಾಸ್ಕರ ॥ –ಪದ್ಮಪುರಾಣ

## ಅಪೂಪದಾನಕಾಲದಲ್ಲಿ ಚಿಂತಿಸಬೇಕಾದ ಭಗವದ್ರೂಪಗಳು

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಹರಿಂ ಕೃಷ್ಣಮಧೋಕ್ಷಜಮ್ ।
ಕೇಶವಂ ಮಾಧವಂ ರಾಮಮಚ್ಯುತಂ ಪುರುಷೋತ್ತಮಮ್ ॥
ಗೋವಿಂದಂ ವಾಮನಂ ಶ್ರೀಶಂ ಶ್ರೀಕಂಠಂ ವಿಶ್ವಸಾಕ್ಷಿಣಮ್ ।
ನಾರಾಯಣಂ ಮಧುರಿಪುಮನಿರುದ್ಧಂ ತ್ರಿವಿಕ್ರಮಮ್ ॥
ವಾಸುದೇವಂ ಜಗದ್ಯೋನಿಮನಂತಂ ಶೇಷಶಾಯಿನಮ್ ।
ಸಂಕರ್ಷಣಂ ಚ ಪ್ರದ್ಯುಮ್ನಂ ದೈತ್ಯಾರಿಂ ವಿಶ್ವತೋಮುಖಮ್ ॥
ಜನಾರ್ದನಂ ಧರಾವಾಸಂ ದಾಮೋದರಮಘಾರ್ದನಮ್ ।
ಶ್ರೀಪತಿಂ ಚ ತ್ರಯಸ್ತ್ರಿಂಶದುದ್ದಿಶ್ಯ ಪ್ರತಿನಾಮಭಿಃ ॥
ಮಂತ್ರೈರೇತೈಶ್ಚ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಮ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರಪೌತ್ರಾದಿಸಂತತಿಮ್ ॥

*****

## ಮೂವತ್ತಮೂರು ದೇವತೆಗಳು

ಅಷ್ಟವಸುಗಳು (೮), ಏಕಾದಶರುದ್ರರು (೧೧), ದ್ವಾದಶಾದಿತ್ಯರು (೧೨), ಪ್ರಜಾಪತಿ (೧), ವಷಟ್ಕಾರ (೧)

*****

# ಶ್ರೀಪುರುಷೋತ್ತಮ-ಹೃಷೀಕೇಶರೂಪಗಳ ವಿವರ

ಲೇಖಕರು : ವಿಪ್ರ

ಶ್ರೀ□ಆನಂದಾ□ಪುರುಷೋತ್ತಮರೂಪವು ಅ□ಕಮಾಸದ ಅ□ದೇವತೆ. ಅದರಿಂದಾಗಿಯೇ ಅ□ಕಮಾಸಕ್ಕೆಪುರುಷೋತ್ತಮಮಾಸ ಎಂಬ ಹೆಸರೂ ಇದೆ. ಭಾದ್ರಪದಮಾಸಕ್ಕೆ □ಮುದಿ□ ಹೃ□ೀಕೇಶರೂಪವು ನಿಯಾಮಕರೂಪ. ಆದ್ದರಿಂದ ಒಟ್ಟಾಗಿ ಅ□ಕಭಾದ್ರಪದಮಾಸಕ್ಕೆ ಪುರುಷೋತ್ತಮ ಹೃ□ೀಕೇಶರೂಪಅ□ದೇವತೆಎಂದು ಚಿಂತಿಸ□ೇಕು.

ಪುರುಷೋತ್ತಮರೂಪದ ಲಕ್ಷಣವು ಹೀಗಿದೆ : ಶ್ರೀಮದಾಚಾರ್ಯರ ತಂತ್ರಸಾರ-ಸಂಗ್ರಹಾದಿ ಗ್ರಂಥಗಳಲ್ಲಿ ಬಂದಿರುವಂತೆ ಪುರುಷೋತ್ತಮರೂಪವು ಮೇಲಿನ ಬಲಗೈಯಲ್ಲಿ ಪದ್ಮ, ಕೆಳಬಲಗೈಯಲ್ಲಿ ಚಕ್ರ, ಮೇಲಿನ ಎಡಗೈಯಲ್ಲಿ ಶಂಖ ಹಾಗೂ ಕೆಳಗಿನ ಎಡಗೈಯಲ್ಲಿ ಗದೆಗಳನ್ನು ಹಿಡಿದಿರುವ ರೂಪ ಎಂದು ತಿಳಿಯ□ೇಕು. ಅದರಂತೆ ಹೃ□ೀಕೇಶ ರೂಪವು ಕೆಳಗಿನ ಬಲಗೈಯಲ್ಲಿ ಗದೆ, ಎಡಗೈಯಲ್ಲಿ ಶಂಖ, ಮೇಲಿನ ಬಲಗೈಯಲ್ಲಿ ಚಕ್ರ, ಹಾಗೂ ಎಡಗೈಯಲ್ಲಿ ಪದ್ಮ - ಇವುಗಳನ್ನು ಹೊಂದಿರುವ ರೂಪ : **ನಿತ್ಯಂ ಪಾಹಿ ಗದಾರಿ-ಪಂಕಜದರಾನ್ ಬಿಭ್ರದ್ಧೃಷೀಕೇಶ ಮಾಮ್ ।** - □ಶ್ರೀವಾದಿರಾಜಸ್ವಾಮಿಗಳ ಕೇಶವಾದಿ ಮೂರ್ತಿಸ್ತುತಿ□.

ಶ್ರೀಪುರುಷೋತ್ತಮ ಎಂದರೆ ಶ್ರೀಮದ□ಗವದ□ೀತೆಹದಿನೈದನೆಯ ಅಧ್ಯಾಯದ ಕೊನೆಯಲ್ಲಿ ಬಂದಿರುವಂತೆ [೧] ಕ್ಷರಾಕ್ಷರ ಪುರುಷೋತ್ತಮನಾದ ಶ್ರೀಹರಿ. □ ಅರ್ಥದಲ್ಲಿ ಶ್ರೀಹರಿಯ ಸಕಲರೂಪಗಳೂ ಶ್ರೀಪುರುಷೋತ್ತಮರೂಪಗಳೇ. ನರಸಿಂಹರೂಪವು ವಿಶೇಷವಾಗಿ ಶ್ರೀಪುರುಷೋತ್ತಮರೂಪವೇ □ರಸಿಂಹ - ನರಶ್ರೇಷ□- ಪುರುಷಶ್ರೇಷ□- ಪುರುಷೋತ್ತಮ□. ಮಾಸಗಳ ಪ್ರಸಕ್ತಿಯಲ್ಲಿ ಬಂದಿರುವುದರಿಂದ ಇದು ಕೇಶವಾದಿ ಚತುರ್ವಿಂಶತಿರೂಪಗಳಲ್ಲಿ ಒಂದಾದ ಪುರುಷೋತ್ತಮರೂಪ ಎಂಬುದು ವಿಶೇಷ.

ಪುರುಷೋತ್ತಮರೂಪದ ಸ್ತುತಿಪರವಾದ ಕೆಲವು ವಚನಗಳು ಹೀಗಿವೆ:

**ಅಧಿಕ ಬಂಧಂ ರಂಧಯ ಬೋಧಾಚ್ಛಿಂಧಿ ಪಿಧಾನಂ ಬಂಧುರಮದ್ಧಾ ।**

**- ಶ್ರೀಮದಾನಂದತೀರ್ಥರು (ದ್ವಾದಶಸ್ತೋತ್ರ)**

---

೧. ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ **ಪುರುಷೋತ್ತಮಃ** ॥
ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ - ಗೀತಾ (೧೫/೧೬-೨೦)

ದೇವೇಶಃ ಪುರುಷೋತ್ತಮೋಽರಿಕಮಲಃ ಶಂಖೀ ಗದೀ ಸದ್ವಪುಃ ... ।

– ಶ್ರೀವಾದಿರಾಜಸ್ವಾಮಿಗಳು (ಕೇಶವಾದಿಸ್ತುತಿ)

ಪದ್ಮಶಂಖಗದಾಚಕ್ರಧಾರ್ಯರ್ವೇತ್ ಪುರುಷೋತ್ತಮಃ ।
ಪುರುಷೋತ್ತಮರಾಮಾಽಸ್ತು ನಂದಾಽಽನಂದವರಪ್ರದಾ ॥

– ಶ್ರೀಸುಮತೀಂದ್ರತೀರ್ಥರು (ಕೇಶವಾದಿಚತುರ್ವಿಂಶತಿಮೂರ್ತಿಲಕ್ಷಣಸ್ತುತಿ)

ಶ್ರೀಹರಿದಾಸರ ಅನೇಕ ಕೃತಿಗಳಲ್ಲಿ ಶ್ರೀಕೇಶವಾದಿರೂಪಗಳ ಸ್ತವನ ಬಂದಿದ್ದು ಅವುಗಳಲ್ಲಿ ಕೆಲವು ಹೀಗಿವೆ :

ಪುರುಷೋತ್ತಮ ಮುರಾರೇ ಬಾರೋ ಪುರಾಣಪುರುಷ ಧೊರೇ –ಶ್ರೀಶ್ರೀಪಾದರಾಜರು

ಪಾರಿಜಾತದ ಹೂವ ನಾರಿಗೆ ತಂದಾನೇ – ಧೀರದಾನವರ ಗೆಲಿದಾನೇ
ಧೀರದಾನವರ ಗೆಲಿದಾನೇ – ನರಹರಿ ಪುರುಷೋತ್ತಮ ನಮ್ಮ ಮನೆದೈವ ಸುವ್ವಿ

– ಶ್ರೀವಾದಿರಾಜಸ್ವಾಮಿಗಳು

ಪುರುಷೋತ್ತಮ ಎಂದರೆ ಕ್ಷರಾಕ್ಷರ ಪುರುಷರಿಗೆ ಶ್ರೇಷ್ಠನಾದಂತ । ಸ್ವಾಮಿ ತಾನಿರಲಿ–ಕ್ಕಾಗಿ । ಪುರಷೋತ್ತಮ ಎಂತ ಕರೆಸಿಕೋತಾನೆ ॥ ಭಾರತೀರಮಣ ಮುಖ್ಯಪ್ರಾಣಾಂತ–ರ್ಗತನಾಗಿದ್ದಂತ । ಲಕ್ಷ್ಮೀನಾರಾಯಣಮೂರ್ತಿ । ಇಂಥ ಮುಖ್ಯಪ್ರಾಣದೇವರ ಕೈಲಿ ಪೂಜೆ ಮಾಡಿಸಿಕೊಳ್ಳುವಂತ । ಪುರುಷೋತ್ತಮಮೂರ್ತಿಗೆ ನಾ ಮಾಡುವಂತ ಅನಂತಾನಂತ ನಮಸ್ಕಾರ ॥ – ಶ್ರೀವಾದಿರಾಜಸ್ವಾಮಿಗಳು

ಹೃಷಿಕೇಶ ವೃಂದಾವನದಲಿ ನೀ– ಹರುಷದಿ ಕೊಳಲನೂದುತ ಯಮುನೆಯಲಿ
ಸತಿಯರ ಸಮ್ಮೇಳದಲಿ ನೀ – ಧರಿಸಿದ್ಯೋ ಮಂದಾರಮಾಲೆ ಕೊರಳಲ್ಲಿ ॥
ಪುರುಷೋತ್ತಮಗಾರು ಸಾಟಿ – ಪರಬ್ರಹ್ಮಸ್ವರೂಪಿಯೆ ನಿನಗಾರೊ ಪೋಟಿ
ಮಹಿಮೆ ಕೇಳಿದರೊಂದು ಕೋಟಿ ನಿನ್ನ– ಹೃದಯದಿ ಬ್ರಹ್ಮಾಂಡ ಕಂಡ ಕಿರೀಟಿ ॥

– ಶ್ರೀಪುರಂದರದಾಸರು

ಪುರುಷೋತ್ತಮನ ಪುರಾಣಪುರುಷನೆಂದು ತಿಳಿಯಿರೋ – ಶ್ರೀಪುರಂದರದಾಸರು

ನಿತ್ಯನೇಮ ಎಂಬೋದಿಲ್ಲ – ಮತ್ತೆ ದಾನಧರ್ಮವಿಲ್ಲ
ವ್ಯರ್ಥವಾಗಿ ಕೆಡಲಿಬೇಡಿ – ಪುರುಷೋತ್ತಮನ್ನ ನೆನೆಯಿರೋ – ಶ್ರೀಪುರಂದರದಾಸರು

ಪುರುಷೋತ್ತಮ ನಿಮ್ಮ ನಾಮ ಹೊಸಮುತ್ತಿನ ಮೂಗುತಿ – ಶ್ರೀಪುರಂದರದಾಸರು

ಪುರುಷೋತ್ತಮಗಾರು ಸಾಟಿ – ಪರ –ಬ್ರಹ್ಮಸ್ವರೂಪಿಯೇ ನಿನಗಾರೋ ಪೋಟಿ
ಮಹಿಮೆ ಕೇಳಿದರೊಂದು ಕೋಟಿ – ನಿನ್ನ ಹೃದಯದಿ ಕಂಡ ಬ್ರಹ್ಮಾಂಡ ಕಿರೀಟಿ

– ಶ್ರೀಪುರಂದರದಾಸರು

ಪುರುಷೋತ್ತಮನಿಗೆ ಪರಿಮಳಕುಸುಮಗಳು – ರಾಮಗೋವಿಂದ – ಶ್ರೀಪುರಂದರದಾಸರು

ಹುಸಿಯನಾಡಿ ಹೊಟ್ಟೆಹೊರೆವ –ವಿಷಯದಲ್ಲಿ ರಸಿಕನೆಂದು
ಹುಸಿಗೆ ಹಾಕದಿರು ಎನ್ನ –ಹೃಷೀಕೇಶನೆ ॥
ಹರುಷದಿಂದ ನಿನ್ನ ನಾಮ – ಸ್ಮರಿಸುವಂತೆ ಮಾಡು ಪ್ರೇಮ
ಇರಿಸು ನಿನ್ನ ಚರಣದಲ್ಲಿ – ಪುರುಷೋತ್ತಮ ॥ – ಶ್ರೀಕನಕದಾಸರು

ಋಷಿಗಳಾಶ್ರಮದಲ್ಲಿ ಹೃಷೀಕೇಶನಿದ್ದಾನೆ – ರಾಮರಾಮ
ಹೃಷೀಕೇಶನ ದಯದಿ ಋಷಿಗಳಾಶ್ರಮ ಕಂಡೆ – ರಾಮರಾಮ ॥

ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ – ರಾಮರಾಮ
ಪುಣ್ಯಕ್ಷೇತ್ರವ ಕಂಡೆ ಪುರುಷೋತ್ತಮನ ದಯದಿ – ರಾಮರಾಮ ॥ – ಶ್ರೀವಿಜಯದಾಸರು
ಆನಂದಾಪತೇ ಶ್ರೀಪುರಷೋತ್ತಮಾಯ ನಮಃ – ಶ್ರೀವಿಜಯದಾಸರು
ಕ್ಷರಾಕ್ಷರರೊಳಗೆ ಪರಮ ಉತ್ತಮನಾದ – ಕರಿರಾಜ
ವರದ ಕವಿಗೇಯ । ಕರಿರಾಜವರದ ಕವಿಗೇಯನಾದ ಶ್ರೀ–
ಪುರುಷೋತ್ತಮನ್ನ ಮುನ್ನ ಬಲಗೊಂಬೆ ಕೋಲೆ – ಶ್ರೀಮೋಹನದಾಸರು

*****

## ಭೋಜನದ ಅನಂತರ ಪಠಿಸಬೇಕಾದ ಶ್ಲೋಕಗಳು :

**ಅಗಸ್ತಿರಗ್ನಿರ್ಬಡವಾನಲಶ್ಚ ಭುಕ್ತಂ ಮಯಾಽನ್ನಂ ಜರಯತ್ವಶೇಷಮ್ ।**
**ಸುಖಂ ಚ ಮೇ ತತ್ಪರಿಣಾಮಸಂಭವಂ ಯಚ್ಛಂತ್ವರೋಗೋ ಮಮ ಚಾಸ್ತು ದೇಹೇ ॥**
**ವಿಷ್ಣುಃ ಸಮಸ್ತೇಂದ್ರಿಯದೇಹದೇಹೀ ಪ್ರಧಾನಭೂತೋ ಭಗವಾನ್ ಯಥೈಕಃ ।**
**ಸತ್ಯೇನ ತೇನಾತ್ತಮಶೇಷಮನ್ನಮಾರೋಗ್ಯದಂ ಮೇ ಪರಿಣಾಮಮೇತು ॥**
**ವಿಷ್ಣುರತ್ತಾ ತಥೈವಾನ್ನಂ ಪರಿಣಾಮಶ್ಚ ವೈ ತಥಾ ।**
**ಸತ್ಯೇನ ತೇನ ಮದ್ಭುಕ್ತಂ ಜೀರ್ಯತ್ವನ್ನಮಿದಂ ತಥಾ ॥**
**ಇತ್ಯುಚ್ಚಾರ್ಯ ಸ್ವಹಸ್ತೇನ ಪರಿಮೃಜ್ಯ ತಥೋದರಮ್ ।**
**ಅನಾಯಾಸಪ್ರದಾಯೀನಿ ಕುರ್ಯಾತ್ ಕರ್ಮಾಣ್ಯತಂದ್ರಿತಃ ॥**

–ವಿಷ್ಣುಪುರಾಣ

ಅಗಸ್ತ್ಯ, ಅಗ್ನಿ ಹಾಗೂ ಬಡವಾನಲ ಇವರು ನಾನು ಭುಂಜಿಸಿದ ಅನ್ನವನ್ನು ಪೂರ್ಣವಾಗಿ ಜೀರ್ಣಿಸುವಂತೆ ಮಾಡಲಿ. ಅದರಿಂದ ಉಂಟಾಗುವ ಸುಖವು ನನಗೆ ಲಭಿಸಲಿ. ನನ್ನ ದೇಹದಲ್ಲಿ ಆರೋಗ್ಯವು ಸದಾ ಇರಲಿ. ಮಹಾವಿಷ್ಣುವು ಸಮಸ್ತರ ಇಂದ್ರಿಯಗಳಿಗೂ ದೇಹಗಳಿಗೂ ಜೀವಿಗಳಿಗೂ ಸ್ವಾಮಿಯಾದವನು. ಸರ್ವೋತ್ತಮ–ನಾದವನು, ಸ್ವತಂತ್ರನಾದವನು. ಇಂತಹ ಯಥಾರ್ಥಜ್ಞಾನದಿಂದ ನಾನು ಉಂಡ ಸಕಲ ಆಹಾರವು ಜೀರ್ಣವಾಗಲಿ ಹಾಗೂ ಆರೋಗ್ಯನೀಡಲಿ. ವಿಷ್ಣುವೇ ಭೋಜಕನು, ಅನ್ನದಲ್ಲೂ ಅವನದೇ ಸನ್ನಿಧಾನ. ಅದನ್ನು ಜೀರ್ಣಗೊಳಿಸುವವನು ಅವನೇ. ಇಂತಹ ಯಥಾರ್ಥಜ್ಞಾನದಿಂದನಾನು ಉಂಡ ಅನ್ನ ಜೀರ್ಣಗೊಳಲಿ. ಹೀಗೆ ಉಚ್ಚರಿಸಿ ತನ್ನ ಕೈಯಿಂದ ಉದರವನ್ನು ಮುಟ್ಟಿಕೊಂಡು, ಆ ಬಳಿಕ ಆಲಸ್ಯವಿಲ್ಲದೆ ಶ್ರಮವಲ್ಲದ ಕಾರ್ಯಗಳನ್ನು ಮಾಡತೊಡಗಬೇಕು. ಇದು ಶ್ರೀಮದಾಚಾರ್ಯರ ಸದಾಸ್ಮೃತಿಯಲ್ಲಿನ **ಆಚಮ್ಯ ಮೂಲಮಂತ್ರೇಣ ಕೋಷ್ಠಂ ಸ್ವಮಭಿಮಂತ್ರಯೇತ್** ಎಂಬ ವಾಕ್ಯದಲ್ಲಿನ ತನ್ನ ಉದರವನ್ನು ಭೋಜನಾನಂತರ ಮೂಲಮಂತ್ರದಿಂದ ಅಭಿಮಂತ್ರಿಸಿಕೊಳ್ಳಬೇಕು ಎಂಬ ಮಾತಿನ ವಿವರಣೆಯಂತಿದೆ.

# ಶ್ರೀಕನಕದಾಸರ ಹರಿಭಕ್ತಿಸಾರ

**ಅನುವಾದ – ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

□ಹಿಂದಿನಸಂಚಿಕೆಯಿಂದ□

**ದಾಶರಥಿ ವೈಕುಂಠನಗರನಿ–**
**ವಾಸ ತ್ರೈಜಗದೀಶ ಪಾಪವಿ–**
**ನಾಶ ಪರಮವಿಲಾಸ ಹರಿ ಸರ್ವೇಶ ದೇವೇಶ ।**
**ವಾಸುದೇವ ದಿನೇಶಶತಸಂ–**
**ಕಾಶ ಯದುಕುಲವಂಶತಿಲಕ ಪ–**
**ರಾಶರಾನತ ದೇವ ರಕ್ಷಿಸು ನಮ್ಮನನವರತ ॥೧೧॥**

ದಶರಥಪುತ್ರನಾಗಿ ಅವತರಿಸಿದ ಶ್ರೀರಾಮನೇ □ ವೈಕುಂ□ವೆಂಬ ನಗರದಲ್ಲಿ ನೆಲೆಸಿದವನೇ, ಮೂರುಲೋಕಗಳಿಗೆ ಒಡೆಯನೇ, ಸಕಲ ಪಾಪಗಳನ್ನು ಸಂಪೂರ್ಣ–ವಾಗಿ ಪರಿಹರಿಸುವವನೇ, ಅತ್ಯಂತ ಶ್ರೇಷ□ವಾದಲೀಲೆಯಿಂದ ಕೂಡಿದವನೇ, ಶ್ರೀಹರಿಯೇ, ಸಕಲರಿಗೂ ಒಡೆಯನೇ, ದೇವತೆಗಳ ಸ್ವಾಮಿಯೇ, ವಾಸುದೇವನೇ, ನೂರಾರು ಸೂರ್ಯರ ಕಾಂತಿ ಉಳ□ವನೇ,ಯದುಕುಲಕ್ಕೆ ಹಾಗೂ ಆ ವಂಶಕ್ಕೆ ತಿಲಕಪ್ರಾಯನಾದವೇ, ಪರಾಶರಮುನಿಯಿಂದ ವಂದಿತನಾದವನೇ, ದೇವನೇ ನಮ್ಮನ್ನು ಅನವರತ ರ□ಸು.

ವಿ : □ ಪದ್ಯದಲ್ಲೂ ಶ್ರೀರಾಮ ಹಾಗೂ ಶ್ರೀಕೃಷ□ರೂಪಗಳ ವರ್ಣನೆ ಮುಂದುವರೆದಿದೆ.

**ದಾಶರಥಿ :** ದಶರಥನ ಪುತ್ರನಾಗಿ ಅವತರಿಸಿದ ಶ್ರೀಹರಿಯ ಶ್ರೀರಾಮರೂಪ ಎಂದರ್ಥ. ಲಕ್ಷ್ಮಣ, ಭರತ, ಶತ್ರುಘ್ನರೂ ಸಹ ದಶರಥನ ಪುತ್ರರೇ ಆದರೂ □**ಅಸಾಧಾರಣ್ಯೇನ ವ್ಯಪದೇಶಾ ಭವಂತಿ**□ಎಂಬ ನ್ಯಾಯದಿಂದ ಪ್ರಧಾನ ಎಂಬ ಕಾರಣ–ದಿಂದ ದಾಶರ□ ಎಂದರೆ ಶ್ರೀರಾಮ ಎಂದೇ ಅರ್ಥ. ದಶರಥನು ಸ್ವರೂಪತ□ ಸ್ವಾಯಂಭುವಮನು. ಅವನ ವಿಶೇಷ ತಪಸಿ□ ಮೆಚ್ಚಿ ಶ್ರೀಹರಿ ಅವನ ಪುತ್ರತ್ವೇನ ಅವತರಿಸಿ, ದಾಶರ□ಎನಿಸಿದ. ಇದರಿಂದಾಗಿ ದಶರಥನ ಕೀರ್ತಿ ಅಜರಾಮರವಾಯಿತು.

**ವೈಕುಂಠನಗರನಿವಾಸ :** ವೈಕುಂ□ವು ಶ್ರೀಹರಿಯ ಪ್ರಧಾನವಾದ □ನೆಲೆಗಳಲ್ಲಿ ಒಂದು. ಶ್ವೇತದ್ವೀಪ ಹಾಗೂ ಅನಂತಾಸನ ಇವು ಇತರ ಎರಡು ನೆಲೆಗಳು. ವೈಕುಂ□ವು ಪ್ರಳಯಕಾಲದಲ್ಲೂ ಸಹ ನಾಶವಾಗದ ನಿತ್ಯಲೋಕ. ಬ್ರಹ್ಮ–ಶಿವ ಮೊದಲಾದವರ ಲೋಕಗಳು ಪ್ರಳಯಕಾಲದಲ್ಲಿ ಉಳಿಯುವಂತಹವುಗಳಲ್ಲ : **ಆಬ್ರಹ್ಮಭುವನಾಲ್ಲೋಕಾ ಪುನರಾವರ್ತಿನೋಽರ್ಜುನ** ಗೀತಾ□□□□□. ವೈಕುಂ□ಲೋಕವು ನಿತ್ಯಲೋಕವಾದ್ದ–ರಿಂದಲೇ ಅಲ್ಲಿಗೆ ಹೋದವರೂ ಸಹ ಸದಾ ಅಲ್ಲಿಯೇ ಉಳಿಯುವಂತಾಗುವರು ಎಂಬುದು ವಿಶೇಷ : **ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ –ಗೀತಾ (೧೫/೬)** □ ವಿಶೇಷವನ್ನು ಸೂಚಿಸಲೆಂದು ವೈಕುಂ□ನಗರನಿವಾಸ ಎಂಬ ವಿಶೇಷಣದಿಂದ ಸ್ತುತಿಸಿರುವರು.

ಶ್ರೀರಾಮನ ರಾಜಧಾನಿ ಅಯೋಧ್ಯಾನಗರ. ಅದು ಶ್ರೀರಾಮನ ಸನ್ನಿಧಾನದಿಂದಾಗಿ ವೈಕುಂ□ದಂತೆ ಕಂಗೊಳಿಸುತ್ತಿತ್ತು : **ತಸ್ಯೈವಮಬ್ಜಭವಲೋಕ ಸಮಾಮಿಮಾಂ ಕ್ಷ್ಮಾಂ ಕೃತ್ವಾನುಶಾಸತ ಉದೀಕ್ಷ್ಯ ಗುಣಾನ್ ಧರಾಯಾಃ** – ಮ.□ಾ.ತಾ.ನಿ. □□□□ ಇದರಿಂದ ವೈಕುಂ□ದಂತೆ ಶೋ□ಸುವ ಅಯೋಧ್ಯಾನಗರ ನಿವಾಸಿ ಎಂಬ ಅರ್ಥ ತಿಳಿಯುವುದು. ತನ್ನ ನಿವಾಸದಿಂದಾಗಿ ಅಯೋಧ್ಯೆಯಂತಹ ಭೂಲೋಕದ ನಗರಕ್ಕೂ ವೈಕುಂ□ದ ಶೋಭೆ ಕೊಟ್ಟ ಹಿರಿಮೆ ಶ್ರೀರಾಮನದು ಎಂಬುದು □ ಮಾತಿನ ವಿಶೇಷಾಂಶ.

**ತ್ರೈಜಗದೀಶ :** ಮೂರು ಲೋಕಗಳಿಗೆ ಒಡೆಯ. ಭೂಮಿ, ಅಂತರಿಕ್ಷ ಹಾಗೂ ಪಾತಾಳ ಎಂಬ ಇವು □ ಲೋಕಗಳು. ಅಂತರಿಕ್ಷ ಎಂಬುದರಿಂದ ಮೇಲಿನ ಭುವ□ಮೊದಲಾದ ಇತರ □ ಲೋಕಗಳು. ಪಾತಾಳಶಬ್ದದಿಂದ ಅತಳ, ವಿತಳ ಮೊದಲಾದ ಸಕಲ ಕೆಳಗಿನ ಲೋಕಗಳೂ ವಿವ□ತ. ಇದರಿಂದ ಶ್ರೀರಾಮನು ಕೇವಲ ಕೋಸಲದೇಶದ ಅಥವಾ ಭೂಲೋಕದ ರಾಜನಾಗದೆ, ಸಮಸ್ತ ವಿಶ್ವಕ್ಕೇ ಒಡೆಯನಾದವನು ಎಂಬ ವಿಶೇಷಾರ್ಥ ತಿಳಿಯುವುದು. ಶ್ರೀರಾಮನು ರಾಜ್ಯಭಾರ ನಡೆಸಿದ್ದಾಗ ಬ್ರಹ್ಮಾದಿ ದೇವತೆಗಳೆಲ್ಲಾ ತಮ್ಮ ಮೂಲರೂಪ-ಗಳಿಂದಲೇ ಶ್ರೀರಾಮನ ಬಳಿಗೆ ಆಗಮಿಸಿ, ಪರಮಭಕ್ತಿಯಿಂದ ನಮಸ್ಕರಿಸುತ್ತಿದ್ದ ವಿವರ ಇದನ್ನು ದೃ□ಪಡಿಸುವುದು : **ಸಬ್ರಹ್ಮರುದ್ರಮರುದರ್ಕದಿವಾಕರಾದಿಮೂರ್ಧನ್ಯರತ್ನ-ಪರಿಘಟ್ಟಿತ ಪಾದಪೀಠಃ** – ಮ.ಭಾ.ತಾ.ನಿ.□□□□□□□ಜಗತ್ತೆಂಬುದಕ್ಕೆ ವಾಯು ಎಂದೂ ಹೆಸರು. ತೆ□ಗತ್ತು ಎಂದರೆ ವಾಯುದೇವರ ಹನುಮ, □ೀಮ, ಮಧ್ವ ಎಂಬ ರೂಪಗಳಿಗೂ ಒಡೆಯ□ ಎಂದರೆ ಶ್ರೀರಾಮರೂಪದಿಂದ ಹನುಮದ್ರೂಪಕ್ಕೂ ಶ್ರೀಕೃಷ□ೂಪದಿಂದ □ೀಮರೂಪಕ್ಕೂ , ಶ್ರೀವ್ಯಾಸರೂಪದಿಂದ ಮಧ್ವರೂಪಕ್ಕೂ ಒಡೆಯ ಎಂದರ್ಥ.

**ಪಾಪವಿನಾಶ :** ಪಾಪಗಳಿಗೆ ಸಂಪೂರ್ಣವಾದ ನಾಶವನ್ನುಂಟುಮಾಡುವವನು ಎಂದರ್ಥ. ಇತರ ದೇವತೆಗಳು ಸಹ ಪಾಪವನ್ನು ನಾಶಪಡಿಸುವವರಾದರೂ ಅನಾದಿ ಕಾಲದಿಂದ ಸಂಚಿತವಾದ ಸಕಲ ಪಾಪಗಳೂ ಸಹ ನಾಶವಾಗುವುದು ಶ್ರೀಹರಿಯ ಸಾಕ್ಷಾತ□ದರ್ಶನ-ವಾದಾಗಲೇ ಎಂಬ ವಿಶೇಷ ಬ್ರಹ್ಮಸೂತ್ರದಲ್ಲಿದೆ. ಇದನ್ನು ಸೂಚಿಸಲು, ಪಾಪನಾಶ ಎಂದಷ್ಟೇ ಹೇಳದೆ, ಪಾಪವಿನಾಶ ಎಂಬುದಾಗಿ ತಿಳಿಸಿರುವರು. ಸಂಸ□ತದಲ್ಲಿ ಪಾಪ ಎಂಬುದಕ್ಕೆ ಪಾ□ ಎಂಬ ಅರ್ಥವೂ ಉಂಟು. ಇದರಿಂದ ಪಾಪವಿನಾಶ ಎಂಬುದಕ್ಕೆ ಸಕಲ ಪಾ□ಗಳಿಗೆ ಸಂಪೂರ್ಣವಾಗಿ ವಿನಾಶವುಂಟುಮಾಡುವವನು ಎಂದರೆ, ಅಧೋಗತಿಯನ್ನೇ ನೀಡುವವನು ಎಂದರ್ಥ. ಇದು ಭಗವದ□ತೆಯ **ವಿನಾಶಾಯ ಚ ದುಷ್ಕೃತಾಮ್**□□□□□ಎಂಬ ಮಾತಿನ ಭಾವ. ಅದರಂತೆ □□ನೆಯ ಅಧ್ಯಾಯದಲ್ಲಿನ □ ಕೆಳಗಿನ ಶ್ಲೋಕದ ಭಾವವೂ ಆಗಿದೆ :

> **ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।**
> **ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥**
> **ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।**
> **ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥–(೨೦)**

**– ಮುಂದುವರೆಯುವುದು**

*****

# ಮಾಸದ ವಿಶೇಷಗಳು

## ಶ್ರಾವಣಮಾಸ ಕೃಷ್ಣಪಕ್ಷ

**೧೨.೦೮.೧೨ : ದಶಮೀ**

**೧೩.೦೮.೧೨ : ಸರ್ವರಿಗೂ ಏಕಾದಶೀ(ಅಜಾ)**

**೧೪.೦೮.೧೨ : ದ್ವಾದಶೀ,** ಮಂಗಳಗ□ೀವ್ರತ

□□.□□.□□ : ಗುರುಪುಷ್ಯಾಮೃತಯೊ

□□.□□.□□ : ಅಮಾವಾಸ್ಯೆ, ದರ್ಶ, ಸಿಂಹ ಸಂಕ್ರಮಣ □ವಿಷು□ದಪರ್ವಪುಣ್ಯಕಾಲ □ಳಿಗೆ□ □.□□□, ಕುಶಗ್ರಹಣ, ಅನ್ವಾ□ವಿಷ್ಣುಪಂಚಕವ್ರತ

*****

## ಅಧಿಕ ಭಾದ್ರಪದಮಾಸ ಶುಕ್ಲಪಕ್ಷ

**(ಮಾಸನಿಯಾಮಕ : ಆನಂದಾ-ಪುರುಷೋತ್ತಮ ; ಬುದ್ಧಿ-ಹೃಷೀಕೇಶ)**

೧೮.೦೮.೧೨ : ಅಧಿಕಮಾಸದ ಪ್ರಾರಂಭ

೧೯.೦೮.೧೨ : ಚಂದ್ರದರ್ಶನ

**೨೬.೦೮.೧೨ : ದಶಮೀ**

**೨೭.೦೮.೧೨ : ಸರ್ವರಿಗೂ ಏಕಾದಶೀ(ಪದ್ಮಿನೀ)**

**೨೮.೦೮.೧೨ : ದ್ವಾದಶೀ**

□□.□□.□□ : ವಿಷು□ಪಂಚಕವ್ರತ ಇಲ್ಲ□ಶ್ರವಣ□

□□.□□.□□ : ಹು□ವಿಷ್ಣುಪಂಚಕವ್ರತ

## ಅಧಿಕ ಭಾದ್ರಪದಮಾಸ ಕೃಷ್ಣಪಕ್ಷ

□□□□□□: ಅಶೂನ್ಯಶಯನವ್ರತ

**೧೧.೦೯.೧೨ : ದಶಮೀ**

**೧೨.೦೯.೧೨ : ಸರ್ವರಿಗೂ ಏಕಾದಶೀ(ಪರಮಾ)**

**೧೩.೦೯.೧೨ : ದ್ವಾದಶೀ**

□□.□□.□□ : ಅನ್ವಾಧಾನ, ದರ್ಶ

□□.□□.□□ : ಅಮಾವಾಸ್ಯೆ, ವಿಷು□ಪಂಚಕವ್ರತ, ಅ□ಕಮಾಸಮಾ□

# ನಿಜ ಭಾದ್ರಪದಮಾಸ ಶುಕ್ಲಪಕ್ಷ

## (ಮಾಸ ನಿಯಾಮಕ : ಬುದ್ಧಿ - ಹೃಷೀಕೇಶ)

□□□: ಚಂದ್ರದರ್ಶನ, ಕನ್ಯಾಸಂಕ್ರಮಣ,
ಶ್ರೀಮದಾ□ವತ ಪ್ರೋಷ□ದಿ ಆರಂಭ,

**೧೮.೦೯.೧೨ : ಸ್ವರ್ಣಗೌರೀ ವ್ರತ**

**೧೯.೦೯.೧೨ : ಗಣೇಶಚತುರ್ಥಿ**

□□□: ಋಷಿಪಂಚಮಿ□ವ್ರತಗ್ರಹಣ ಹಾಗೂ ಉದ್ಯಾಪನಗಳಿಗೆ ಯೋಗ್ಯ□

□□□: □್ಯೇಷಾದೇವಿ ಆವಾಹನೆ

□□□: □್ಯೇಷಾದೇವಿ ಪೂ□

□□□: □್ಯೇಷಾದೇವಿ ವಿಸರ್ಜನೆ, ದೋರಬಂಧನ,
ಮಾಸಮಹಾಲ□ೃಕಲಶ ವಿಸರ್ಜನ

**೨೫.೦೯.೧೨ : ದಶಮೀ**

**೨೬.೦೯.೧೨ : ಸರ್ವರಿಗೂ ಏಕಾದಶೀ(ಪರಿವರ್ತಿನೀ),**
**ದಧಿವ್ರತ ಸಮಾಪ್ತಿ, ಕ್ಷೀರವ್ರತ ಆರಂಭ**

**೨೭.೦೯.೧೨ : ಅಲ್ಪದ್ವಾದಶೀ(ಪ್ರಾತಃ ೮.೨೦ರ ಒಳಗೆ ಪಾರಣೆ),ವಾಮನಜಯಂತೀ**

**೨೯.೦೯.೧೨ : ಅನಂತಚತುರ್ದಶೀ**

**೩೦.೦೯.೧೨ : ಹುಣ್ಣಿಮೆ, ಪ್ರೋಷ್ಠಪದಿ ಸಮಾಪ್ತಿ, ಮಹಾಲಯಾರಂಭ**

*****

## ಗುರುಗಳ ಪುಣ್ಯದಿನಗಳು

□□□: ಶ್ರೀವ್ಯಾಸತತ್ತ್ವ□ತೀರ್ಥರು, ವೇ□ಸೋಮಪುರ

□□□: ಶ್ರೀಸತ್ಯಧರ್ಮತೀರ್ಥರು□ಉ.ಮ□ಹೊಳೆಹೊನ್ನೂರು

*****

## ಯತಿಗಳು ಆಶೀರ್ವಾದ ಎನ್ನುವಂತಿಲ್ಲ

**ಯತೀನಾಂ ನಾಧಿಕಾರೋಽಸ್ತಿ ಹ್ಯಾಸಿಷಿ ವ್ಯಾಸಶಾಸನಾತ್ ।**
**ನಾರಾಯಣೇತಿ ಚ ಬ್ರೂಯಾತ್ ಪ್ರಣತಾಯುರ್ವಿವರ್ಧಯೇ ॥ -(ಸ್ಮೃತಿ)**

ಯತಿಗಳು ಆಶೀರ್ವಾದ ಎನ್ನುವಂತಿಲ್ಲ ಎಂಬುದು ಶ್ರೀವೇದವ್ಯಾಸರ ಆದೇಶ. ಅದಕ್ಕೆ ಬದಲಾಗಿ ಅವರು □ನಾರಾಯಣ□ಎನ್ನ□ೇಕು. ಇದರಿಂದ ಅವರಿಗೆ ನಮಸ್ಕರಿಸಿದವರ ಆಯುಷ್ಯ ವ□ಸುವುದು.□ಇದು ಯತಿಗಳು ನಾರಾಯಣಸ್ಮರ□ ಎನ್ನುವುದಕ್ಕೆ ಕಾರಣ□

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೧೮.೦೮.೨೦೧೨ ಶನಿವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ
ಸ್ಥಳ : ಶ್ರೀರಾಮಮಂದಿರ, ಮಲ್ಲೇಶ್ವರ, ಬೆಂಗಳೂರು

*****

೧೯.೦೮.೨೦೧೨ ಭಾನುವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ
ಸ್ಥಳ : ಶ್ರೀರಾಮಮಂದಿರ, ಮಲ್ಲೇಶ್ವರ, ಬೆಂಗಳೂರು

*****

೨೦.೦೮.೨೦೧೨ರಿಂದ ೨೬.೦೮.೨೦೧೨ವರೆಗೆ ಪ್ರವಚನ ಸಂಜೆ ೬.೩೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ
ಸ್ಥಳ : ಶ್ರೀಮಾಧ್ವಸಂಘ, ಬಳ್ಳಾರಿ

*****

೨೭.೦೮.೨೦೧೨ ಸೋಮವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ
(ಪರಮಪೂಜ್ಯ ಶ್ರೀಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥಶ್ರೀಪಾದರ ದಿವ್ಯ ಉಪಸ್ಥಿತಿಯಲ್ಲಿ)
ಸ್ಥಳ : ಶ್ರೀಉತ್ತರಾದಿಮಠ, ಬಸವನಗುಡಿ, ಬೆಂಗಳೂರು

*****

೩೦.೦೮.೨೦೧೨ ಗುರುವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಹರಿಕಥಾಮೃತಸಾರ
ಸ್ಥಳ : ಕುವೆಂಪುರಂಗಮಂದಿರ, ಶಿವಮೊಗ್ಗ

*****

೩೧.೦೮.೨೦೧೨ ಶುಕ್ರವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ 'ಗೀತಾ'ಪ್ರವಚನ
ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಇಟ್ಟಮಡು, ಬೆಂಗಳೂರು

*****

೦೨.೦೯.೨೦೧೨ ಭಾನುವಾರ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ
ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಯಲಹಂಕ ಉಪನಗರ, ಬೆಂಗಳೂರು

*****

೧೩.೦೯.೧೨ರಿಂದ ೧೬.೦೯.೨೦೧೨ ಪ್ರವಚನ ಸಂಜೆ ೬.೦೦ಕ್ಕೆ
ವಿಷಯ : ಅಧಿಕಮಾಸನಿಮಿತ್ತ ಪ್ರವಚನ,
(ಪರಮಪೂಜ್ಯ ಶ್ರೀಪೇಜಾವರಮಠಾಧೀಶರಾದ ಶ್ರೀವಿಶ್ವೇಶತೀರ್ಥಶ್ರೀಪಾದರ ದಿವ್ಯ ಉಪಸ್ಥಿತಿಯಲ್ಲಿ)
ಸ್ಥಳ : ಶ್ರೀಉತ್ತರಾದಿಮಠ, ಟ್ರಿಪ್ಲಿಕೇನ್,ಚೆನ್ನೈ

*****

॥ ಶ್ರೀಲಕ್ಷ್ಮೀವೇಂಕಟೇಶೋ ವಿಜಯತೇ ॥

ಶ್ರೀವೇದವ್ಯಾಸಪ್ರಣೀತ ಶ್ರೀಬ್ರಹ್ಮಸೂತ್ರಗಳಿಗೆ

ಶ್ರೀಮದಾಚಾರ್ಯರು ರಚಿಸಿದ ಅನುವ್ಯಾಖ್ಯಾನದ ಶ್ರೀಜಯತೀರ್ಥವಿರಚಿತ ಟೀಕಾ

# ಶ್ರೀಮನ್ ನ್ಯಾಯಸುಧಾ




ಈ ಪವಿತ್ರವಾದ ಗ್ರಂಥವನ್ನು ವ್ಯಾಸಪೂಜೆ, ಗ್ರಂಥದ ಪಾರಾಯಣ, ಅಧ್ಯಯನ, ಅಧ್ಯಾಪನ ಮಾಡಲು ಅನುಕೂಲವಾಗುವಂತೆ ಸುಂದರವಾದ ಪೆಟ್ಟಿಗೆಸಮೇತ ಸಂಸ್ಕೃತ - ದೇವನಾಗರೀ ಲಿಪಿಯಲ್ಲಿ ಪ್ರತಿಯೊಂದು ಪುಟ ಸಚಿತ್ರ ಮತ್ತು ವರ್ಣರಂಜಿತವಾಗಿ ಮುದ್ರಿಸಲಾಗಿದೆ.

ಶ್ರೀಕ್ಷೇತ್ರ ಮಳಖೇಡದಲ್ಲಿ ಶ್ರೀಜಯತೀರ್ಥರ ಸನ್ನಿಧಿಯಲ್ಲಿ, ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಶ್ರೀಗುರುಸಾರ್ವಭೌಮರ ಸನ್ನಿಧಿಯಲ್ಲಿ ಹಾಗೂ ಶ್ರೀಕ್ಷೇತ್ರ ಪಂಢರಪುರದಲ್ಲಿ ಶ್ರೀಸತ್ಯಧ್ಯಾನತೀರ್ಥರ ಸನ್ನಿಧಿಯಲ್ಲಿ ಪ್ರಕಾಶನಗೊಂಡು ಭಗವದ್ಭಕ್ತರ ಉಪಯೋಗಕ್ಕಾಗಿ ಸಿದ್ಧವಿದೆ.

ಭಗವದ್ಭಕ್ತರು ಈ ಗ್ರಂಥದ ಒಂದು ಪ್ರತಿ ತಮ್ಮ ಮನೆಯಲ್ಲಿ ಇಟ್ಟು ಪ್ರತಿದಿನ ಪೂಜೆಯನ್ನು ಮಾಡಿ ತಮ್ಮ ಶಕ್ತ್ಯನುಸಾರ ಪಾರಾಯಣಾದಿ ಮಾಡುತ್ತ ಇನ್ನೊಂದು ಪ್ರತಿಯನ್ನು ಯೋಗ್ಯ ವಿದ್ವಾಂಸರಿಗೆ ದಾನವನ್ನು ಕೊಟ್ಟು ಕೃತಾರ್ಥರಾಗಲು ಕೆಳಗೆ ನಮೂದಿಸಿದಂತೆ ಈ ಯೋಜನೆಯಲ್ಲಿ ಸಹಭಾಗಿಗಳಾಗಬಹುದು.

| | |
|---|---|
| ಎರಡು ಗ್ರಂಥಗಳು (ಸಾಲಂಕೃತ ಕಟ್ಟಿಗೆ ಪೆಟ್ಟಿಗೆ ಸಹಿತ) | ರೂ. 5001/- |
| ಒಂದು ಗ್ರಂಥ (ಸಾಲಂಕೃತ ಕಟ್ಟಿಗೆ ಪೆಟ್ಟಿಗೆ ಸಹಿತ) | ರೂ. 3001/- |
| ಎರಡು ಗ್ರಂಥಗಳು (ಕಾರುಗೇಟೇಡ್ ಪೆಟ್ಟಿಗೆ ಸಹಿತ) | ರೂ. 3000/- |
| ಒಂದು ಗ್ರಂಥ (ಕಾರುಗೇಟೇಡ್ ಪೆಟ್ಟಿಗೆ ಸಹಿತ) | ರೂ. 1600/- |



**ಸಂಪರ್ಕಿಸಿ:**



**ಧನಂಜಯ ವರಖೇಡಕರ**
**ಸುಧಾ ಮುದ್ರಣ**
ಉತ್ತರಾದಿಮಠದ ಆವರಣ
ಶಂಕರಪುರಮ್, ಬೆಂಗಳೂರು 560 004

**Dhananjay Warkhedkar**
**Sudha Mudrana**
Uttaradi Mutt Compound
Shankarpuram, Bangalore-4

**Mobile : 92430 74414**
**Office: 080 65602836 Residence: 080 26725340**
**email : nityasudha@rediffmail.com**

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.
Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧. ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨. ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩. 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವ-ಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪. 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫. ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬. ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭. ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮. ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯. ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

### ವಿಶೇಷ ಸೂಚನೆ :

೧. ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

೨. **80G** ಅನ್ವಯ ಆದಾಯ ತೆರಿಗೆ ವಿನಾಯಿತಿಯನ್ನು ಬಯಸುವವರು ನಮ್ಮ ಪ್ರತಿಷ್ಠಾನಕ್ಕೆ **''Sri Vyasa Madhwa Research Foundation (R)''** ಎಂಬ ಹೆಸರಿಗೆ ದೇಣಿಗೆ ನೀಡಬಹುದು.